# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ–2025

**ಹೊಸ ವರ್ಷದ ಶುಭಾಶಯಗಳು !**




# ಕಾಲಕ್ರಮೇಣ...!!!

ಬಿಡಿ ಪ್ರತಿ: ರೂ. 10/–

# Ravi Graphics

OFFSET PRINTERS

*Bringing colours alive*

***What we specialize into :***

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com



*Bag is everything*

# bag factory

bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in






# ಹೊಸ ವರ್ಷ 2025
# ಶುಭಾಶಯಗಳು





**Published on 3rd of every month.**
**Mailed at Patrika channel RMS Bhavan,**
**Bengaluru PSO, Mysore Road, Bengaluru – 560026**
**On 5th of every month.**

**REGISTERED KA/BGW/544/2025-2027**
**RNI No KARKAN/2005/15457**

www.mallige.com

Certificate No.: MC-2068




Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/-
ವಾರ್ಷಿಕ ಚಂದಾ : ರೂ. 100/-
ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ
ತಿಳಿನಗೆಯ ಕಾರಂಜಿ

**ಸಂಪುಟ 42**
**ಸಂಚಿಕೆ – 04**
**ಜನವರಿ– 2025**

## *ಈ ಸಂಚಿಕೆಯಲ್ಲಿ...*

| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಪ್ರೊ. ಕೆ.ಬಿ. ಪ್ರಭುಪ್ರಸಾದರೊಂದಿಗೆ | ನಾ ರಾಮಾನುಜ | 4 |
| ಕ್ಯಾಲೆಂಡರ್ ಎಂಬ ಗೋಡೆ ಆಭರಣ | ಕೆ.ಎಸ್.ಸೋಮೇಶ್ವರ | 6 |
| ಹೊಸ ವರ್ಷದ ರೆಸೆಲ್ಯೂಷನ್ಸ್ | ಸುಮನಾ | 9 |
| ತಲ್ಲಣಿಸದಿರು | ಎಚ್.ಗೋಪಾಲಕೃಷ್ಣ | 15 |
| ಪುರಾಣದ ನವ್ಯ ಕಥೆಗಳು | ಶಿವು | 20 |
| ಮಹನಿಯರುಗಳಿಗೆ ಕೃತಜ್ಞತೆಗಳು | | 22 |
| ಚಿತ್ರ ವಿಚಿತ್ರ ಅನುಭವಗಳು | ದೊಡ್ಡರಂಗೇಗೌಡ | 23 |
| ಬೆಂಗಳೂರು ಗುಂಡಿ ಸಿಟಿ (ಜಿ. ಎಸ್ಸಿ) | ಇ.ಆರ್. ರಾಮಚಂದ್ರನ್ | 25 |
| ತುಂತುರು | ದಂನಆ | 28 |
| ಹುಡುಗಾಟ ಆಡ್ತಿರೇನ್ರೀ, ಅವ್ವಾರ! | ವಿಲಾಸ ನಾ ಹುದ್ದಾರ | 29 |
| "ರಾಜಾ ಸೀಟಿನಿಂದ' | | 31 |
| ಇದು ಎಕ್ಕಡದ ವಿಸ್ಯಾ... | ರಾಜೇಶ್ವರಿ ಹುಲ್ಲೇನಹಳ್ಳಿ | 33 |
| ಶೋಕಾಚರಣೆ | ಸುಮಾ ರಮೇಶ್, ಹಾಸನ. | 38 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,
ಒಳಪುಟಗಳು : ರಾಂಕಿ ಬೆಳ್ಳೂರ್

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ನಮ್ಮ ಬಳಗದ ಎಲ್ಲರಿಗೂ ಹಾಗೂ ಓದುಗರಿಗೂ
ಅಪರಂಜಿಯ ಹೊಸ ವರ್ಷದ ಶುಭಾಶಯಗಳು !!

* * *

ಕರ್ನಾಟಕದ ಹಿರಿಯ ಚೇತನವಾಗಿದ್ದ ಎಸ್. ಎಂ. ಕೃಷ್ಣ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಅಪರಂಜಿ ಪ್ರಾರ್ಥಿಸುತ್ತಾಳೆ !

* * *

ಬಂಡೆಯಂತೆ ಸಿದ್ದರಾಮಯ್ಯ ಅವರ ಹಿಂದೆ ಡಿ.ಕೆ.ಶಿ !
ಅದು ಉರುಳದಿದ್ದರೆ ಕ್ಷೇಮ !!

* * *

ಮದುವೆ, ಶುಭ ಕಾರ್ಯಗಳಿಗೆ ನಮ್ಮ ಆಭರಣಗಳನ್ನೇ ಉಪಯೋಗಿಸಿ

ಜಾಹೀರಾತು

ಮದುವೆ ಮತ್ತಿತರ ಶುಭಕಾರ್ಯ ಅಂತ ಹೇಳಬೇಕು ಅಲ್ಲವೇ?!

* * *

ನುಗ್ಗೆ ಕಾಯಿ, ಬೆಳ್ಳುಳ್ಳಿ ಕೆ.ಜಿ ಗೆ 400 ರುಪಾಯಿ

ವಾಣಿಜ್ಯ ವಾರ್ತೆ

ಸಧ್ಯ, ಇವೆರಡೂ ನಮ್ಮ ಮನೇಲಿ ಬಳಕೆಯಲ್ಲಿ ಇಲ್ಲ !!

* * *

ಭಾರತಕ್ಕೆ ಮತ್ತೆ ತಲೆನೋವಾದ ಟ್ರಾವಿಸ್ ಹೆಡ್

ಕ್ರಿಕೆಟ್ ಸುದ್ದಿ

ಆಹಾ! ಸುದ್ದಿಗಾರರಿಗೆ ಅಪರಂಜಿಯ ಅಭಿನಂದನೆಗಳು !

* * *

ವಧು ಬಾರದೆ ವಿವಾಹ ರದ್ದು; ಪೋಲಿಸಿಗೆ ದೂರು

ಪತ್ರಿಕೆ

ಸಧ್ಯ ! ಬಚಾವಾದನಲ್ಲ ಬೆಪ್ಪ !

* * *

ಗೌಡರ ಕೋಟೆಯಲ್ಲಿ "ಕೈ" ಆರ್ಭಟ

ದಿನಪತ್ರಿಕೆ

ಕರ್ನಾಟಕದ ದುರದ್ರಿಸ್ಟ !!!

●

## ನಮ್ಮ ನಿಮ್ಮಲ್ಲಿ

**ಶಿವಕುಮಾರ್**

"ಯುಗ ಯಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ..." ಎನ್ನುವಂತೆ, 2025ರ ಗ್ರೆಗೋರಿಯನ್ ಯುಗಾದಿ ಬಂದೇಬಿಟ್ಟಿದೆ. ಈ ಶುಭ ಘಳಿಗೆಯಲ್ಲಿ ನಮ್ಮ ಬಳಗದ ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಅಪರಂಜಿ ತುಂಬು ಹೃದಯದಿಂದ ಕೋರುತ್ತಾಳೆ. ನವ ವರ್ಷ ಕಾಲಿಟ್ಟ ಮೇಲೆ ಹೊಸ ನಿರ್ಧಾರಗಳಿಗೇನು ಬರವೇ? ಅಪರಂಜಿಯೂ ಇದಕ್ಕೆ ಹೊರತಲ್ಲ. ಅಪರಂಜಿಯ ನ್ಯೂ ಇಯರ್ ರೆಸೊಲ್ಯೂಷನ್ ಬಗ್ಗೆ ಹೇಳುವ ಮುಂಚೆ ಸ್ವಲ್ಪ ಹಿನ್ನೆಲೆಯನ್ನ ತಿಳಿಸುವುದು ಸೂಕ್ತ ಅನ್ನಿಸುತ್ತದೆ. ಐವತ್ತರ ಹಾಗೂ ಅರುವತ್ತರ ದಶಕದಲ್ಲಿ ಇಂಗ್ಲೆಂಡಿನ ಪಂಚ್ ನಗೆ ವಾರಪತ್ರಿಕೆಯಲ್ಲಿ ಬಡ್ ಹ್ಯಾಂಡಲ್ಸ್‌ಮನ್ ಎಂಬ ವ್ಯಂಗ್ಯ ಚಿತ್ರಕಾರ ಬಹುವಾಗಿ ಖ್ಯಾತಿಯನ್ನು ಪಡೆದಿದ್ದ. ಈತ ಸೃಷ್ಟಿಸುತ್ತಿದ್ದ "ಫ್ರೀಕೀ ಫೇಬಲ್ಸ್" ಎಂಬ ಸ್ಟ್ರಿಪ್ ಕಾರ್ಟೂನುಗಳಂತೂ ಯೂರೋಪಿನಲ್ಲೆಲ್ಲಾ ಪ್ರಸಿದ್ಧವಾಗಿತ್ತು. ಗ್ರೀಕ್ ಪುರಾಣಗಳ ಕಥೆಗಳನ್ನಾಧರಿಸಿ ಅವುಗಳನ್ನು ಗೇಲಿ ಮಾಡಿ ರಚಿಸಿದ ವ್ಯಂಗ್ಯ ಚಿತ್ರ ಸರಣಿ ಫ್ರೀಕೀ ಫೇಬಲ್ಸ್. ಆಗ ಕಾಲೇಜು ವಿದ್ಯಾರ್ಥಿಯಾಗಿದ್ದ ನಾನು ಬಡ್‌ನ ವ್ಯಂಗ್ಯಚಿತ್ರಗಳಿಗೆ ಮಾರುಹೋದೆ. ಮುಂದೆ ಅಪರಂಜಿಯ ಸಾರಥ್ಯವನ್ನು ವಹಿಸಿಕೊಂಡ ನಂತರ ಇಂತಹ ವ್ಯಂಗ್ಯ ಚಿತ್ರಗಳನ್ನು ಅಪರಂಜಿಯಲ್ಲೂ ಪ್ರಕಟಿಸಬಾರದೇಕೆ ಅನ್ನಿಸಿದ್ದು ನಿಜ. ಆದರೆ ಆಗ ನಮಗಿದ್ದ ಮುಖ್ಯ ಕೊರತೆಯೆಂದರೆ ಪ್ರತಿಭಾವಂತ ವ್ಯಂಗ್ಯ ಚಿತ್ರಕಾರರದ್ದು. ಇದ್ದವರಿಂದಲೇ ಒಂದೆರಡು ಸ್ಟಿಪ್‌ಗಳನ್ನು ಬರೆಸಿದ್ದಾಯಿತು. ಇದೆಲ್ಲಾ ನಡೆದದ್ದು ಎಂಭತ್ತರ ದಶಕದಲ್ಲಿ. ಈಗ ಉತ್ಸಾಹೀ ತರುಣ ರಾಮಕೃಷ್ಣ (ರಾಂಕೀ) ಈ ಸ್ಟಿಪ್‌ಗಳ ರಚನೆಯಲ್ಲಿ ಸಾಥ್ ನೀಡಲು ಮುಂದೆ ಬಂದಿದ್ದಾರೆ. ನಮ್ಮ ಪುರಾಣದ ಅಥವಾ ಪಾರಂಪರಿಕ ಕಥೆಗಳನ್ನು ಆರಿಸಿ ಅವುಗಳಿಗೆ ಗೇಲಿಯ ಮೆರಗನ್ನು ನೀಡಿ ಪ್ರತಿ ತಿಂಗಳೂ ಒಂದು ಸರಣಿ ಚಿತ್ರಮಾಲೆಯನ್ನು ನೀಡುವುದು ನಮ್ಮ ಘನ ಉದ್ದೇಶ. ಇದೇ ನಮ್ಮ ನ್ಯೂ ಇಯರ್ ರೆಸೊಲ್ಯೂಷನ್ ಸಹಾ. ಮುಗಿಸುವ ಮುನ್ನ ಬಡ್ ಹ್ಯಾಂಡಲ್ಸ್‌ಮನ್ ನ ಎರಡು ವ್ಯಂಗ್ಯ ಚಿತ್ರಗಳು ನಿಮ್ಮ ಅವಗಾಹನೆಗೆ. ಹ್ಯಾಪಿ ನ್ಯೂ ಇಯರ್ 2025! ■




" ನೀವು ಎಷ್ಟು ನೀಟಾಗಿ ಡ್ರೆಸ್ ಮಾಡ್ಕೊಂಡು ಚೆನ್ನಾಗಿ ಕಾಣಿಸ್ತೀರ ಮೇಡಮ್. ಎಷ್ಟೋ ಜನ ಹೆಂಗಸರು ಸ್ವರ್ಗವಾಸಿಗಳಾದ ತಕ್ಷಣ , ಬೇಕಾ ಬಿಟ್ಟಿಯಾಗಿ ಇದ್ಬಿಡ್ತಾರೆ !"




" ನಾನು ಡಾಫೇನ್. ಕಥ್‌ಬರ್ಟ್‌ನ ಮೊದಲನೇ ಹೆಂಡತಿ. ಒಂದು ಐದು ನಿಮ್ಷ ನಾನು ಒಳಗೆ ಬಂದು ಕಥ್‌ಬರ್ಟ್‌ನ ಉಗಿದುಬಿಟ್ಟು ಹೋಗಬಹುದೇ?"

# ಪ್ರೊಫೆಸರ್ ಕೆ.ಬಿ. ಪ್ರಭುಪ್ರಸಾದರೊಂದಿಗೆ ಆ ಒಂದು ಭಾನುವಾರದ ಬೆಳಿಗ್ಗೆ

ನಾ ರಾಮಾನುಜ



[ಪ್ರೊಫೆಸರ್ ಪ್ರಭುಪ್ರಸಾದ್ ಇನ್ನಿಲ್ಲ. ಕೊರವಂಜಿಯ ಯುವ ಬರಹಗಾರರಲ್ಲಿ ಒಬ್ಬರಾಗಿದ್ದ ಶ್ರೀಯುತರು ನಾ. ಕಸ್ತೂರಿ, ಹಾಗೂ ಆರ್.ಕೆ.ಲಕ್ಷ್ಮಣ್ ಇವರುಗಳ ಒಡನಾಡಿಯಾಗಿದ್ದರು. ಗೆಳೆಯ ರಾಮಾನುಜ ಅವರು ಇಲ್ಲಿ ಪ್ರಭುಪ್ರಸಾದರ ನನಪುಗಳನ್ನು ಹಂಚಿಕೊಂಡಿದ್ದಾರೆ. ]

1956 ರಿಂದ 58ರ ವರೆಗೆ ಯುವರಾಜಾಸ್ ಕಾಲೇಜಿನಲ್ಲಿ ನಾನು ಎರಡು ವರ್ಷದ ಅಂದಿನ ಇಂಟರ್ ಮೀಡಿಯೇಟ್ ನ ಓದುತ್ತಿದ್ದಾಗ ಪ್ರೊ. ಕೆ.ಬಿ. ಪ್ರಭುಪ್ರಸಾದರು ನಮ್ಮ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದರು. ಅದು ಎರಡು ಇಂಟರ್ ಮೀಡಿಯೇಟ್‌ನ ಕೊನೆಯ ಬ್ಯಾಚ್ ಆಗಿತ್ತು. ದಾವಣಗೆರೆಯವರಾದ ಪ್ರೊ. ಕೆ.ಬಿ.ಪ್ರಭುಪ್ರಸಾದರು ಅತ್ಯಂತ ವಿನಯ ಪೂರ್ಣ, ಸಭ್ಯ, ಸುಸಂಸ್ಕೃತ ವ್ಯಕ್ತಿ. ಅತ್ಯಂತ ಉತ್ತಮ ಶಿಕ್ಷಕ ಹಾಗೂ ಉತ್ತಮ ಸುಗಮ ಸಂಗೀತ ಗಾಯಕ. ಆ ಸಮಯದಲ್ಲಿ ಅವರು ಮೈಸೂರಿನಲ್ಲಿ ನೆಲೆಸಿದ್ದರು.

ಆ ದಿನಗಳು, ಅಂದಿನ ಘಟನೆಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅತ್ಯಂತ ಹಸಿರಾಗಿ ಉಳಿದಿವೆ. ಆ ದಿನಗಳಲ್ಲಿ ನಾನು 15–16ರ ಹರೆಯದಲ್ಲಿದ್ದು ಒಬ್ಬ ಉದಯೋನ್ಮುಖ ಲೇಖಕನಾಗಿದ್ದೆ!! ಆಗ ನನ್ನ ಗೆಳೆಯ ಕೆ.ಎನ್. ಕಿಟ್ಟನ್ ನನ್ನ ಹಿರಿಯ ಹಾಗೂ ಉತ್ತಮ ಲೇಖನಾಗಿದ್ದೆ. ಆತನ ಅನೇಕ ಬರಹಗಳು ಅಂದಿನ ನನ್ನ ಪೂಜನೀಯ ದಾ॥ ರಾಶಿಯವರ ಸುಪ್ರಸಿದ್ಧ ಕೊರವಂಜಿ ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಆಗ ಅದೇ ಪತ್ರಿಕೆಯಲ್ಲಿ ನನ್ನ ಹಾಸ್ಯ ಲೇಖನಗಳು ಸಹ ಪ್ರಕಟವಾಗಲು ಆರಂಭವಾಗಿತ್ತು.

ಪ್ರೊ. ಪ್ರಭುಪ್ರಸಾದರು ಖ್ಯಾತ ವ್ಯಂಗಚಿತ್ರಕಾರ ಶ್ರೀ ಆರ್.ಕೆ.ಲಕ್ಷ್ಮಣ್ ಅವರ ಸಹಪಾಠಿ. ಮುಂದೆ ಅವರು ದಾವಣಗೆರೆಯಲ್ಲಿ ಶಿಕ್ಷಕರಾಗಿದಾಗ, ಅವರ ವಾಕಿಂಗ್ ಜೊತೆಗಾರರು ಮುಂದೆ ರಾಷ್ಟ್ರಕವಿಗಳಾದ ಶ್ರೀ ಜಿ.ಎಸ್. ಶಿವರುದ್ರಪ್ಪನವರು ಮತ್ತು ನಾ. ಕಸ್ತೂರಿಯವರು! ಆ ನಡಿಗೆಸಮಯದಲ್ಲಿ ಅಲ್ಲಿನ ಒಂದು ದಿಬ್ಬದ ಮೇಲೆ ಕುಳಿತುಕೊಳ್ಳುವುದು ಅತ್ಯಂತ ಪ್ರಿಯ ಹವ್ಯಾಸ. ಆ ದಿಬ್ಬದ ಮೇಲೆಯೇ ಕುಳಿತು ಅನೇಕ ಇಂದಿನ ದಿನಗಳಲ್ಲಿಯೂ ಜನಪ್ರಿಯವಾದ 'ಎದೆ ತುಂಬಿ ಹಾಡಿದೆನು' ಮತ್ತು ಇನ್ನಿತರ ಗೀತೆಗಳನ್ನು ಹಾಡುತ್ತಿದ್ದರಂತೆ. ಅಲ್ಲದೇ ಅವರು ಕೊರವಂಜಿಯಲ್ಲಿ 'ದಿಬ್ಬಯ್ಯ'!!! ಎನ್ನುವ ಗುಪ್ತನಾಮದಲ್ಲಿ ಹಾಸ್ಯ

ಕವಿತೆಗಳನ್ನು ಬರೆಯುತ್ತಿದ್ದರು. ಅಂದಿನ ದಿನಗಳಲ್ಲಿ ಕನ್ನಡ ಹಾಸ್ಯಲೇಖಕರರಲ್ಲಿ ಮುಂಚೂಣಿಯಲ್ಲಿದ್ದ ನಾ. ಕಸ್ತೂರಿಯವರು ಸಹ ಪ್ರೊ. ಪ್ರಭುಪ್ರಸಾದರ ಸಹೋದ್ಯೋಗಿ. ಜಿಎಸೆಸ್ ಅವರ ಹಾಸ್ಯ ಕವಿತೆಗಳಿಗೆ ನಾ ಕಸ್ತೂರಿಯವರು ಸ್ಫೂರ್ತಿ ಎನ್ನುವುದನ್ನು ನಾನು ಕೇಳಿದ್ದೇನೆ.

ಒಂದು ದಿನ ಉದಯೋನ್ಮುಖ ಬರಹಗಾರರಾಗಿದ್ದ ನಾವು ಒಂದು ಕಿರಿಯ ಲೇಖಕರ ಸಮ್ಮೇಳನವನ್ನು ಮಹಾಜನ ಹೈಸ್ಕೂಲ್ ನಲ್ಲಿ ಏರ್ಪಡಿಸಿದ್ದೆವು!!. ಕಿಟ್ಟಿನ್ ಸಲಹೆಯ ಮೇರೆಗೆ ಪ್ರೊ. ಪ್ರಭುಪ್ರಸಾದರು ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಂದು ಬೆಳಿಗ್ಗೆ ಒಂಟಿಕೊಪ್ಪಲಿನ ಸುಪ್ರಸಿದ್ಧ ಆನಂದಭವನದಲ್ಲಿ ಎಲ್ಲರೂ ಎಂಟಾಣೆ ಕೊಟ್ಟು ಜಾಮೂನು, ಖಾರಾಸೇವೆ ಮತ್ತು ಕಾಫಿ ಸೇವಿಸಿ ಮಹಾಜನ ಹೈಸ್ಕೂಲ್ ಕಡೆಗೆ ನಡೆದು ಕೊಂಡೇ ಹೋದೆವು. ನಮ್ಮ ಸಮ್ಮೇಳನ ಮಧ್ಯಾಹ್ನದವರೆಗೆ ಆಯೋಜಿತವಾಗಿತ್ತು. ನಾವೆಲ್ಲರೂ ನಮ್ಮ ನಮ್ಮ ಲೇಖನಗಳ ಪ್ರಕಟಣೆಯ ಅನುಭವಗಳನ್ನು ಹಂಚಿಕೊಂಡೆವು. ಆಗ ಮಾತನಾಡಿದ ಪ್ರೊ. ಪ್ರಭುಪ್ರಸಾದರು ನಮಗೆ ಇನ್ನೂ ಹೆಚ್ಚಿನ ಉತ್ಸಾಹದೊಂದಿಗೆ, ಮುಂದಿನ ದಿನಗಳಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಳ್ಳುವಂತೆ ಅನೇಕ ಸಲಹೆಗಳನ್ನು ನೀಡಿ ಹುರಿದುಂಬಿಸಿದರು. ಮರೆಯಲಾಗದ ಆ ಸಮಯದಲ್ಲಿ ನಡೆದ ಒಂದು ಪ್ರಸಂಗ ಈಗಲೂ ನನಗೆ ನಗು ತರಿಸುತ್ತದೆ. ಆ ಸಮ್ಮೇಳನಕ್ಕೆ ಖ್ಯಾತ ಲೇಖಕ, ಕುವೆಂಪು ಅವರ ಪುತ್ರ ಹಾಗೂ ಪರಿಸರಪ್ರೇಮಿ ಪೂರ್ಣಚಂದ್ರ ತೇಜಸ್ವಿ ಸಹ ಬಂದಿದ್ದರು. ಹದಿಹರೆಯದ ಸಾಹಿತಿಗಳಾಗಿದ್ದ ನಮ್ಮ ಬಗ್ಗೆ ಅವರಿಗೆ ಸ್ವಲ್ಪ ಅಸಡ್ಡೆಯೇ ಇತ್ತು. ಹೀಗೆ ಯಾವುದೋ ಒ0ದು ಕಾರಣಕ್ಕೆ ಅಂದು ಅವರಿಗೆ ಮತ್ತು ನನ್ನ ಹಿರಿಯ ಗೆಳೆಯ ಕಿಟ್ಟಿನ್ ಗೆ ವಾಗ್ವಾದ ಶುರುವಾಯಿತು. ಪೂರ್ಣಚಂದ್ರ ತೇಜಸ್ವಿಯವರನ್ನು ಕಿಟ್ಟಿನ್ ಹಾಸ್ಯದಿಂದ ಕಿಚಾಯಿಸಿದ್ದು ನಮಗೆ ಬಹಳ ತಮಾಷೆಯಾಗಿತ್ತು. ಪರಿಸರದ ಹಾಗೂ ಕೆಲವು ಅಪರೂಪದ ಪ್ರಾಣಿಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದ ತೇಜಸ್ವಿ ಅವರನ್ನು ಕಿಟ್ಟಿನ್ 'ಹೋಗು ಹೋಗು ಹೆಂಟೆಗೊದ್ದ ಕಪ್ಪೆಗಳನ್ನು ಬೇಟೆಯಾಡು. ನಿಮ್ಮ ತಂದೆಯವರು ಬರೆದಿರುವ 'ಟುವ್ವಿ ಟುವ್ವಿ' ಹಾಡು ಹೇಳಿಕೋ' ಅಂತ ಹೇಳಿಬಿಟ್ಟ. ಇದರಿಂದ ಕೆರಳಿದ ತೇಜಸ್ವಿಯವರು ಸಿಟ್ಟಿನಿಂದ ಹೊರನಡೆದರು. ಆಗ ಕಿಟ್ಟಿನ್ ತಕ್ಷಣ 'ಲಿಂಗ ಬಂದ ಲಿಂಗ ಹೋದ' ಅಂತ ಹೇಳಿ ಅವರನ್ನು ಇನ್ನೂ ಕೆರಳಿಸಿದ್ದ. 'ಲಿಂಗ ಬಂದ' ಪೂರ್ಣಚಂದ್ರ ತೇಜಸ್ವಿಯವರಿಗೆ ಪ್ರಜಾವಾಣಿಯ ದೀಪಾವಳಿ ಸಂಚಿಕೆಯಲ್ಲಿ ಕಥಾಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿಕೊಟ್ಟಿದ್ದ ಕಥೆ!!!

ಈ ಸಮ್ಮೇಳನದ ವರದಿ ಪ್ರಜಾವಾಣಿಯಲ್ಲಿಯಲ್ಲಿ ಸಹ ಬಂದಿತ್ತು.

ಆ ನಮ್ಮ ಕಿರಿಯ ಸಾಹಿತಿಗಳ ಸಮ್ಮೇಳನ, ಪ್ರೊ. ಪ್ರಭುಪ್ರಸಾದರೊಂದಿಗೆ ಕಳೆದ ಆ ಬೆಳಿಗ್ಗೆ ಮತ್ತು ಮೇಲಿನ ಘಟನೆ ಈಗಲೂ ನನ್ನ ಸ್ಮೃತಿ ಪಟಲದಲ್ಲಿ ಹಸಿರಾಗಿದೆ. 64 ವರ್ಷಗಳ ಹಿಂದಿನ ಆ ನೆನಪುಗಳು ಈಗಲೂ ನನಗೊಂದು 'ಹಾಸ್ಯಮಯ ಕನಸಿನ ಲೋಕ'. ಸಮಯದ ಗತಿ ಅದೆಷ್ಟು ವೇಗ !!! ■

---

ಶ್ರೀ ಪ್ರಭುಪ್ರಸಾದರು ಸರ್ವಜ್ಞ, ಭಾರತೀಯ ಸಾಹಿತ್ಯ ನಿರ್ಮಾಪಕರು, ದೇಗುಲಗಳ ದಾರಿಯಲ್ಲಿ, ರಂಗ ಅಂತರಂಗ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಇತ್ತೀಚೆಗೆ ಅವರು ಅಲ್ಲಮಪ್ರಭುವಿನ ವಚನಗಳನ್ನು ಇಂಗ್ಲಿಷಿಗೆ ಭಾಷಾಂತರಿಸುವ ಕೆಲಸವನ್ನು ಸಮರ್ಪಕವಾಗಿ ಮಾಡಿ ಮುಗಿಸಿದ್ದರು.

# ಕ್ಯಾಲೆಂಡರ್ ಎಂಬ ಗೋಡೆ ಆಭರಣ

ಕೆ.ಎಸ್.ಸೋಮೇಶ್ವರ


ನೀರಿಗೆ ನೈದಿಲೆ ಶೃಂಗಾರ ಅಂತ ಒಬ್ಬ ಮಹಾಶಯ ಹೇಳಿದರೆ ಇನ್ನೊಬ್ಬ ಹೆಣ್ಣಿಗೆ ಆಭರಣವೇ ಶೃಂಗಾರ ಅಂದನಂತೆ. ಅದೆಲ್ಲ ಬಿಡಿ, ಕ್ಯಾಲೆಂಡರ್ ಎಂಬುದು ಎಲ್ಲಿಗೆ ಶೃಂಗಾರ? ಇದನ್ನು ಮನೆಯನ್ನು ಸಿಂಗರಿಸುವ ಒಳಾಂಗಣ ವಿನ್ಯಾಸಕಾರಿಣಿಯರನ್ನು ಕೇಳಬೇಕು. ಏಕೆಂದರೆ, ಈ ವಿಷಯದಲ್ಲಿ ಗಂಡಸರು ಹಿಂದುಳಿದವರು ಮತ್ತು ಅವರಿಗೆ ಟೇಸ್ಟೇ ಇರಲ್ಲ. ಆದ್ರೆ, ಇವರೆಲ್ಲ ಹುಟ್ಟುವ ಮೊದಲೇ ಹಲ ವಿಧದ ಕ್ಯಾಲೆಂಡರುಗಳು ಎಲ್ಲರ ಮನೆಯ ಗೋಡೆಗಳ ಮೇಲೂ ರಾರಾಜಿಸಿವೆ. ಹಜಾರದಿಂದ ಮೊದಲಾಗಿ ಮಲಗುವ ಕೋಣೆಯೂ ಸೇರಿ, ದೇವರ ಕೋಣೆಗೂ ಅವು ಲಗ್ಗೆ ಹಾಕಿರುವುದು ಸುಳ್ಳಲ್ಲ. ಹಜಾರದಲ್ಲಿ ದೊಡ್ಡ ಅಂಕೆಗಳುಳ್ಳ, ಸ್ಫುಟವಾಗಿ ವಾರಗಳನ್ನು ಅಚ್ಚು ಹಾಕಿರುವ ಪುಟಗಳು 'ನಾನು ನಾನೇ ನಿನಗೆ ನಾನೇ' ಎನ್ನುತ್ತ ಗೋಡೆಯ ಮೇಲೆ ಕುಣಿದಾಡುತ್ತಿರುತ್ತವೆ. ಇದನ್ನು ಸ್ವಲ್ಪ ಒಳಾಂಗಣ ವಿನ್ಯಾಸಕ್ಕೆ ಮ್ಯಾಚ್ ಮಾಡಲು ಆಕರ್ಷಕ ಚಿತ್ರಣಗಳು. ಅದರಲ್ಲೂ ಬಳುಕುವ ರೂಪದರ್ಶಿಯರು ನಮ್ಮಗಳ ಕಣ್ಣ ಮುಂದೆಯೇ ಬಳುಕುವೆ ಅಪ್ಸರೆಯಾಗಿರುತ್ತಾರೆ. ಇವರನ್ನು ಮಾತ್ರ ನೊಡಿದರೆ ಸಾಕೇ? ನಮ್ಮ ದೇವಾನುದೇವತೆಗಳೂ ಸಹ ಕ್ಯಾಲೆಂಡರುಗಳಲ್ಲಿ ವರ್ಣ ವರ್ಣವಾಗಿ ನಮಗೆ ಅಭಯ ಹಸ್ತ ನೀಡುತ್ತಿರುತ್ತಾರೆ. ಇವರುಗಳೆಲ್ಲ ದೇವರ ಕೋಣೆಯಲ್ಲಿ ಇದ್ದರೆ ಸೇಫ್ ಎಂದು ಅಲ್ಲಿ ಅಲಂಕಾರಭೂಷಿತರಾಗಿ ನಗುನಗುತ್ತ ಇರುತ್ತಾರೆ.

ಹೀಗೆ, ಇತಿಹಾಸ ಪುರುಷ/ಪುರುಷಿಯಾಗಿರುವ ಕ್ಯಾಲೆಂಡರ್ ಈಗಲೂ ನಾನಾ ವಿಧದಲ್ಲಿ ನಮ್ಮ ನಿಮ್ಮ ಮನೆಗಳಲ್ಲಿ ನೇತಾಡುತ್ತಿರುತ್ತವೆ. 'ನಮ್ಮಯ ಕೃಷ್ಣನ ಕಂಡಿರೇನಮ್ಮ' ಎನ್ನುವಂತೆಯೇ ಇಲ್ಲ. ಏಕೆಂದರೆ ಈ ಕಳ್ಳಕೃಷ್ಣ ಯಾರಿಗೂ ಬೇಸರ ಮಾಡದೇ ಎಲ್ಲರ ಮನೆಯಲ್ಲೂ ಗೋಡೆಗಳ ಮೇಲೆ ಕುಣಿದಾಡುತ್ತಿರುತ್ತಾನೆ. ನಮಗೆಲ್ಲ ತಿಳಿದಿರುವಂತೆ ನಾವು ಯುಗಾದಿಯನ್ನು ನವಸಂವತ್ಸರವಾಗಿ ಆಚರಿಸಿ, ವಸಂತಮಾಸವನ್ನು ಸ್ವಾಗತಿಸುತ್ತೇವೆ. ಆದರೆ ವ್ಯಾವಹಾರಿಕವಾಗಿ ವಿಶ್ವದೆಲ್ಲೆಡೆ ಪ್ರಚಲಿತವಿರುವ ಆಂಗ್ಲ ವರುಷ ಅಂದರೆ ಜನವರಿ ಒಂದರಂದು ಹೊಸ ವರ್ಷವನ್ನು ಬರಮಾಡಿಕೊಳ್ಳುತ್ತೇವೆ. ಅದಕ್ಕೆ ಹಿಂದಿನ ಡಿಸೆಂಬರ್ 31ರ ರಾತ್ರಿಯೇ ಬೀದಿಬೀದಿಗಳಲ್ಲಿ ಕುಣಿದು ಕುಪ್ಪಳಿಸಿ ಬರಮಾಡಿಕೊಳ್ಳುತ್ತೇವೆ. ಇದಕ್ಕೆ ಅಪವಾದವೆಂಬಂತೆ 2021 ಬಹಳ ನಿಶ್ಶಬ್ದವಾಗಿ ಬಂದು ಸೇರಿತು.

ಲಾಗಾಯ್ತಿನಿಂದ ಹನ್ನೆರಡು ಪುಟಗಳ ಕ್ಯಾಲೆಂಡರ್‌ಗಳು ನಮ್ಮ ನಿಮ್ಮೆಲ್ಲರ ಮನೆ, ಕಛೇರಿಗಳಲ್ಲಿ ದಪ್ಪ ಮೊಳೆಗಳಲ್ಲಿ ತೂಗಾಡುತ್ತ ಇದ್ದೇ ಇವೆ. ಮೊದ ಮೊದಲು ಬರಿಯ ದಿನಾಂಕ, ವಾರ ಇವುಗಳಷ್ಟೇ ಇರುತ್ತಿತ್ತು. ನಂತರದಲ್ಲಿ ಇದಕ್ಕೆ ಪೂರಕವಾಗಿ ನಮ್ಮ ಪಂಚಾಂಗಗಳಲ್ಲಿನ ತಿಥಿ, ನಕ್ಷತ್ರ, ಹಬ್ಬ ಹರಿದಿನಗಳು ಕೂಡ ಇವುಗಳಲ್ಲಿ ಅಡಕವಾಗಿರುತ್ತವೆ. ಜೊತೆಗೆ ರಾಹುವಿನಿಂದ ಮೊದಲಾಗಿ ಯಮಗಂಡ ಕಾಲ ಕೂಡ. ಇವರಿಬ್ಬರಲ್ಲಿ ಯಾರು ಹೆಚ್ಚು ಕಂಟಕಪ್ರಾಯರೋ ಆ ನಿಯಾಮಕನೇ ಹೇಳಬೇಕು. ಜೊತೆಗೆ ಸರಕಾರಿ ರಜಾದಿನಗಳು ಮತ್ತು ಕೆಲವು ಕ್ಯಾಲೆಂಡರುಗಳಲ್ಲಿ ಒಂದು ಪಕ್ಕದಲ್ಲಿ ನಮ್ಮ ವಿಶೇಷ ದಿನಚರಿಗಳನ್ನು ಗುರುತು ಮಾಡಿಕೊಳ್ಳುವ ಸೌಕರ್ಯ ಕೂಡ ಇರುತ್ತದೆ.

ಕಾಲ ಕಳೆದಂತೆ, ಇವೂ ಸ್ವಲ್ಪ ಹಗುರವಾಗಿರಲು ಆರು, ನಾಲ್ಕು ಪುಟಗಳಿಗೂ ದೇಹವನ್ನು ಬದಲಾಯಿಸಿಕೊಂಡು ಮೊಳೆಗಳ ಭಾರವನ್ನು ಕಡಿಮೆ ಮಾಡಲೂ

ಆರಂಭಿಸಿದವು.  ಇನ್ನು ಕೆಲವು ಇವುಗಳ ಗೊಡವೆಯೇ ಬೇಡ ಎಂದು ಪುಟ್ಟದಾಗಿ ರೂಪಿತವಾಗಿ ನಮ್ಮ ಮನೆಗಳ ಕಪಾಟು ಇಲ್ಲ ಸ್ಟ್ಯಾಂಡ್‌ಗಳ ಮೇಲೆ ಅಲಂಕೃತಗೊಳ್ಳುತ್ತಿದ್ದವು. ಇದ್ದವು ಅಲ್ಲ, ಈಗಲೂ ಇವೆ.




ಬರಿಯ ಇಷ್ಟೇ ಆದರೆ ಇದಕ್ಕೆ  ಏನು ಬೆಲೆ?  ಈ ನಂಬರುಗಳೆಲ್ಲ ಬರಿಯ ಅಂಕೆಗಳಷ್ಟೇ. ಕೆಲವೊಮ್ಮೆ ನಮಗೆ ಬೇಕಾದ ದೇವಾನು ದೇವತೆಗಳು ಬಣ್ಣದ ಚಿತ್ರಗಳ ಮೂಲಕ ವಿವಿಧ ಭಾವ ಭಂಗಿಗಳಲ್ಲಿ ನಮಗೆ ಆಶೀರ್ವದಿಸುತ್ತಿರುತ್ತಾರೆ. ನಮ್ಮ ಪುರಾಣದ ಉಲ್ಲೇಖ ತೆಗೆದುಕೊಂಡರೆ ದೇವತೆಗಳ ಸಂಖ್ಯೆ ಮುವತ್ತು ಮೂರು ಕೋಟಿ. ಬಹುಶಃ ಸೃಷ್ಟಿಕರ್ತ ಬ್ರಹ್ಮ ಮತ್ತು ನಮ್ಮ ರಿಟರ್ನ್  ಜರ್ನಿ ಮಾಡಿಸುವ ಯಮಧರ್ಮ ಇವರಿಬ್ಬರ ಪಟಗಳು ಅಪರೂಪ, ಅಲ್ಲ, ಕಾಣಸಿಗುವುದಿಲ್ಲ. ಇವರಿಬ್ಬರ ದರುಶನ ನಮಗೆ ಬರಿಯ ಚಲನಚಿತ್ರಗಳಲ್ಲಿ ಮಾತ್ರ. ಅದರಲ್ಲೂ ಚೌಕಾಸಿ. ಬ್ರಹ್ಮನಿಗೆ ಅಕ್ಕಪಕ್ಕ ತಲೆಗಳಿಟ್ಟು ಒರಿಜಿನಲ್ ಪ್ರಾಡಕ್ಟ್ ಗೊತ್ತೇ ಆಗಲ್ಲ. ಯಮನಾದರೆ ನಮ್ಮ ಅಂಬರೀಷಣ್ಣನವರೋ ಇಲ್ಲ ದೊಡ್ಡಣ್ಣನವರೋ ಆಗಿರುತ್ತಾರೆ. ಸಧ್ಯ ಯಾರನ್ನೂ ಒರಿಜಿನಲ್ ಆಗಿ ಕಂಡಿಲ್ಲ. ಹಾಗೇನಾದರೂ ಆಗಿದ್ದಿದ್ದರೆ ಕ್ಯಾಲೆಂಡರುಗಳ ಕಲರವವೇ ಇರುತ್ತಿರಲಿಲ್ಲ

ಇದಿಷ್ಟೇ ಆದರೆ ಸಾಲದು. ನಾವು ಮನುಷ್ಯರು ನೋಡಿ!  ಆಸೆಯೆಂಬ ದೊಡ್ಡ ಆಶಾ ಪಾಕದಲ್ಲಿ ಈಜಾಡುತ್ತಿರುತ್ತೀವಿ. ಹೀಗಾಗಿ ಅನೇಕ ಚಿತ್ತಾಕರ್ಷಕ ಚಿತ್ರಗಳೂ ವಿರಾಜಮಾನವಾಗಿರುತ್ತವೆ. ಇದನ್ನು ಸಂಪೂರ್ಣವಾಗಿ ಆದಾಯ ಮಾಡಿಕೊಳ್ಳಲು ಕೆಲವು ಸಂಸ್ಥೆಗಳು ತಮ್ಮ ಸಾಮಗ್ರಿಗಳ ಮಾರುಕಟ್ಟೆ ಉತ್ತೇಜನಕ್ಕೆ ಮನಮೋಹಕ ಚಿತ್ರಗಳನ್ನು

ಬಣ್ಣಬಣ್ಣಗಳಲ್ಲಿ ಮುದ್ರಿಸಿ ಕೊಡುತ್ತಾರೆ. ಇಲ್ಲಿ ಮನಮೋಹಕ ರೂಪದರ್ಶಿಯರೇ ಅವರ ಸರಕು. ಅವರ ನಿಜವಾದ ಪದಾರ್ಥ ಹೇಗಿರತ್ತೋ ಅವರಿಗೇ ಗೊತ್ತಿರಲ್ಲ ಆದರೆ, ಈ ರೂಪ ಲಾವಣ್ಯವತಿಯರು ಅದರ ಆಶಯಗಳನ್ನು ಬೊಗಸೆ ತುಂಬಾ ಕೊಡುತ್ತಾರೆ. ಇಲ್ಲಿ ರೂಪದರ್ಶಿಯರೇ ಏಕೆಂದರೆ ನಮ್ಮ ಜನಗಳಿಗೆ ಅವರುಗಳ ಮೇಲೆ ಅಪಾರ ಮಮತೆ. ಗಂಡು ರೂಪದರ್ಶಿಗಳು? ಇದೊಂದು ಪ್ರಶ್ನೆಯೇ ಅಲ್ಲ. ಅವರೂ ಆ ಕ್ಯಾಲೆಂಡರುಗಳ ರೂಪಸಿಯರನ್ನು ನೋಡುತ್ತ ಬಾಯಿ ಚಪ್ಪರಿಸಬೇಕೇನೋ? ಇಲ್ಲಿ ಚಲನಚಿತ್ರ ತಾರೆಯರ ಅನಾವರಣವೇನೂ ಕಡಿಮೆಯಿಲ್ಲ.

ಇದರ ಮುಂದುವರಿದ ದೊಡ್ಡ ಭಾಗವೆಂದರೆ ರೂಪದರ್ಶಿಗಳನ್ನು ಬಳಸಿಕೊಳ್ಳುವ ಒಂದು ಕಲಾ ಪ್ರಪಂಚ. ಈಗಾಗಲೇ ಇವರ ಬಗ್ಗೆ ಹೇಳಿದೆ. ಆದರೆ, ರೂಪದರ್ಶಿಗಳಿಗಾಗಿಯೇ ತಯಾರಿಸುವ ಕ್ಯಾಲೆಂಡರಿನ ಚರಿತ್ರೆಯನ್ನು ಚಿಕ್ಕದಾಗಿ ಹೇಳಬಹುದು. ಉಳಿದಿದ್ದೆಲ್ಲ ನೀವು ಓದುಗರೇ ನಿಮ್ಮ ಕಲ್ಪನಾಲೋಕದ ಕುದುರೆಯನ್ನು ಏರಿ ಜೈತ್ರಯಾತ್ರೆಯನ್ನು ಮಾಡಬಹುದು. ಕಟ್ಟಿ ಹಾಕಲು ಯಾವ ಬಭ್ರುವಾಹನನೂ ಬರಲ್ಲ. ಏಕೆಂದರೆ, ಈ ಅಧುನಿಕ ಬಭ್ರುವಾಹನರಿಗೆ ಅವರದೇ ಕನಸಿನ ಕುದುರೆ ಕಾಯುತ್ತಿರುತ್ತದೆ.

ಈ ನಿಟ್ಟಿನಲ್ಲಿ ಪ್ರಮುಖವಾಗಿ ಇರುವುದು ಡೆಬೊನೇರ್ ಎಂಬ ಆಂಗ್ಲ ಪತ್ರಿಕೆ. ಇದು ಹಲವಾರು ದಶಕಗಳಿಂದ ಪಡ್ಡೆ ಹುಡುಗರ ಮನಸ್ಸು ಕದಿಯುತ್ತಿರುವ ಬಣ್ಣದ ಬೀಸಣಿಗೆ. ಇದರಲ್ಲಿನ ಬಣ್ಣದ ಬೀಸಣಿಗೆಗಳು ನಿಮ್ಮ ಊಹೆಗೂ ಮೀರಿದ ಭಂಗಿಗಳು ವಿನ್ಯಾಸಗಳಲ್ಲಿ ಬಳುಕುತ್ತಿರುತ್ತಾರೆ. ಇದು ಒಂದು ರೀತಿಯಲ್ಲಿ ನಮ್ಮವರದೇ ಆದರೂ ಇದಕ್ಕೆ ಸ್ಫೂರ್ತಿ ಹ್ಯೂಜ್ ಹೆಫ್ನರ್‌ರವರ 'ಪ್ಲೇ ಬಾಯ್' ಎಂಬ ಇನ್ನೊಂದು ಗ್ಲಾಮರಸ್ ಪತ್ರಿಕೆ. ಇದಕ್ಕೆ ಸೆಡ್ಡು ಹೊಡೆಯಲೋ ಎಂಬಂತೆ ಬಂದದ್ದು ಒಂದು ದಿನದ ಕ್ರಿಕೆಟ್‌ಗೆ 'ಡೌನ್ ಅಂಡರ್' , ಅಂದರೆ ಆಸ್ಟ್ರೇಲಿಯಾದಲ್ಲಿ ಒಂದು ದಿನ ಕ್ರಿಕೆಟ್‌ಗೆ ಶ್ರೀಕಾರ ಹಾಡಿದ ಪತ್ರಿಕೆ ಮತ್ತು ಟಿ"ಬೇರನ್ ರೂಪರ್ಟ್ ಮುರ್ಡೋಕ್ ಎಂಬ ಕನಸುಗಾರ. ಇವರುಗಳ ಕನಸಿನ ಕ್ಯಾಲೆಂಡರ್ ಸುಂದರಿಯರು ವರ್ಣನಾತೀತ. ಅದನ್ನು ನೋಡಿಯೇ ಅನುಭವಿಸಬೇಕು. ಇದಕ್ಕೆ ನಾವೇನು ಕಮ್ಮಿ ಎಂಬಂತೆ ನಮ್ಮ ಲಿಕ್ಕರ್ ಬೇರನ್ ವಿಜಯ ಮಲ್ಯರವರು ಸುರಸುಂದರಿಯರ ದೊಡ್ಡ ದಂಡನ್ನೇ ತಮ್ಮ ಕಿಂಗ್‌ಫಿಷರ್ ಕ್ಯಾಲೆಂಡರುಗಳಲ್ಲಿ ಅಚ್ಚಾಗಿಸಿದ್ದಾರೆ. ಅವರ ಲಾಜಿಕ್ ಒಪ್ಪಬೇಕಾದದ್ದೇ. ನಮ್ಮಲ್ಲಿ ಅಜಂತಾ, ಎಲ್ಲೋರಾ, ಬೇಲೂರು ಇಂತಹ ತಾಣಗಳಲ್ಲಿ ಶಿಲೆಯಲ್ಲವೀ ಕಲೆಯು ಎಂಬಂತೆ ಕಪ್ಪು ವರ್ಣದಲ್ಲಿದ್ದರೆ ಸಾಲದು ಎಂದು ಜೀವವಿರುವ ಶಿಲಾಬಾಲಿಕೆಯರನ್ನೇ ಯಾರೂ ಕಂಡರಿಯದ ಬಣ್ಣಗಳಲ್ಲಿ ನಮಗೆ ಕೊಡಿಸಿದ್ದಾರೆ.

ಕಡೆಯದಾಗಿ ಕ್ಯಾಲೆಂಡರುಗಳೆಂದರೆ ನಮ್ಮ ನೆನಪಿನಿಂದ ಮಾಸದಿರುವುದು ಬೆಂಗಳೂರು ಪ್ರೆಸ್‌ನ ಕ್ಯಾಲೆಂಡರುಗಳು. ಹನ್ನೆರಡು ಪುಟಗಳ ಕನ್ನಡ ಮತ್ತು ಆಂಗ್ಲ ಎರಡೂ ಆವೃತ್ತಿಯಲ್ಲಿ ಇವು ಬರುತ್ತಿವೆ. ಇವು ಸದಾ ತರುಣ/ತರುಣಿ. ಇವುಗಳ ವಯಸ್ಸು ಈಗ ಶತಕ ಬಾರಿಸಿ ಹುಮ್ಮಸ್ಸಿನಿಂದ ಎಲ್ಲರ ಮನೆಗಳಲ್ಲಿ ಕಛೇರಿಗಳಲ್ಲಿ ಗೋಡೆಗೆ ಮೊಳೆಯು ಭಾರವೇ, ಮೊಳೆಗೆ ಕ್ಯಾಲೆಂಡರ್ ಭಾರವೇ ಎನ್ನುವಂತೆ ನಮ್ಮ ನಿಮ್ಮ ಕಣ್ಣುಗಳ ಮುಂದೆಯೆ ಹಾರಾಡುತ್ತಿವೆ. ■

# ಹೊಸ ವರ್ಷದ ರೆಸೆಲ್ಯೂಷನ್ಸ್

ಸುಮನಾ

"ಅಮ್ಮಾ ಅಮ್ಮಾ, ನಾಳೆಯಿಂದ ಬೆಳಿಗ್ಗೆ ಬೇಗ ಎದ್ದು ಹೊಸ ಎಕ್ಸರ್ಸೈಸ್‌ಗೆ ಹೋಗಬೇಕು. ವೇಯ್ಟ್ ಲಾಸ್ ಮ್ಯಾನೇಜ್‌ಮೆಂಟ್ ಮಾಡಬೇಕಮ್ಮ. ವಾರದೊಳಗೇ ನಮ್ಮ ತೂಕ ಕಡಿಮೆ ಆಗೋಕೆ ಶುರುವಾಗುತ್ತಂತೆ. ನಾನು ನ್ಯೂ ಇಯರ್ ರೆಸಲ್ಯೂಷನ್ ಮಾಡಿದೀನಿ, ಈ ವರ್ಷ ಹಂಡ್ರೆಡ್ ಪರ್ಸೆಂಟ್ ಸಕ್ಸಸ್ ಸಿಗುತ್ತಮ್ಮಾ. ಯಾಕೆ ಗೊತ್ತಾ? 2025 ಕೂಡಿದ್ರೆ ಒಟ್ಟು ಸಂಖ್ಯೆ ಒಂಭತ್ತು ಬರುತ್ತೆ. ನ್ಯೂಮರಾಲಜಿ ಪ್ರಕಾರ ಇದು ಅದ್ಭುತ ಅದೃಷ್ಟ ಸಂಖ್ಯೆ ಕಣಮ್ಮಾ. ಬೇಗ ಏಳ್ಸಮ್ಮಾ"ಅಂದ್ಲು ವಿನು.

ಅಬ್ಬಬ್ಬಾ! ಇವಳ ಪಥ್ಯ, ಡಿ-ಟಾಕ್ಸ್ ಮತ್ತು ವ್ಯಾಯಾಮಗಳು ಸಾಕುಸಾಕೆನಿಸುವಂತಿತ್ತು. ಅಮ್ಮನಿಗೆ, "ಅಮ್ಮ, ದೋಸೆ, ಚಪಾತಿ, ಇಡ್ಲಿ ವೇಯ್ಟ್, ಅಳತೆ ಇಷ್ಟೇ ಸೆಂಟಿಮೀಟರ್, ಇಷ್ಟೇ ಇಂಚು ಇರಬೇಕಂತೆ. ಪ್ರತಿಯೊಂದಕ್ಕೂ ಇಷ್ಟು ಕ್ಯಾಲರಿ ಅಂತ ಇರುತ್ತಮ್ಮ. ನಿಂಗೇನೂ ಗೊತ್ತಾಗಲ್ಲ"ಅಂತ ದಿನಕ್ಕೆ ಹತ್ತು ಸರಿ ಆ ಮೇಡಂಗೆ ಫೋನ್ ಮಾಡೋದು, ಆ ಮೇಡಂ ಅಲ್ಲಿಂದ ಮತ್ತಷ್ಟು ಗೈಡ್‌ಲೈನ್ಸ್ ಕೊಡೋದೂ ನೋಡಿ, ನೋಡಿ ಅಮ್ಮನಿಗೂ ಸಾಕಾಗಿತ್ತು.

ಇದರ ಮಧ್ಯೆ ವಾಕಿಂಗ್, ಟೆನ್ನಿಸ್, ಬ್ಯಾಡ್ಮಿಂಟನ್, ರನ್ನಿಂಗ್, ಮ್ಯಾರಾಥಾನ್, ಇತ್ಯಾದಿ ಹೊರಾಂಗಣ ಆಟಗಳ ಪ್ರಯೋಗಗಳೂ ಆಗಿದ್ದವು. ವಿನೂ, ರೀಮಾ ತಮ್ಮ ಡಯಟಿಂಗ್ ಬಗ್ಗೆ ಯಾರಿಗೂ ಹೇಳಬಾರದೆಂದೂ, ಒಂದು ದಿನ ತಾವು ಧಿಡೀರಂತ ಸಿನಿಮಾ ತಾರೆಯರಂತೆ ಪ್ರತ್ಯಕ್ಷವಾಗಿ ಎಲ್ಲರಿಗೂ ದಿಗ್ಭ್ರಾಂತಿ ಮೂಡಿಸಬೇಕೆಂದು ಆದಷ್ಟು ಡಯಟಿಂಗ್ ಬಗ್ಗೆ ಗುಟ್ಟು ಮಾಡಿದ್ದರು. ಯಾವುದೋ ಸಂಸ್ಥೆಯಲ್ಲಿ ಹೆಣ್ಣುಮಕ್ಕಳಿಗೆ ವಿಶೇಷವಾಗಿ ಹೋಂ ಸೈನ್ಸ್ ವ್ಯಾಯಾಮ ಅಂತ ಬೇರೆ ಸೇರಿದ್ದಳು ಮಗಳು. ಒಮ್ಮೆ ನೋಡಲು ಹೋಗಿ ಶಾಕ್ ಆಗಿತ್ತು ಅಮ್ಮನಿಗೆ. ವೇಯ್ಟ್ ಕಳೆದುಕೊಳ್ಳಲು ಇಚ್ಛಿಸುವ ಯುವತಿಯರನ್ನು ಸಾಲಾಗಿ ಕೂರಿಸಿ ಬೀಸೋ ಕಲ್ಲು ಬೀಸುವಂತೆ ಕೈಗಳ ವ್ಯಾಯಾಮ, ಬಟ್ಟೆ ಒಗೆಯುವಂತೆ, ಕಸ ಗುಡಿಸಿ, ನೆಲ ಒರೆಸುವಂತೆ ಮಾಡಿಸುವ ಈ ಕಸರತ್ತು ನೋಡಿ ಅಮ್ಮನಿಗೆ ಹಿಡಿಸಲಾಗದ ನಗು ಬಂದಿತ್ತು." ಈಗಿನ ಕಾಲದ ಬ್ರೂಮಿಂಗ್, ಮಾಪಿಂಗ್, ಡಸ್ಟಿಂಗ್, ವಾಷಿಂಗ್ ಎಂದು ಕರೆಸಿಕೊಳ್ಳುವ ಗುಡಿಸಿ, ಒರೆಸಿ, ಒಗೆದು, ಧೂಳು ಹೊಡೆಯೋದು ಆಂಗ್ಲ ತರ್ಜುಮೆಯಲ್ಲಿ ಆದ ಅವಾಂತರ. ಹ್ಞೂ..."ಅಂತ ಅಮ್ಮ ನಗುತ್ತಾ, "ಅಲ್ಲಮ್ಮ, ನಾವು ಇದನ್ನೆಲ್ಲ ಚಿಕ್ಕ ವಯಸ್ಸಿನಿಂದಲೇ ಮನೇಲಿ ಮಾಡ್ತಾ ಬಂದಿದೀವಿ, ಕೆಲಸಕ್ಕೆ ಕೆಲಸ, ಕಸರತ್ತಿಗೆ ಕಸರತ್ತು, ಮನೇಲಿ ಹಿರಿಯರಿಗೆ ಸಹಾಯ ಕೂಡಾ ಆಗುತ್ತಿತ್ತು. ಸಮಯದ ಸದ್ಬಳಕೆ ಕೂಡಾ ಆಗ್ತಿತ್ತು. ಪೈಸೆ ಕೂಡಾ ಖರ್ಚು ಇರ್ತಿರ್ಲಿಲ್ಲ" ಅಂದಾಗ, ವಿನೂಗೆ ತಡೆಯಲಾಗದ ಕೋಪ.

"ಅಮ್ಮ, ನೀನು ಸುಮ್ನಿರು, ನಿಂಗೇನೂ ಗೊತ್ತಿಲ್ಲ. ನಾವು ಸಾಫ್ಟ್‌ವೇರ್ ಕಂಪನೀಲಿ ಕೆಲ್ಸ ಮಾಡ್ಕೊಂಡು, ನೀನುಮಾಡ್ತಿದ್ದ ಕೆಲಸಗಳನ್ನು ಮಾಡೋಕಾಗಲ್ಲ. ನಾನು ಈಗ ಪಥ್ಯ ಬೇರೆ ಮಾಡಬೇಕು. ಅದಕ್ಕೂ ಕೆಲವು ಗೈಡ್ ಲೈನ್ಸ್ ಕೊಟ್ಟಿದಾರೆ" ಅಂದಾಗ ಅಮ್ಮ ಸೆರಗಿನ ಮರೇಲಿ ಮುಸಿಮುಸಿ ನಕ್ಕರು.

ಆಗಾಗ ಮೀಟಿಂಗ್, ಯಾರದೋ ಬರ್ತ್‌ಡೇ ಪಾರ್ಟಿ, ಮತ್ಯಾರದೋ ಪ್ರಮೋಷನ್ ಪಾರ್ಟಿ ಅಂತ ಪಿಜ್ಜಾ, ಬರ್ಗರ್, ಗಾರ್ಲಿಕ್ ಬ್ರೆಡ್, ಸಾಫ್ಟ್ ಡ್ರಿಂಕ್ಸ್, ಪಫ್ಸ್ ಇತ್ಯಾದಿಗಳ

ಸೇವನೆ ನಡೆದು, ಮಗಳು ಗುಂಡಾಗಿ, ಮಗಳ ಪರ್ಸ್ ಸ್ಲಿಮ್ ಆಯಿತು, ದೇಹಕ್ಕೆ ಪಾಪ, ಭಾರದ ಆವಾಹನೆ ಆಗುತ್ತಿತ್ತು. 'ನನಗ್ಯಾಕೆ ಈ ಶಿಕ್ಷೆ?' ಅಂತ ಜೀರ್ಣಾಂಗ ಮಣಮಣ ಗೊಣಗಿಕೊಳ್ತಿತ್ತು. 'ಪಕ್ಷಕ್ಕೊಂದು ಸರ್ತಿ ನಾನೂ ಏಕಾದಶಿ ಮಾಡ್ಬೇಕು ಅನ್ನೋ ವಿಷಯಾನೇ ಇವ್ರಿಗೆ ಗೊತ್ತಾಗೋಲ್ವಲ್ಲಾ? ಛೇ! ನನಗೂ ತಿಂಗಳಿಗೆ ಒಂದು ಸರ್ತಿ ಆದ್ರೂ ಔಟಿಂಗ್ ಅಂತ ಇದ್ದಿದ್ರೆ, ಹೊಟ್ಟೆಯಿಂದ ಹೊರಗೆ ಬಂದು ಭರ್ಜರಿಯಾಗಿ ಉಪನ್ಯಾಸ, ಉಪದೇಶ ಕೊಡ್ತಿದ್ದೆ. ಆರೋಗ್ಯ ಹೇಗೆ ನೋಡ್ಕೋಬೇಕು, ಪಥ್ಯಾಪಥ್ಯ ಹೇಗೆ ಮಾಡಬೇಕು ಅಂತ ಸರ್ಯಾಗಿ ಕ್ಲಾಸ್ ತೊಗೋತಿದ್ದೆ' ಅಂತ ಜೀರ್ಣಾಂಗದ ಅಂಬೋಣ.

ಅಮ್ಮ ಅಬ್ಸರ್ವ್ ಮಾಡಿದ್ದಂತೆ ಮಗಳ ದೇಹದಲ್ಲಿ ಅನೇಕಾನೇಕ ಕಾರಣಗಳಿಂದ ಒಬೆಸಿಟಿ ಮನೆ ಮಾಡಲು ಶುರು ಮಾಡಿತ್ತು. ಈ ಅಪಾಯಕಾರಿ ಮನೆಯನ್ನು ಒಡೆಯಲೇಬೇಕಿತ್ತು. ಚಂದದ ಬೇಲೂರು ಶಿಲಾಬಾಲಿಕೆಯಂತೆ ಮಗಳು ರೂಪುಗೊಳ್ಳಬೇಕು ಎಂದು ಅಮ್ಮನ ಅಂಬೋಣ. ಈ ಬಗ್ಗೆ ಮಗಳು ವಿವಿಧ ರಿಸರ್ಚ್ ಮಾಡುತ್ತಾ, ಅನೇಕ ಪಥ್ಯಗಳ ಬಗ್ಗೆ ಪಠ್ಯಪುಸ್ತಕಗಳ 'ಪಠ್ಯಾವತರಣ' ಅಷ್ಟೇ ಆಯಿತು. ಓದುವಿಕೆ, ಅನೇಕ ಗೈಡ್‌ಗಳ ಬಳಿ ಫೋನಾಯಿಸಿ ಅನೇಕಾನೇಕ ಪರಿಹಾರಗಳ ಅನುಸರಿಸುವಿಕೆ, ಜೊತೆಗೆ ಅವರ ಪರ್ಸ್ ಭರ್ಜರಿಯಾಗಿ ತುಂಬುವಿಕೆ ನಡೆದಿತ್ತು.

ಇದೇನೂ ಇಲ್ಲದೇ ಅಮ್ಮನ ಆರೋಗ್ಯ ಮಾತ್ರ ಅದ್ಭುತವಾಗಿದ್ದಿದ್ದು ವಿನೂಗೆ ಎಂಟನೇ ಮಹದದ್ಭುತವಾಗಿ ಕಂಡಿತ್ತು. ಎರಡು ವಾರಗಳ ಹಿಂದೆ ಮಾಸ್ಟರ್ ಚೆಕಪ್‌ಗೆ ಅಮ್ಮನನ್ನು ಕರೆದುಕೊಂಡು ಹೋಗಿದ್ದಾಗ ಡಾಕ್ಟರ್ ಆಶ್ಚರ್ಯಚಕಿತರಾಗಿದ್ದರು."ವಾವ್ .ಏನು ಮೇಡಂ ಇಷ್ಟು ಫಿಟ್ ಅಂಡ್ ಫೈನ್ ಆಗಿದೀರಾ! ಸಂತೂರ್ ಮಮ್ಮಿ ಜಾಹೀರಾತು ಅಮ್ಮನಂತೆ ಯಂಗ್ ಅಂಡ್ ಎನರ್ಜಿಟಿಕ್ ನೀವು. ಆರೋಗ್ಯ ಮೇಂಟೇನ್ ಮಾಡಿರೋದು ನೋಡಿ ತುಂಬಾ ಖುಷಿಯಾಗುತ್ತೆ, ಈಗಿನ ರೆಡಿಮೇಡ್ ಫಾಸ್ಟ್ ಫುಡ್ ಯುಗದಲ್ಲೂ ಇಷ್ಟೊಳ್ಳೆಯ ಆರೋಗ್ಯ ಕಾಪಾಡಿಕೊಂಡಿದೀರಾ. ಬನ್ನಿ ಬನ್ನಿ. ಹಾರ್ಟ್ ಬೀಟ್, ಚೆಕ್ಮಾಡ್ತೀನಿ" ಅಂತ ಚೆಕಪ್ ಆದಮೇಲೆ ಚಕ್ ಚಕ್ ಅಂತ ಹೃದಯದ ಬಡಿತ ಕೇಳಿ, "ವಾಹ್ವಾಹ್! ಏನು ಮೇಡಂ ಇಷ್ಟು ಆರೋಗ್ಯವಂತ ಹೃದಯ! ಏನು, ವ್ಯಾಯಾಮ, ಯಾವ ಊಟ ಮಾಡ್ತೀರಿ? ಪ್ರತಿ ದಿನ ವಾಕ್ ಮಾಡ್ತೀರಾ? ನಿಮ್ಮ ಒಳ್ಳೆಯ ಕೊಲೆಸ್ಟ್ರಾಲ್ ಲೆವೆಲ್ ಕೂಡಾ ಸೂಪರ್. ಬಿ.ಪಿ, ಶುಗರ್ ಏನೂಇಲ್ಲ. ಅದ್ಭುತ! ಟಾಪ್ ಟು ಬಾಟಂ ಎಲ್ಲವೂ ಹಂಡ್ರೆಡ್ ಪರ್ಸೆಂಡ್ ಓಕೆ ಆಗಿದೆ. ನಿಜಕ್ಕೂ ನಿಮ್ಮ ಆರೋಗ್ಯದ ಬಗ್ಗೆ ಡಾಕ್ಯುಮೆಂಟರಿ ಒಂದನ್ನು ಮಾಡಬೇಕು ಅನಿಸುತ್ತೆ"ಅಂತ ಅಮ್ಮನ ದಿನಚರಿಯ ಬಗ್ಗೆ ಕೂಲಂಕಷವಾಗಿ ವಿಚಾರಿಸಿದರು. ಅದು ಒಂದು ರೀತಿಯ ಸಂದರ್ಶನದಂತೆಯೇ ಇತ್ತು.

ಅಮ್ಮ ಅಂದ್ರು, "ಏನಿಲ್ಲಪ್ಪಾ, ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಕರಾಗ್ರೇ ವಸತೇ ಲಕ್ಷ್ಮಿ ಹೇಳುತ್ತಾ, ಸೂರ್ಯನ ಬೆಳಕಿನೊಂದಿಗೇ ಕೆಲಸ ಮಾಡುತ್ತಾ, ಧ್ಯಾನ, ಜಪ, ತಪ, ಕೆಲವು ಯೋಗಾಭ್ಯಾಸ, ನಡಿಗೆ, ಮಾಡಿ, ಬೆಳಿಗ್ಗೆ ಬಾಗಿಲಿಗೆ, ಹೊಸಲಿಗೆ ನೀರು ಹಾಕಿ, ತುಳಸಿಯ ಮುಂದೆ ರಂಗೋಲಿ ಹಾಕಿ, ಗಿಡಗಳಿಗೆ ನೀರುಣಿಸಿ, ದೈನಂದಿನ ಮನೆಕೆಲಸ ಮುಗಿಸಿ, ಶುದ್ಧ ಸಸ್ಯಾಹಾರ, ತಾಜಾ ಹಣ್ಣು, ತಾಜಾ ತರಕಾರಿ ಸೇವನೆ, ಮೊಳಕೆ ಕಟ್ಟಿದ ಕಾಳುಗಳ ಸೇವನೆ, ದಿನಚರಿಯ ನಂತರ ಚಂದ್ರನ ಬೆಳ್ಳಿ ಬೆಳಗು ಬರೋ ಹೊತ್ತಿಗೆ ಸಂಜೆ ಮಹಿಳಾ ಮಂಡಳಿಯ ಅನೇಕ ಮಹಿಳಾಪರ ಅಭಿವೃದ್ಧಿ ಚಟುವಟಿಕೆಗಳನ್ನು ಅಟೆಂಡ್ ಮಾಡಿ, ಮನೆಗೆ ಬಂದು, ಅಕ್ಕಪಕ್ಕದ ಮಕ್ಕಳಿಗೆ ಮನೆಪಾಠ ಹೇಳಿ, ಸಂಜೆಯ ಅಡುಗೆ ಮಾಡಿ, ದೇವರ ನಾಮಗಳನ್ನು ಹಾಡುತ್ತಾ ಮತ್ತೆ ಬೆಳಗಿನ ಕೆಲಸಕ್ಕೆ ಬೇಕಾದ ಅವಶ್ಯಕತೆಗಳನ್ನು ತಯಾರಿ ಮಾಡಿ, ದುಃಸ್ವಪ್ನಗಳನ್ನು ದೂರ

ಮಾಡುವ 'ರಾಮಸ್ಕಂದಂ ಹನುಮಂತಂ' ಹೇಳಿ ನಿರ್ಭಯವಾಗಿ, ನಿರಾಳವಾಗಿ ಮಲಗುತ್ತೇನೆ. ಹದಿನೈದು ದಿನಕ್ಕೊಮ್ಮೆ, 'ರಾಮನಾಮ ಪಾಯಸಕೆ ಕೃಷ್ಣನಾಮ ಸಕ್ಕರೆ, ವಿಠಲ ನಾಮ ತುಪ್ಪವ ಕಲೆಸಿ ಬಾಯ ಚಪ್ಪರಿಸಿರೋ' ಹಾಡುತ್ತಾ ಏಕಾದಶಿ ಆಚರಣೆ ಮಾಡುತ್ತೇನೆ. ಹೋಟೆಲ್ ಊಟ, ತಿಂಡಿ ಯಾವುದೂ ತಿನ್ನುವುದಿಲ್ಲ. 'ಬೇಡ ಜೊಮಾಟೋ ಸ್ವಿಗ್ಗಿ, ನನಗೆ ಆರೋಗ್ಯ ನನ್ನ ಹುಗ್ಗಿ' ಅನ್ನೋ ಪೈಕಿ ನಾನು. ಆದ್ರೆ ನೋಡಿ, ಈಗಿನ ಮಕ್ಕಳಿಗೆ ಎಲ್ಲಾ ಹೊರಗಿನದೇ ಆಗಬೇಕು. ಅದರಿಂದಲೇ ಈ ಒಬೆಸಿಟಿಯ ಸಮಸ್ಯೆ ಅಲ್ಲವೇ? ಮಕ್ಕಳಿಗೆ ಯಾವುದೇ ಕೆಲಸ ಮಾಡುವ ಶಕ್ತಿ ಇಲ್ಲ, ಇಮ್ಯುನಿಟಿ ಪವರ್ ಇಲ್ಲ. ನಮ್ಮ ಕಾಲದಲ್ಲಿ ಇವೆಲ್ಲಾ ಇಲ್ಲದೇ ಶುದ್ಧ ಗಾಳಿ, ಶುದ್ಧ ತರಕಾರಿ, ಶುದ್ಧ ನೀರು; ಕಲಬೆರಕೆಯಿಲ್ಲದಶುದ್ಧ ಊಟ, ಸಂತೃಪ್ತಿಯ ಜೀವನ. ಅದಕ್ಕೇ ಒಂದು ರೀತಿ ನಾವು ಆರ್ಗ್ಯಾನಿಕ್ 'ಸಾವಯವ' ಮಕ್ಕಳು"ಅಂತ ಮನತುಂಬಿ ನಕ್ಕರು. ಮಹಿಳಾ ಮಂಡಳಿಯ ಕಂಪ್ಯೂಟರ್‌ನಲ್ಲಿ ವಿವಿಧ ಖರ್ಚುವೆಚ್ಚ ಪತ್ರಗಳ ರೆಕಾರ್ಡ್ ಕೂಡಾ ಮೇಂಟೇನ್ ಮಾಡ್ತೀನಿ. ಬಹುತೇಕ ಬೆಳಗಿನಿಂದ ಸಂಜೆ ಅಲ್ಲೇ ನನ್ನ ಕೆಲಸ, ನನ್ನ ಮನದಾಸೆಯಂತೆ ನನ್ನಿಂದ ಸ್ವಲ್ಪವಾದರೂ ಸಮಾಜಸೇವೆಯಾಗಲಿ ಎಂಬುದೊಂದೇ ಸದುದ್ದೇಶ. ನನ್ನನ್ನು ಮಹಿಳಾ ಮಂಡಳಿಯ ಸದಸ್ಯೆಯರು 'ಚಟುವಟಿಕೆಯ ಚಿಲುಮೆ' ಎನ್ನುತ್ತಾರೆ. ನಮ್ಮ ಮಹಿಳಾ ಮಂಡಳಿಯ ಅನೇಕ ಸದಸ್ಯೆಯರು ಆಫೀಸ್ ಕೆಲಸ ಮಾಡಿಕೊಂಡೂ ಆರೋಗ್ಯ ಚೆನ್ನಾಗಿ ಕಾಪಾಡಿಕೊಳ್ಳುವ ಪ್ರಯತ್ನ ಮಾಡ್ತಿದಾರೆ. ಮನಸ್ಸಿದ್ರೆ ಮಾರ್ಗ ಅಲ್ವೇ?"ಅಂದ್ರು ಅಮ್ಮ.

"ನಿಮ್ಮ ಜೊತೆ ಮತ್ತೊಂದು ಸಂದರ್ಶನ ನಡೆಸಬೇಕು, ನಮ್ಮ ಅನೇಕ ಕ್ಲಿನಿಕ್ ನಡೆಸುವ ವೇಯ್ಟ್ ಮ್ಯಾನೇಜ್‌ಮೆಂಟ್ ಆಸಕ್ತರಿಗೆ ನಿಮ್ಮ ದಿನಚರಿಗಳ ಬಗ್ಗೆ ಪರಿಚಯ ಮಾಡಿಕೊಡಬೇಕು. ಇಲ್ಲಿ ಬಹುತೇಕ ಆಸಕ್ತರಿಗೆ ಅನೇಕ ರೀತಿಯ ಅನಾರೋಗ್ಯ ಕಾಡುತ್ತಿವೆ. ಒಮ್ಮೆ ಬಂದು ನಿಮ್ಮ ದಿನಚರಿಯ ಬಗ್ಗೆ ತಿಳಿಸಿ, ನಿಮ್ಮ ಜೀವನಶೈಲಿಯನ್ನು ಅನುಸರಿಸಿದರೆ ಈ ಒಬೆಸಿಟಿಗಳು ಸ್ಮಾರ್ಟ್ ಸಿಟಿಗಳಾಗುವುದರಲ್ಲಿ ಸಂದೇಹವೇ ಇಲ್ಲ"ಅಂತ ನಗ್ತಾ ನಗ್ತಾ ಅಂದರು ಸಿಬ್ಬಂದಿ.

ಈ ಮಧ್ಯೆ ಏನೂ ಮಾಡದಿದ್ದ ಸಾಹಸವೇ ಇರಲಿಲ್ಲ. ಅದೇನೋ ಡಿಟಾಕ್ಸ್ ಮಾಡಿಸ್ತಾರೆ ಅಂತ ಹೊಸ ಪ್ರಯತ್ನ."ಅಮ್ಮ, ಈಗ ಡಿಟಾಕ್ಸ್ ಮಾಡಬೇಕಂತೆ. ಬರೀ ಹಣ್ಣುಗಳ ರಸ, ಹಸಿ ತರಕಾರಿ, ಮಜ್ಜಿಗೆ, ಶುದ್ಧ ಕುಡಿಯುವ ನೀರು ಇದರಲ್ಲಿ ಇರಬೇಕಂತಮ್ಮ. ಅಲ್ಲದೆ ಡಿಟಾಕ್ಸ್ ಮಾಡೋಕೆ ಆಗ್ದೆ ಇರೋ ಫ್ರೆಂಡು ಹೇಳಿದ್ದು ಹಿಂದಿನ ದಿನಾನೇ ಸ್ವಲ್ಪ ರವೆ, ಅಥವಾ ಅಕ್ಕಿತರಿ ಬೇಯಿಸಿ, ಚೆನ್ನಾಗಿ ನೀರು ಹಾಕಿಟ್ಟು, ಬೆಳಿಗ್ಗೆ ಮೊಸರು ಸೇರಿಸಿ ಕುಡಿದ್ರೆ ತುಂಬಾ ಒಳ್ಳೆಯದಂತೆ. ಅಮ್ಮ, ನೀನು ಹಿಂದಿನ ದಿನ ಆ ರೆಸಿಪಿ ತಯಾರು ಮಾಡು. ಎರಡು ಸ್ಪೂನ್ ಅಷ್ಟೇ; ಅಂದ್ರೆ ನಲ್ವತ್ತೈದು ಗ್ರಾಂ ಇರ್ಬೇಕು, ನಾನು ಡಿಜಿಟಲ್ ಮಿಷೀನ್ ತರಿಸ್ತೀನಿ. ಅದ್ರ ಮೇಲಿಟ್ಟು ಕುಕ್ ಆದದ್ದು ನೂರರಿಂದ ನೂರೈವತ್ತು ಗ್ರಾಂ ಇರುವಂತೆ ನೋಡ್ಬೇಕು, ಆ ಕೆಲ್ಸ ನೀನು ಮಾಡ್ಬೇಕಮ್ಮ. ನಾನು ಹೇಗಾದ್ರೂ ಸ್ಲಿಂ ಆಗ್ಬೇಕು"ಅಂದಾಗ ಅಮ್ಮ ಅಂದುಕೊಂಡ್ರು, "ಹ್ಞೂ, ಗಂಜಿ ಕುಡಿಯೋವ್ರಿಗೆ ಮೀಸೆ ಹಿಡಿಯೋರೊಬ್ಬರು ಅಂತ ಗಾದೆಯಿದೆ. ಅಷ್ಟಲ್ಲದೇ ಮನೇಲಿದ್ದ ವೇಯಿಂಗ್ ಮಷೀನಲ್ಲಿ

ಆಗಾಗ್ಗೆ ವೇಯ್ಟ್ ನೋಡೋದು, ತೂಕ ಏರುತ್ತಲೇ ಇರೋದು ನೋಡಿ, 'ಥೂ! ಈಮೆಷಿನ್ ಚೆನ್ನಾಗಿಲ್ಲ, ಡಿಜಿಟಲ್ ತೂಕ ನೋಡುವ ಯಂತ್ರ ತರಿಸ್ತೀನಿ' ಅಂತ ಅಮೇಜಾನ್‌ನಿಂದ ಅದೂ ತರಿಸಿದ್ದಾಯಿತು. ಒಟ್ನಲ್ಲಿ ಅಮೇಜಾನ್ ಕಂಪನಿಗೂ ಸಾಕಷ್ಟು ಲಾಭವೇ ಆಯ್ತು. ತಮ್ಮ ಕಿಟ್ಟಿ ಬೇರೆ, 'ಏ, ನಿನ್ನ ತೂಕ ತಡೇದಿರೋಷ್ಟು ಭಾರ

ಆಗಬೇಡ ಕಣೇ, ಪಾಪ! ಆಮೆಷಿನ್ ಬಗ್ಗೆ ಕರುಣೆ ಇರ್ಲಿ' ಅಂತಅನ್ನೋದಲ್ದೇ, 'ನೋಡು, ಸಮೋಸ, ಐಸ್‌ಕ್ರೀಂ ತಿಂದು 'ಅಯ್ಯೋ, ಆರೋಗ್ಯದಲ್ಲಿ ಮೋಸ ಹೋದೆ' ಅಂತ ಕಿರಿಚಾಡ್ಬೇಡ. ಅದಲ್ಲದೇ. ತಿಂಗಳಿಗೆ ಒಮ್ಮೆ ಆ ನಿನ್ನ ಮೇಡಂಗಳಿಗೆ ಫೀಸು ಅಂತ ಹಣದ ತಾಂಬೂಲ ಅರಿಶಿನ ಕುಂಕುಮ ಬೇರೆ ಕೊಟ್ಟು ಬರ್ತೀಯ' ಅಂತ ಕೀಟಲೆ ಮಾಡಿದ ತಮ್ಮನನ್ನು ಅಮ್ಮ, 'ಏಯ್ ಸುಮ್ನಿರೋ' ಅಂತ ಮಗಳನ್ನು ಸಪೋರ್ಟ್ ಮಾಡಿ, "ಓ! ಈಗ ಇನ್ನೊಂದು ಹೊಸ ಪ್ಲಾನ್ ಮಾಡ್ತಿದೀಯಾ? ಏನೋಮ್ಮ,ನಾನೂ ನೋಡ್ತಾನೇ ಇದೀನಿ. ಇದುವರೆಗೂ ನಾನಾ ರೀತಿಯ ಪ್ರಯತ್ನ ಮಾಡ್ತಾನೇ ಇದೀಯ! ನೀನು ಮಾಡ್ದೇ ಇರೋ ಪ್ರಯತ್ನವೇ ಇಲ್ಲವಲ್ಲಮ್ಮ! ಡಿಟಾಕ್ಸ್ ಅಂದ್ರೆ ಮತ್ತೇನು ಇಲ್ಲಾ ಕಣಮ್ಮ, ಏಕಾದಶಿ ಅಂತ ಅಷ್ಟೇ. ಆ ಆರೋಗ್ಯ ಭಗವಂತ ಧನ್ವಂತರಿ ಅನುಗ್ರಹ ನಿನ್ಮೇಲೆ ಯಾವಾಗ ಆಗುತ್ತೋ ಅವ್ನಿಗೇ ಬೆಳಕು"ಅಂತ ನಗ್ತಾ ಅಂದ್ರು ಅಮ್ಮ.

"ಅಮ್ಮ, ನೀನು ನಗಬೇಡ! ನಂಗೆ ತುಂಬಾ ಕೋಪ ಬರುತ್ತೇ ನೋಡು"ಅಂತ ಮುಖ ಉಬ್ಬಿಸಿದಳು ವಿನು.

"ಸರಿ ಸರಿ. ಅದೇನು ಮಾಡ್ತೀಯೋ ಮಾಡಮ್ಮ. ಒಟ್ನಲ್ಲಿ, ನೀನು ಹೇಳಿದಂತೆ ಸಿಂಹಕಟಿಯಾಗುವ, ಬೇಲೂರು ಶಿಲಾಬಾಲಿಕೆಯಂತಾಗುವ ನಿನ್ನ ಕನಸು ನನಸಾಗ್ಲಿ. ಬೇಲೂರು ಶ್ರೀ ಚನ್ನಕೇಶವನ ಅನುಗ್ರಹ ಸದಾ ನಿನಗಿರಲಿ"ಅಂತ ಮನದಲ್ಲೇ ಮುಗುಳುನಗೆ ನಗುತ್ತಾ ಅಡಿಗೆಮನೆಯ ಕಡೆ ಹೊರಟರು ಅಮ್ಮ.

ವಿನು ಮಾಡದಿದ್ದ ಯಾವ ಪ್ರಯತ್ನವೂ ಇರಲಿಲ್ಲ. ಟಿ.ವಿ.ಯಲ್ಲಿ ಬರುವ ಅನೇಕಾನೇಕ ಡಯಟ್ ವಿಷಯಗಳ ಕುರಿತು ಬೇಕಾದಷ್ಟು ಅಭ್ಯಾಸ ನಡೆಸಿದ್ದಳು. ಯೂಟ್ಯೂಬ್‌ನಲ್ಲಿನ ತಿಂಗಳೊಳಗೇ ಐದು ಕೇ.ಜಿ ವೇಯ್ಟ್ ಲಾಸ್ ಆಗುತ್ತೆ ಅಂತ ಮತ್ತೊಂದು ಪ್ರಯತ್ನ ನಡೆಸಿದ್ದಳು. ಸ್ಕಿಪ್ಪಿಂಗ್ ಮಾಡ್ತೀನಿ ಅಂತ ಬೆಳಗಿನ ಜಾವದಲ್ಲಿ ಮನೇಲೇ ಆರಂಭಿಸಿದ ಕೆಲ ದಿನಗಳಲ್ಲಿ ಕೆಳಗಿನ ಮನೆಯ ಜಲಜಮ್ಮ ಬಂದು, "ಅಮ್ಮಾ ವಿನೂ, ನೀನು ಸ್ಲಿಂ ಆಗಬೇಕು ಅಂತ ನಾನಾ ತರಹದ ಎಕ್ಸರ್‌ಸೈಸ್ ಮಾಡ್ತಿರೋದು ಸರಿಯಮ್ಮ. ಆದ್ರೆ ನನ್ನ ಮೊಮ್ಮಗು ಮಲಗಿರ್ತಾನೆ, ನೀನು ಮಾಡೋ ಧಬ್ ಧಬ್ ಶಬ್ದಕ್ಕೆ ಬೆಚ್ಚಿ ಬೀಳ್ತಾನೆ ತಾಯಿ. ಎದುರುಗಡೆ ಪಾರ್ಕ್‌ಲ್ಲಿ ಹೋಗಿ ಹಗ್ಗಜಗ್ಗಾಟ ಆಡಬಹುದಲ್ಲಾ!"ಅಂದ್ರು.

ಸರಿ, ಅಲ್ಲಿಗೇ ವಿನೂ ವ್ಯಾಯಾಮ ನಿಂತುಹೋಯ್ತು."ಬೆಳಗಿನ ಜಾವ ಈ ಛಳಿಯಲ್ಲಿ ನಾ ಹೋಗ್ಲಾರೆ ಅಮ್ಮ"ಅಂತ ಹಗ್ಗ ಸುತ್ತಿ ನೀಟಾಗಿ ಅವಳ ಶೆಲ್ಫ್‌ನಲ್ಲಿ ಇಡುತ್ತಿರುವಂತೆ ಗೆಳತಿ ರೀಮಾ ಫೋನ್ ಬಂತು."ಹಾಯ್ ವಿನೂ. ನಮ್ಮ ವೇಯ್ಟ್ ಲಾಸ್ ಪ್ರೋಗ್ರಾಮ್‌ಗೆ ಇನ್ನೊಂದು ಉಪಾಯ ಕಣೇ. ನಾಳೆಯಿಂದ ನಾವಿಬ್ರೂ ಟೆನ್ನಿಸ್ ಪ್ರ್ಯಾಕ್ಟೀಸ್ ಮಾಡೋಣ, ಸಾನಿಯಾ ನೇಹ್ವಾಲ್, ಸಾನಿಯಾ ಮಿರ್ಜಾ, ಸಿಂಧು, ಎಲ್ಲರನ್ನೂ ಬೀಟ್ ಮಾಡುವಂಥ ಅಭ್ಯಾಸ ಮಾಡಿದ್ರೆ ಒಲಂಪಿಕ್ಸ್‌ಗೆ ಹೋಗ್ದೇ ಇದ್ರೂ ಪರ್ವಾಗಿಲ್ಲ, ಅವರಷ್ಟೇ ಸ್ಲಿಂ ಆಗಬಹುದು ನೋಡೇ. ಇವತ್ತೇ ಹೋಗಿ ಟೆನ್ನಿಸ್ ರಾಕೆಟ್ ತರೋಣ" ಅಂದ ರೀಮಾಗೆ ರಾತ್ರಿ ಲೇಟ್ ಆಗಿದ್ದೂ ಅರಿವಿಗೆ ಬಂದಿರಲಿಲ್ಲ." ಈಗ ಹೊತ್ತಾಗಿದೆ. ಅಂಗಡಿ ಬಾಗಿಲು ಹಾಕೋ ಹೊತ್ತಾಯ್ತಲ್ಲ. ನಾಳೆ ಹೋದರಾಗದೇನಮ್ಮ?" ಅಂತ ಅಮ್ಮ ಅಂದೂ ಕೇಳದೆ ರೀಮಾ, ವಿನೂ ಹೊರಟರು, ಇನ್ನೇನು ನಾಳೇನೇ ಟೆನ್ನಿಸ್ ಆಡಿ ಲತೆಯಂತೆ ಬಳುಕುತ್ತೇವೆಂಬಂತೆ ಉತ್ಸಾಹ ಇವರಿಗೆ. ಅಂಗಡಿಯವನು ಅಂಗಡಿಯ ಬಾಗಿಲು ಹಾಕಿ ಹೊರಡುತ್ತಿದ್ದ. ಇವರಿಬ್ರೂ ಹೋಗಿ

ಅವನ ತಲೆ ತಿಂದು, ತುಂಬಾ ಅರ್ಜೆಂಟ್ ಇದೆ ಅಂತ ಸಬೂಬು ಹೇಳಿ ಮತ್ತೆ ಅಂಗಡಿಯ ಬಾಗಿಲು ತೆಗೆಸಿ ಎರಡು ಟೆನ್ನಿಸ್, ಬ್ಯಾಡ್ಮಿಂಟನ್ ರಾಕೆಟ್, ಚೆಂಡು, ಆಟದ ಶೂಸ್, ವಾಕಿಂಗ್ ಶೂ ಇತ್ಯಾದಿ ಕೊಂಡುಕೊಂಡು ಬಂದರು.

ಮರುದಿನ ಬೆಳಿಗ್ಗೆ ಟೆನ್ನಿಸ್ ಕೋರ್ಟ್, ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ವೀರಾವೇಶದಿಂದೆಂಬಂತೆ ಹೋರಾಡಿ ಬಂದು, ರಾತ್ರಿ "ಅಮ್ಮ, ಯಾಕೋ ತೋಳುಗಳು ನೋಯುತ್ತಿದೆ" ಅಂತ ಅಮ್ಮನ ಹತ್ತಿರ ನೀಲಗಿರಿ ಎಣ್ಣೆ ಹಚ್ಚಿಸಿಕೊಂಡು, ಉಪ್ಪುಶಾಖ ಕೊಡಿಸಿಕೊಂಡು. ಮಾರನೇ ದಿನ ಇಬ್ಬರೂ ಗೆಳತಿಯರು ಬಾಯಿಗೆ ಬೀಗ ಜಡಿದಂತೆ ಇದ್ದರು. ಅಂದೂ ಟೆನ್ನಿಸ್ ಅಭ್ಯಾಸಕ್ಕೆ ಹೊರಡ್ತಾರೆಂದುಕೊಂಡ ಅಮ್ಮನಿಗೆ ಟೆನ್ನಿಸ್ ರಾಕೆಟ್ಸ್ ಸಪ್ಪೆಮುಖದೊಂದಿಗೆ ಸ್ಕಿಪ್ಪಿಂಗ್ ಹಗ್ಗದ ಪಕ್ಕದಲ್ಲಿ ಶೋಪೀಸ್‌ನಂತೆ ಇದ್ದದ್ದು ಕಂಡುಬಂತು. ಅಯ್ಯೋ ಪಾಪ ಅಂತ ಹಗ್ಗ, ರಾಕೆಟ್‌ಗೆ ಕನಿಕರ ತೋರಿದ್ರು ಅಮ್ಮ. ಈ ಹಿಂದೆ ಖರೀದಿಸಿದ್ದ ಟ್ರೆಡ್ಮಿಲ್, ವಾಕಿಂಗ್ ಶೂಸ್, ಕ್ರಿಕೆಟ್ ಬ್ಯಾಟು ಬಾಲು 'ನಾವೂ ಇಲ್ಲೇ ಇದೀ" ಅಮ್ಮ' ಅಂತ ಅಳುತ್ತಾ ಹೇಳಿದಂತೆನಿಸಿತು.

ಇದಕ್ಕೆಲ್ಲ ಬಿಡುವು ಕೊಟ್ಟು, ಮತ್ತೆ ಡಯಟ್ ಕಡೆ ಗಮನ ಹರಿಸಿದಳು ವಿನೂ."ಬೆಳಗ್ಗೆ ಬರೀ ಹೊಟ್ಟೆಯಲ್ಲಿ ನಿಂಬೆ ಜೇನುತುಪ್ಪ ಬೆರೆಸಿದ ನೀರು ಕುಡೀಬೇಕಂತೆ, ಚೀಯಾ ಸೀಡ್ಸ್ ನೀರಿನಲ್ಲಿ ನೆನೆಸಿಟ್ಟು ಕುಡೀಬೇಕಂತೆ." ಓಕೆ ಅಂತ ಅದನ್ನೂ ತಂದಾಯಿತು. ಎರಡೇ ದಿನದಲ್ಲಿ ಅದ್ಯಾಕೋ ದೇಹಕ್ಕೆ ಹೊಂದಲಿಲ್ಲ ಅಂತ ಮತ್ತೆ ಅಮ್ಮನ ಹತ್ತಿರ ಅಳಲು ತೋಡಿಕೊಂಡು, "ಈ ಸರ್ತೀನೂ ನನ್ನ ಪ್ರಯತ್ನಕ್ಕೆ ಯಶಸ್ಸು ಸಿಗದಿದ್ದರೆ ಈ ಹಾಡು ಹಾಡ್ತೀನಿ ನೋಡು; 'ನೆನ್ನೆ ನೆನ್ನೆಗೇ, ನಾಳೆ ನಾಳೆಗೇ ಇಂದು ಇಂದಿಗೇ ಚಿಂತೇ ಏತಕೇ" ಅಂತ ಮಗಳು ಅಂದಾಗ ಅಮ್ಮ ಮನಸಾರೆ ನಕ್ಕರು.

"ಅಮ್ಮಾ, ನೀನು ಹೇಗಿದ್ರೂ ತುಂಬಾ ಇನೋವೇಟಿವ್ ಅಡಿಗೆ ಮಾಡ್ತೀಯ. ಹೇಗಿದ್ರೂ ನಿಮ್ಮ ಮಹಿಳಾ ಮಂಡಳಿಯು ನಡೆಸೋ 'ಹೊಸರುಚಿ –ಸೃಜನಶೀಲತೆ' ಕಾಂಪಿಟೇಷನ್ನಲ್ಲಿ ನಿಂಗೆ ಬಹುಮಾನ ಬರ್ತಾನೇ ಇರುತ್ತೆ. ಈಗ ಈ ಚೀಯಾ ಸೀಡ್ಸ್‌ನೂ ಹಾಕಿ ಹೊಸರುಚಿ ಮಾಡು" ಅಂದಾಗ ಅಮ್ಮ "ಆಯ್ತಮ್ಮ, ಹಾಗೇ ಆಗ್ಲಿ" ಅಂತ ಆಲೋಚಿಸ್ತಿದ್ದಂತೆ ಬಾಗಿಲ ಬಳಿ ಬೆಲ್ ಆಯಿತು. ತನ್ನ ಪಥ್ಯ ನಿರ್ವಹಣೆ ಮಾಡುತ್ತಿದ್ದ ಜಾನು ಮತ್ತು ಪಾರು ಬಂದಿದ್ದು ನೋಡಿ ವಿನೂಗೆ ಬಹಳ ಆಶ್ಚರ್ಯವೆನಿಸಿತು.

'ಇದೇನು ಸ್ವಲ್ಪವೂ ಹಿಂಟ್ ಕೊಡದೇ ಬಂದಿದ್ದಾರೆ' ಅಂತ ಅಂದುಕೊಳ್ಳುತ್ತಿರುವಂತೆ ಅವರ ಹಿಂದೆಯೇ ಅಮ್ಮನ ಸಂದರ್ಶನ ಮಾಡಿದ್ದ ಆಸ್ಪತ್ರೆಯ ಸಿಬ್ಬಂದಿಯವರೂ ಬಂದರು, ಅಮ್ಮನಿಗೆ ನಮಸ್ಕಾರ ಮಾಡಿ, "ಅಮ್ಮಾ, ನಾವು ಹೇಳಿದ್ದೆವಲ್ಲ, ನಿಮ್ಮೊಂದಿಗೆ ಮತ್ತೊಂದು ಇಂಟರ್ವ್ಯೂ ಮಾಡ್ತೀವಿ" ಅಂತ, ನಮ್ಮೊಂದಿಗೆ ಎನ್ಜಿಓ ಕಂಪನಿಯೊಂದು ಕೈ ಜೋಡಿಸಿದೆ. ಪಾರೂ, ಜಾನು ಅವರೂ ನಿಮ್ಮ ಬಳಿ ಮಾತನಾಡಲು ಬಂದಿದ್ದಾರೆ. ಜನರ ಅನಾರೋಗ್ಯದ ಕಾರಣ, ಈಚಿನ ಆಹಾರ ಪದ್ಧತಿ, ಇದರಿಂದ ಆರೋಗ್ಯಕ್ಕೆ ಆಗುವ ದುಷ್ಪರಿಣಾಮಗಳು, ಪರಿಹಾರಗಳು, ಸಲಹೆ ಇತ್ಯಾದಿಗಳ ಬಗ್ಗೆ ಪ್ರತಿ ಮೂರು ದಿನಕ್ಕೆ ಒಂದು ಕಾರ್ಯಕ್ರಮ, ವರ್ಕ್‌ಶಾಪ್ ಇಟ್ಟುಕೊಂಡಿದ್ದೇವೆ.

ಇದರ ಬಗ್ಗೆ ತಮ್ಮ ಕುರಿತು ನಮ್ಮ 'ಆರೋಗ್ಯ' ಕ್ಲಿನಿಕ್‌ನಿಂದ ಉತ್ತಮ ಮಾಹಿತಿ, ಅಭಿಪ್ರಾಯ ಸಿಕ್ಕಿತು, ಇದಕ್ಕೆ ತಮಗಿಂತಾ ಉತ್ತಮರು, ಆದರ್ಶಪ್ರಾಯರು, ಅಭಿನಂದನೀಯರು ಮತ್ತಾರೂ ಸಿಗಲಾರರು. ಅದಕ್ಕಿಂತ ಹೆಚ್ಚಾಗಿ ನೀವು ವಿನೂ ಅಮ್ಮನೆಂದು ತಿಳಿದು ಮತ್ತಷ್ಟು ಸಂತೋಷವಾಯಿತು. ನೀವು ನಮ್ಮ ಆಹ್ವಾನ ಮನ್ನಿಸಿ

ನಮ್ಮ ಕಾರ್ಯಕ್ರಮವನ್ನು ನಡೆಸಿಕೊಡಲೇಬೇಕ್ರಮ್ಮ. ನಮ್ಮ ಕೈಲಾದ ಸಂಭಾವನೆ ನಿಮಗೆ ಕೊಡುತ್ತೇವೆ" ಅಂದ್ರು ವಿನೂ ಪಥ್ಯದ ಗೈಡ್‌ಗಳು. ನಂತರ ವಿನೂವನ್ನು ಕುರಿತು, "ಏನಮ್ಮ ವಿನೂ, ಇಷ್ಟು ಒಳ್ಳೆಯ ಮಾರ್ಗದರ್ಶನ ಮನೇಲೇ ಇಟ್ಟುಕೊಂಡು ನಮ್ಮ ಬಳಿಗೆ ಬರುವ ಅಗತ್ಯವೇನಿತ್ತು? ಅದೇನೋಅಂತಾರಲ್ಲ, ಹಿತ್ತಲಗಿಡ ಮದ್ದಲ್ಲ, ಮನೇಲೆ ಬೆಣ್ಣೆ ಇಟ್ಕೊಂಡು ತುಪ್ಪಕ್ಕೆ ಅಲೆದಾಡಿದ್ರಂತೆ ಅಂತ, ಹಾಗಾಯ್ತು. ಅದೆಷ್ಟು ಆಕ್ಟೀವ್ ಆಗಿ ಸ್ಲಿಂ ಎಂಡ್ ಟ್ರಿಂ ಆಗಿದ್ದಾರೆ ನೋಡು ನಿಮ್ಮಮ್ಮ! ಇಗೋ ನೀನು ನಮ್ಮ ಸಂಸ್ಥೆಗೆ ಕಟ್ಟಿದ್ದ ಹಣ ವಾಪಸ್ಸು ಕೊಡುತ್ತಿದ್ದೇವೆ. ಇನ್ನು ನೀನು ಅಮ್ಮನ ಮಾರ್ಗದರ್ಶನ ತೊಗೋ, ಒಂದು ತಿಂಗಳಲ್ಲಿ ಎವರಿಥಿಂಗ್ ಫಾಲ್ಸ್ ಇನ್ ಇಟ್ಸ್ ಪ್ಲೇಸ್. ನೀನೂ ಸೂಪರ್ ಸಣ್ಣ ಆಗಿ ಬಳುಕುವ ಬಳ್ಳಿಯಂತೆ ಆಗ್ತೀಯ. ನಿನ್ನ 'ಕರಿಮಣಿ ಮಾಲೀಕ' ನಿನಗೆ ಬೇಗನೇ ಸಿಗುತ್ತಾನೆ" ಅಂತ ನಗೆಚಟಾಕಿ ಹಾರಿಸಿದ್ರು.

'ಇಂಥ ಅಮ್ಮ ಎಲ್ಲರಿಗೂ ಇದ್ದರೆ. ನಾವು ನಡೆಸುವಂಥ ಸಂಸ್ಥೆಗಳೇ ಬೇಡಮ್ಮ' ಅಂದರು. ಅಮ್ಮ ಇದೆಲ್ಲವನ್ನೂ ಕೇಳಿದ ನಂತರ ಹೇಳಿದರು, "ಇರ್ಲಿ, ಆ ಹಣ ನೀವು ವಾಪಸ್ಸು ಕೊಡುವುದು ಬೇಡ. ನಾನು ಖಂಡಿತಾ ನಿಮ್ಮ ಕಾರ್ಯಕ್ರಮಕ್ಕೆ ಬಂದು ನನಗೆ ತಿಳಿದ ಮಾರ್ಗದರ್ಶನ ನೀಡುವೆ. ಹಾಗೇ ನಮ್ಮ ಮಹಿಳಾ ಮಂಡಲಿಯಲ್ಲಿ ನಡೆಯುವ ಆರೋಗ್ಯಭಾಗ್ಯ ಕಾರ್ಯಕ್ರಮದಲ್ಲಿ ನೀವೂ ಕೂಡಾ ಭಾಗಿಯಾಗಬಹುದು" ಅಂದರು. ರೀಮಾ, ವಿನೂ "ಆಹಾ ನಮ್ಮ ಡಯಟ್ಟಂತೆ, ಓಹೋ ನಮ್ಮ ಡಯಟ್ಟಂತೆ. ನಂಗು ನಿಂಗು ಡಯಟ್ಟಂತೆ. ಡಯಟ್ಟನ್ನು ಮಾಡೋಣಂತೆ, ರೆಸೊಲ್ಯೂಷನ್ ನಮ್ದೇ ಅಂತೆ. ಟಾಂ ಟಾಂ ಟಾಂ" ಅಂತ ಕೈಕೈ ಹಿಡಿದು ಹಾಡಿದರು.

"ಆರೋಗ್ಯವೇ ಮಹಾಭಾಗ್ಯ, ಅಡುಗೆಮನೆಯೇ ಔಷದಾಲಯ. ನಗು ನಗುತ್ತಾ ನಗಿಸುತ್ತಿರುವುದೇ. ಆಯುರಾರೋಗ್ಯದ ಮಹದೌಷಧ"ಅಂತ 24 ಕ್ಯಾರೆಟ್ ಶುದ್ಧಚಿನ್ನದ **'ಅಪರಂಜಿ'** ನಗೆಯನ್ನು ಬೀರುತ್ತಾ, ಇವರ ಪಥ್ಯಾವತರಣದ ಹೊಸವರ್ಷದ ರೆಸೊಲ್ಯೂಷನ್ ಯಶಸ್ವಿಯಾಗಲಿ ಅಂತ ತುಂಬು ಹೃದಯದಿ ಹಾರೈಸಿದರು ಅಮ್ಮ. ■

**ಮೂಲಾ ನಕ್ಷತ್ರ..**

**– ಸುಮನಾ**

ಅಂದು ಕಾಲೇಜು ತರಗತಿಯಲ್ಲಿ ಮೇಡಂ ಕೇಳಿದ್ರು..

ಮೂಲಾ ನಕ್ಷತ್ರದ ಹೆಣ್ಣು ಮಕ್ಕಳಿಗೆ ವಿವಾಹದ ತೊಂದರೆ ಎನ್ನುವುದು ನಿಜವೇ..ಯಾರು ಹೇಳ್ತೀರಿ..??

ಗುಂಡಮ್ಮ.. ಹೇಳಿದ್ಲು.. ಮೇಡಂ. ನಾನು ಹೇಳ್ತೀನಿ. ನನ್ನ ಉತ್ತರ ಕೇಳಿ..

"ಮೂಲಾ ನಕ್ಷತ್ರಕ್ಕೆ ಗಂಡು, ಹೆಣ್ಣು ಅಂತ ಬೇಧವಿಲ್ಲ.. ಎಲ್ಲರೂ ಮೂಲಾ ನಕ್ಷತ್ರದವರೇ..ಅಂದಳು..

ಅದು ಹೇಗೆ ಗುಂಡಿ.?? ಅಂತ ಕೇಳಿದ ಮೇಡಂಗೆ,

"ನೋಡಿ ಮೇಡಂ, ಗಂಡು, ಅಥವಾ ಹೆಣ್ಣು ಯಾರೇ ಆಗಿರಬಹುದು. ಎಲ್ಲ ಮಕ್ಕಳೂ. ಪ್ರಪಂಚದ ಯಾವುದೋ "ಮೂಲೆಯಲ್ಲೇ ಹುಟ್ಟಿರ್ತಾರಲ್ವಾ ಅದಕ್ಕೇ ಎಲ್ರೂ" ಮೂಲಾ ನಕ್ಷತ್ರ ಮೇಡಂ ಅಂದಾಗ ಗುಂಡಿಯ ಲಾಜಿಕ್ ಎಲ್ಲರನ್ನು ನಗೆಗಡಲಿನಲ್ಲಿ ಮುಳುಗಿಸಿತು..

# ತಲ್ಲಣಿಸದಿರು

ಎಚ್.ಗೋಪಾಲಕೃಷ್ಣ

**ತಲ್ಲಣಿಸದಿರು ಕಂಡ್ಯ ತಾಳು ಮನವೇ**

**ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ**

ಈ ಹಾಡು ನನ್ನ ನೆನಪು ಇರುವ ತನಕ ಮರೆಯಲು ಆಗದ ದಾಸರ ಪದ. ಮೊನ್ನೆ ತಾನೆ ಕನಕ ಜಯಂತಿ ಆಯ್ತು ತಾನೇ? ಕನಕ ಜಯಂತಿ ಅಥವಾ ಕನಕ ಎನ್ನುವ ಹೆಸರು ಕಿವಿಗೆ ಬಿದ್ದರೆ ಸಾಕು, ನಾನು ಐವತ್ತೈದು ವರ್ಷ ಹಿಂದಕ್ಕೆ ಓಡಿಬಿಡುತ್ತೇನೆ. ಈಗ ಹಿಂದೆ ಓಡಿ ಅಂದಿನ ಒಂದು ಸವಿನೆನಪನ್ನು ಕೆದಕಲೇ...

ನಾನಾಗ ಹೈಸ್ಕೂಲ್ ಫಸ್ಟ್ ಇಯರ್ ಅಂತ ಕಾಣುತ್ತೆ. ಸ್ಕೂಲಿನಲ್ಲಿ ಯಾವುದೋ ಸಮಾರಂಭ. ಎಲ್ಲಾ ಹುಡುಗರು ಹುಡುಗಿಯರನ್ನು ಕೂಡಿಸಿದ್ದರು, ಹೇಳೋದು ಮರೆತಿದ್ದೆ, ನಮ್ಮದು ಕೋ ಎಜುಕೇಶನ್ ಶಾಲೆ. ಹುಡುಗಿರು ಜತೇಲೇ ಓದುತ್ತಾರೆ ಅಂದರೆ ಹುಡುಗರಲ್ಲಿ ಪೈಪೋಟಿ ಹೆಚ್ಚು, ಹುಡುಗಿಯರನ್ನು ಮೆಚ್ಚಿಸಲು. ಹುಡುಗಿಯರನ್ನು ಮೆಚ್ಚಿಸಲು ಯಾವ ಅವಕಾಶ ಸಿಕ್ಕರೂ ಬಿಡದಿರುವ ಹುಡುಗರು, ಅವರ ನಡುವಿನಲ್ಲಿ ನಮ್ಮಂತಹ ಪೆದ್ದರು. ಕೊಂಚ ಬುದ್ಧಿವಂತರು ಎಂದು ಅನಿಸಿಕೊಂಡ ಹುಡುಗರು ಮೊದಲ ಬೆಂಚಿನಲ್ಲೇ ಕೂತು ಮೇಷ್ಟ್ರು ಮೇಡಮ್ಮುಗಳ ಪ್ರಶ್ನೆಗಳಿಗೆ ಉತ್ತರ ಕೊಟ್ಟುಕೊಂಡು ಬೀಗಿ ಸೆಟೆದು ಕೂಡುತ್ತಿದ್ದ ದೃಶ್ಯ ಕೊನೆಬೆಂಚಿನ ಸರದಾರರಿಗೆ ಸರ್ವೇಸಾಮಾನ್ಯ ಆಗಿತ್ತು. ಕೊನೆಬೆಂಚಿನೋವು ದಡ್ಡಮುಂಡೇವು, ಕನಿಷ್ಠ ಆರು ಸಾರಿ ಪರೀಕ್ಷೆ ಬರೆಯೋವು ಇವು ಅಂತ ಸ್ಕೂಲಿನ ಮೇಷ್ಟ್ರು, ಪ್ರಿನ್ಸಿಪಾಲ್ ನಿರ್ಧರಿಸಿದ್ದ ಕಾಲ ಅದು.

ಸ್ಕೂಲಿನ ಸಮಾರಂಭಕ್ಕೆ ಯಾರೋ ಚೀಫ್ ಗೆಸ್ಟ್, ಅವರ ಜತೆ ಇನ್ನೂ ಒಂದಿಬ್ಬರು ಭಾಷಣ ಮಾಡೋರು ಬರ್ತಾರೆ ಅಂತ ಮೇಷ್ಟ್ರುಗಳು ಕ್ಲಾಸಿನಲ್ಲಿ ಹೇಳಿದ್ದರು. ಅವರು ಬಂದಾಗ ಪ್ರಾರ್ಥನೆಗೆ ಅಂತ ಕೆಲವು ಹುಡುಗರು, ಕೆಲವು ಹುಡುಗಿಯರ ಆಯ್ಕೆ ಆಗಿತ್ತು. ಡ್ಯಾನ್ಸ್‌ಗೆ ಅಂತ ಮೂರು ಹುಡುಗಿಯರು ಇದ್ದರು. ನಾಟಕ ಮಾಡುಕ್ಕೆ ಆರು ಹುಡುಗಿರು, ನಾಲ್ಕು ಹುಡುಗರು, ಹೀಗೆ ಸೆಲೆಕ್ಟ್ ಆಗಿದ್ದವು. ಇವೆಲ್ಲಾ ಮುಂದಿನ ಬೆಂಚ್‌ನೋವು.

ಹಿಂದಿನ ಬೆಂಚ್‌ನೋವು ಸಮಾರಂಭದಲ್ಲಿ ಹಿಂದೆ ಹಾಕಿರುವ ಬೆಂಚಿನ ಮೇಲೆ ಕೂತು ಮೇಷ್ಟ್ರು ಸನ್ನೆ ಮಾಡಿದಾಗ ಚಪ್ಪಾಳೆ ತಟ್ಟಬೇಕು. ಗಲಾಟೆ ಮಾಡೋದು, ಸಿಳ್ಳೆ ಹಾಕೋದು, ಕೂಗೋದು ಮಾಡಿದರೆ ಟಿಸಿ ಕೊಟ್ಟು ಓಡಿಸಿಬಿಡ್ತೀನಿ ಅಂತ ಹೆಚ್ಚೆಮ್ ಬೇರೆ ಹೆದರಿಸಿದ್ದರು. ಹೀಗೆ ಭಯದಲ್ಲಿ ಕೊನೆಕೊನೇ ಬೆಂಚಿನಲ್ಲಿ ಆಕಳಿಸುತ್ತಾ ಕೂತಿದ್ದ ಪ್ರಭೃತಿಗಳಲ್ಲಿ ಎದ್ದುಕಾಣುತ್ತಿದ್ದ ಒಂದು ಧಡಿಯ ಇದ್ದನಾ, ಅದು ನಾನು.

ಆಗಲೇ ಬೆಂಚಿನ ಮೇಲೆ ಕೂತು ಒಂದೂವರೆ ಗಂಟೆ ಕಳೆದಿತ್ತು. ಗೆಸ್ಟುಗಳು ಇನ್ನೂ ಅಡ್ರೆಸ್ ಇರಲಿಲ್ಲ. ಡ್ರಿಲ್ ಮೇಷ್ಟ್ರು ನಿಮಿಷಕ್ಕೆ ಹತ್ತು ಸಲ ಬಂದು ಮೈಕ್ ಮುಂದೆ ನಿಂತು ಮೈಕ್ ಟೆಸ್ಟಿಂಗ್ ಒನ್ ಟೂ ತ್ರೀ ಮಾಡಿ ಮಾಡಿ ಹೋಗ್ತಾ ಇದ್ದರು. ಒಂದೊಂದು ಸಲ ಮೈಲ್ ಟೆಸ್ಟ್ ಮಾಡಿದಾಗಲೂ ಹಿಂದೆ ಬಂದು ಅಲ್ಲಿ ಕೂತಿದ್ದ ನಮಗ್ಯಾರಿಗಾದರೂ ಸೈಲೆನ್ಸ್ ಸೈಲೆನ್ಸ್ ಅಂತ ಗಟ್ಟಿ ದನಿಯಲ್ಲಿ ಹೆದರಿಸಿ, ಕೈಯಲ್ಲಿದ್ದ ಮಿಲಿಟರಿ ಲಾಠಿ ಅಲ್ಲಾಡಿಸಿ ಹೋಗೋರು. ಕನ್ನಡ ಮೇಷ್ಟ್ರು ಬಂದು ಮೈಕ್ ಮುಂದೆ ನಿಂತು ಹುಡುಗರು ಎಲ್ಲಾ ನಿಶ್ಯಬ್ದ ಆಗಿರಿ ಅನ್ನೋರು. ಇಂಗ್ಲಿಷ್ ಮೇಡಮ್ ಬಂದು

ಮೈಕ್ ಮುಂದೆ ನಿಂತು ಕೀಪ್ ಸೈಲೆಂಟ್, ಕೀಪ್ ಸೈಲೆಂಟ್ ಅಂತ ಆಗಾಗ ರಿಪೀಟ್ ಮಾಡೋದು, ಸೋಶಿಯಲ್ ಸ್ಟಡೀಸ್ ಮೇಡಮ್ ಮೈಕ್ ಮುಂದೆ ನಿಂತು ಸೀರೆ ಸೆರಗು ಸರಿಮಾಡ್ಕೊಂಡು ನೋ ನಾಯ್ಸ್, ನೋ ನಾಯ್ಸ್, ನೋ ನಾಯ್ಸ್ ಅಂತ ಕೀಚಲು ಧ್ವನೀಲಿ ಹೇಳಿ ಹೋಗೋದು, ಇದೆಲ್ಲಾ ಮತ್ತೆ ಮತ್ತೆ ರಿಪೀಟ್ ಆಗಿ ಆಗಿ ಮೈಕ್ ಮುಂದೆ ಯಾರು ಬರ್ತಾರೋ ಅವರ ಹಾಗೇ ನಾವೂ ಹೇಳೋದೂ ನಡೀತಿತ್ತಾ...

ಪ್ರಿನ್ಸಿಪಾಲ್ ಮೈಕ್ ಮುಂದೆ ಬಂದ್ರಾ/.. ಅವರೂ ಡಾಂಟ್ ಮೇಕ್ ನಾಯ್ಸ್ ಅಂದರಾ... ಅದೇನು ಬಂತೋ ತಲೆಗೆ! ಹಿಂದಿ ಮೇಡಮ್‌ನ ಕೂಗಿದರಾ... ಮೈಕಲ್ಲಿ ಕೇಳೋ ಹಾಗೇನೇ ಯಾವುದಾದರೂ ಹಾಡು ಹೇಳಿ ಹುಡುಗರನ್ನ ಎಂಗೇಜ್ ಮಾಡಿ, ಗಲಾಟೆ ಕಮ್ಮಿ ಆಗುತ್ತೆ ಅಂದರು. ಹಿಂದಿ ಮೇಡಮ್ ಸಾರ್ ಮೇರೀ ಗಲಾ ಖಲಾಬ್ ಹೋಗಯಾ ಹೈ ಅಂತ ಹೇಳಿ ಎರಡು ಮೂರು ಸಲ ಕೆಮ್ಮಿ ದೇಖೋ ಅಂದರು. ದೂರದಲ್ಲಿ ಕೂತಿದ್ದ ನಮಗೆ ಈ ಸಂಭಾಷಣೆ ಕಿವಿಯ ಪಕ್ಕದಲ್ಲಿ ಕೇಳಿಸಿತು.




ಮೈಕ್ ಹಾಕಿಕೊಂಡೇ ಅವರು ಮಾತಾಡ್ತಾ ಇದ್ದರು. ಅದಕ್ಕೇ ನಮಗೆ ಕೇಳಿಸಿದ್ದು. ಆ ವಿಮಲನ್ನೋ ಪುಷ್ಪನ್ನೋ ಸರಸ್ವತಿನೋ ಕರೆದು ಯಾವುದಾದರೂ ಹಾಡು ಹೇಳ್ತಾ ಇರು ಅಂತ ಹೇಳಿ ಗೆಸ್ಟ್ ಬರೋದು ಇನ್ನೂ ತಡ ಅಂತ ಹಿಂದಿ ಮೇಡಮ್‌ನ ಕಳಿಸಿ ಸೈಲೆನ್ಸ್ ಸೈಲೆನ್ಸ್ ಸೈಲೆನ್ಸ್ ಅಂತ ಕೂಗಿ ಅವರೂ ಸಹ ಮೈಕ್ ಟೆಸ್ಟಿಂಗ್ ಮಾಡಿಕೊಂಡರಾ...

ಹಿಂದಿ ಮೇಡಂ ಬಂದರು. ಅವರ ಹಿಂದೆ ಸರಸ್ವತಿ, ಪುಷ್ಪಾ, ವಿಮಲ, ಕೋಮಲ, ನರಸಿಂಹ, ಶ್ರೀನಿವಾಸ, ಆಂಜನಿ, ಹನುಮಂತ, ಇವರೆಲ್ಲಾ ಸಾಲಾಗಿ ಬಂದರು. ಇವರಲ್ಲಿ ಮೂರು ಜನ ನಮ್ಮ ಮೇಷ್ಟ್ರು, ಮಿಕ್ಕವರು ಆಫೀಸಿನವರು. ಮೇಡಂ ಮೊದಲು ಅಬ್ ಪುಷ್ಪಾಜೀ ಏಕ್ ಗಾನಾ ಗಾಯೀಗೆ ಅಂತ ಅನೌನ್ಸ್ ಮಾಡಿದರು. ಪುಷ್ಪಾಜೀ ಮೈಕ್ ಮುಂದೆ ನಿಂತು ಒಂದು ಹಿಂದಿ ಹಾಡು ಹೇಳಿದರು. ಅವರಾದ ಮೇಲೆ ಒಬ್ಬೊಬ್ಬರೇ ಬಂದು ಹಾಡು ಹೇಳಿ ಆಯ್ತಾ?

ಎಲ್ಲರೂ ಹಾಡಿದ್ದು ಆಯ್ತು. ಇತ್ತ ನಮ್ಮ, ಅಂದರೆ ಸಭಿಕರ ಗಲಾಟೆ ಸಹ ಹೆಚ್ಚಿತ್ತು. ಪ್ರಿನ್ಸಿಪಾಲ್ ಅದೆಲ್ಲಿಂದಲೋ ಓಡಿ ಓಡಿ ಬಂದರು. ಶಟ್‌ಅಪ್, ಸಾಯಿ... ಲೆನ್ಸ್ ಶಟ್ ಅಪ್ ಸಾಯಿ, ಲೆನಸ್ ಅಂತ ಕೂಗಿ ನಮ್ಮ ಸೌಂಡ್ ಕಮ್ಮಿ ಆಗುತ್ತಾ ಟೆಸ್ಟ್

ಮಾಡಿದರು.

ಹಿಂದಿ ಮೇಡಂ ಕಡೆ ದುರದುರಾ ದೂರ ನೋಡ್ತಾ ಸುಮ್ಮನೆ ಗಲಾಟೆ ಮಾಡಿಸ್ತಾ ಇದೀರಿ ಅಂತ ರೇಗಿದರು. ಗೆಸ್ಟ್ ಬರೋಕ್ಕೆ ಇನ್ನೂ ಸಮಯ ಇದೆ. ಯಾರನ್ನಾದರೂ ಕೂಗಿ ಹಾಡೋದಕ್ಕೆ ಹೇಳಿ ಅಂತ ನಮ್ಮ ಕಡೆ ಕೈ ತೋರಿಸಿದರು.

ಹಿಂದಿ ಮೇಡಂ ಈಗ ಲೀಡರ್‌ಶಿಪ್ ತೊಗೊಂಡಿದ್ದರು.

ಕೊಯಿ ಗಾನಾ ಗಾತಾ ಹೈ ಇದರ್? ಏಕ್ ಏಕ್ ಇದರ್ ಆವೋ ಅಂತ ನಮ್ಮ ಕಡೆ ನೋಡುತ್ತಾ ಹೇಳಿದರು.

ಕೊನೇ ಬೆಂಚಿನ ಮುಸಂಡಿಗಳು, ಯಾರೂ ಏಳಲಿಲ್ಲ. ಮುಂದೆ ಕೂತಿದ್ದ ಒಂದೆರೆಡು ಹುಡುಗಿಯರನ್ನು ಆವೊ ಗಾನಾ ಗಾವೋ ಅಂತ ಕರೆದರು. ಹುಡುಗೀಯರು ನಾಚಿಕೊಂಡು ಇನ್ನೂ ಮುದುರಿ, ಕರ್ಚೀಫನ್ನು ಬಾಯಿಗೆ ಅಡ್ಡ ಹಿಡಿದು ಮತ್ತೂ ಮಡಚಿಕೊಂಡರು. ಹಿಂದಿ ಮೇಡಮ್ ಇನ್ಯಾರನ್ನು ಕೂಗುತ್ತಾರೋ ಅಂತ ನಮ್ಮ ಗುಂಪಿನ ಎಲ್ಲರೂ ಅವರ ಕಣ್ಣು ತಪ್ಪಿಸಲು ತಲೆ ಬಗ್ಗಿಸಿ ಕೂತೇವಾ...

ಮೇಡಂ ಮೈಕ್ ಬಿಟ್ಟು ನಮ್ಮತ್ತ ಬಂದರು. ಒಂದೊಂದೇ ಬೆಂಚನ್ನೇ ನೋಡುತ್ತಾ ಯಾವ ಬಕರಾ ಸಿಗುತ್ತೆ ಅಂತ ತಲಾಶಿಸುತ್ತಾ ಬಂದರಾ? ಎಲ್ಲಾ ಬೆಂಚುಗಳನ್ನೂ ದಾಟಿ ಕೊನೇ ಬೆಂಚಿಗೆ ಬಂದರಾ... ಕೊನೇ ಬೆಂಚಿನಲ್ಲಿ ತಲೆ ಬಗ್ಗಿಸಿ ಓಡಿಹೋಗಲು ಬಿಟ್ರೆ ಸಾಕು ಎಂದು ಕಾಯುತ್ತಿದ್ದ ನಾವುಗಳು ಅವರ ಕಣ್ಣಿಗೆ ರಾಹು ಬಡಿದ ಹಾಗೆ ಕಾಣಿಸಬೇಕೆ...?

ಹತ್ತಿರ ಬಂದರು.

ಹೇಗೋ ಗೋಪಾಲ್ ಕಿಷನ್(ಹೀಗೇ ಅವರು ನನ್ನ ಕೂಗುತ್ತಾ ಇದ್ದದ್ದು) ಖ್ಯಾ ಈದರ್ ಬೈಟಾಹೈ ಕ್ಯಾ ಉತಾರೋ ಉತಾರೋ ಉತಾರೋ ಉತಾರೋ ಅಂತ ನನ್ನ ಎಬ್ಬಿಸಿದರು. ಕ್ಲಾಸ್ ಮೇ ಇತನಾ ಬಾತ್ ಕರ್ತೇ ಹೋ ತುಮ್. ಆವ್ ಆವ್, ಏಕ್ ಗಾನಾ ಸುನಾವೋ ಆವ್ ಅಂತ ಕೈಹಿಡಿದು ದರದರದರ ಎಳೆದುಕೊಂಡು ಹೋದರಾ.'

ಮೇಡಮ್, ಚೋಡಿಯೇ, ಮೇಡಮ್ ಚೋಡಿಯೇ, ಮೇಡಮ್ ಚೋಡಿಯೇ ಮೈ ಕೊ ಗಾನಾ ನೈ ಆತಾ ಚೋಡಿಯೇ ಚೋಡಿಯೇ ಅಂತ ಬೇಡಿಕೊಂಡರೂ ಬಿಡದೆ ಹಟ ಹಿಡಿದ ತ್ರಿವಿಕ್ರಮ ಮರದಿಂದ ಬೇತಾಳನನ್ನು ಎಳೆದು ಇಳಿಸಿದ ಹಾಗೇ ನನ್ನನ್ನು ಮೈಕ್ ಮುಂದೆ ದೂಡಿ ಪಕ್ಕದಲ್ಲಿ ಅವರು ನಿಂತರು. ಅವತ್ತು ಬೆಳಿಗ್ಗೆ ತಾನೇ ಅವರ ಕ್ಲಾಸಿನಲ್ಲಿ ಪುಸ್ತಕದ ಮಧ್ಯೆ ಚಂದಮಾಮ ಇಟ್ಟುಕೊಂಡು ಓದ್ತಾ ಇದ್ದೆ. ಅವರು ಹತ್ತಿರ ಬಂದು ಬಗ್ಗಿ ನೋಡೋವರೆಗೂ ಗೊತ್ತಾಗಿರಲಿಲ್ಲ. ಗೋಪಾಲ್ ಕಿಶನ್ ಏ ಕ್ಯಾ ಪಡ್ ರಹೇ ಹೋ ಅಂತ ಅವರು ಕೋಲಿನಿಂದ ತೀವಿದಾಗಲೇ ಗೊತ್ತಾಗಿದ್ದು.

ಮೇಡಂ, ಚಂದಮಾಮ, ಬೇತಾಳ ಕತೆಗಳು ಅಂತ ಹೇಳಿದ್ದೆ. ಚಂದಮಾಮ ಕಿತ್ತುಕೊಂಡು ಬೆಂಚಿನ ಮೇಲೆ ನಿಲ್ಲಿಸಿದ್ದರು. ಅದಿನ್ನೂ ಅವರ ತಲೇಲಿ ಕೂತಿತ್ತು ಅಂತ ಕಾಣುತ್ತೆ.

ಆವೋ, ಗಾನಾ ಗಾವೊ ಅಂತ ಹೇಳುತ್ತಾ ಮೈಕ್ ಮುಂದೆ ನನ್ನನ್ನು ನಿಲ್ಲಿಸಿದರು. ಏಕ್ ಮಿನಿಟ್ ಟೆಹರೋ ಅಂದರು. ಟೆಹರಿದೆ. ನನ್ನನ್ನು ಪಕ್ಕಕ್ಕೆ ತಳ್ಳಿ ಅವರು ಮೈಕ್ ಮುಂದೆ ಬಂದರು. ದೇಖಿಯೇ ಸಾಯ್... ಲೆಸ್ಸ್ ಅಂದರು. ಹುಡುಗರ ಗದ್ದಲ ಕೊಂಚ ಕಡಿಮೆ ಆಯ್ತಾ...

ಆಬ್ ಹಮಾರಾ ಬಹುತ್ ಟ್ಯಾಲೆಂಟೆಡ್ ನೌಜವಾನ್ ಗೋಪಾಲ್ ಕಿಶನ್ ಗಾತಾ ಸಾಯ್ ಲೆನ್ಸ್ ಅಂತ ಮತ್ತೆ ಕೂಗಿದರಾ... ಮೈಕ್ ಮುಂದೆ ನನ್ನ ತಳ್ಳಿದರು.

ಹಿಂದಿ ಮೇಡಂಗೆ ಆ ಕ್ಷಣದಲ್ಲಿ ಜಗತ್ತಿಗೆ ತಾವು ಎಂತಹ ಮಹೋಪಕಾರ ಮಾಡ್ತಾ ಇದೀನಿ, ಜಗತ್ತನ್ನು ಎಂತಹ ದೊಡ್ಡ ಪ್ರಳಯದಿಂದ ತಪ್ಪಿಸುತ್ತಾ ಇದ್ದೀನಿ ಎನ್ನುವುದರ ಬಗ್ಗೆ ಲವಲೇಶವೂ ಜ್ಞಾನ ಇರಲಿಲ್ಲ ಮತ್ತು ಪ್ರಪಂಚ ಮುಂದೆ ತಮ್ಮನ್ನು ಹೇಗೆ ಸ್ಮರಿಸಬಹುದು ಎನ್ನುವ ಸಣ್ಣ ಅಂದಾಜು ಸಹ ಇರಲಿಲ್ಲ. ಇದು ಅವರ ಹಿಂದೆ ನಿಂತು ನನ್ನ ವಿಧಿ ಆಡಿಸಿದ ಆಟ ಎಂದು ನಾನು ಎಷ್ಟೋ ವರ್ಷಗಳ ನಂತರ ತಿಳಿದೆ!

ಮೈಕ್ ಮುಂದೆ ನನ್ನ ತಳ್ಳಿದರು. ಅದುವರೆಗೂ ನನಗೆ ಮೈಕಲ್ಲಿ ನನ್ನ ಮಾತು ಹೇಗೆ ಕೇಳುತ್ತೆ ಎಂದು ಕೇಳಬೇಕು ಅನ್ನುವ ದೊಡ್ಡ ಆಸೆ ಇತ್ತು ಮತ್ತು ದೈವ ನನಗೊಂದು ಅವಕಾಶ ಕೊಟ್ಟಿದೆ ಅನಿಸಿತು.

ಗಾನಾ ಗಾವೋ ಅಂದರಲ್ಲಾ, ಹಿಂದಿನ ದಿವಸ ತಾನೇ ನಮ್ಮ ಕನ್ನಡ ಪುಸ್ತಕದಲ್ಲಿದ್ದ 'ತಲ್ಲಣಿಸದಿರು ಕಂಡ್ಯ ತಾಳು ಮನವೇ;

ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ' ಎನ್ನುವ ಹಾಡು ಓದಿಕೊಂಡಿದ್ದೆ ಮತ್ತು ನಮ್ಮ ಅಮ್ಮ ಇದನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅದನ್ನು ಅದೆಷ್ಟೋ ಸಾವಿರ ಸಲ ಕೇಳಿ ಬಾಯಿಪಾಠ ಆಗಿತ್ತು.

ಮೈಕ್ ಮುಂದೆ ಭಂಡ ಧೈರ್ಯದಿಂದ, ಎದೆ ಉಬ್ಬಿಸಿ ನಿಂತೆ. ಒಂದು ಸಲ ಕೆಮ್ಮಿದೆ. ಗಂಟಲು ಸರಿಹೋಗಿದೆ ಅನಿಸಿತು.

ತಲ್ಲಣಿಸದಿರು ಕಂಡ್ಯ... ಅಂತ ಶುರು ಮಾಡಿದೆ. ಎದುರು ಕೂತ ಸ್ನೇಹಿತರಲ್ಲಿ, ಸಹಪಾಠಿಗಳಲ್ಲಿ ವಿದ್ಯುತ್ ಸಂಚಲನ ಆಯಿತು. ಮುಂದಿನ ಪದ ಹೇಳುವಷ್ಟರಲ್ಲಿ ಆ ಪದವೇ ಮರೆತುಹೋಯಿತು. ಇಂತಹದ್ದಕ್ಕೆ ಮರೆತರೆ ಆಗುತ್ತದೆಯೇ?

ಮತ್ತೆ ತಲ್ಲಣಿಸದಿರು ಕಂಡ್ಯ... ಹಾಡಿದೆ. ಒಂದು ಸೆಕೆಂಡ್ ಹಾಡು ನಿಲ್ಲಿಸಿ ಮುಂದಿನ ಪದ ನೆನೆಸಿಕೊಳ್ಳಲು ಯತ್ನಿಸಿದೆ. ಪದ ಮತ್ತೆ ನೆನಪಿಗೆ ಬರಲಿಲ್ಲ. ಇಂತಹ ಅಡಚಣೆಗೆ ಸೊಪ್ಪು ಹಾಕಲೇಬಾರದು ಅನಿಸಿತು.

ಮತ್ತೆ ತಲ್ಲಣಿಸದಿರು ಕಂಡ್ಯ... ಹಾಡಿದೆ. ಈ ರಿಪಿಟೇಶನ್ ನಾಲ್ಕು ಸಲ ಆಯಿತು ಅಂತ ಕಾಣಿಸುತ್ತೆ. ಐದನೇ ಸಲ ತಲ್ಲಣಿಸದಿರು ಕಂಡ್ಯ... ಹಾಡಿದೆ. ಇಡೀ ಜನಸ್ತೋಮದ ಮಧ್ಯೆ ಸಾವಿರಾರು ನಾಯಿಗಳು ಊಳಿಡುವ ಶಬ್ದ ಕೇಳಿಸಿತು. ಊಳಿಡುವ ಶಬ್ದದ ಜತೆಗೆ ಅಸಂಖ್ಯಾತ ಬೆಕ್ಕುಗಳು ಮಿಯಾಂವ್ ಮಿಯಾಂವ್ ಮಿಯಾಂವ್ ಎಂದವು. ನನ್ನ ಅಣ್ಣ ಆಗ ಎಸ್ಸೆಲ್ಸಿ ಅದೇ ಶಾಲೆಯಲ್ಲಿ. ಮುಂದಿನ ಬೆಂಚಿನಲ್ಲಿ ಕೂತಿದ್ದ. ಅವನ ಪಕ್ಕ ಅವನ ಸ್ನೇಹಿತರು ಕೂತಿದ್ದರು. ಅವರಲ್ಲೊಬ್ಬ ದೆವ್ವದ ರಾಗ ಅಂತ ಜೋರಾಗಿ ಕೂಗಿದ. ಇಡೀ ಜನಸ್ತೋಮಕ್ಕೆ ಒಂದು ರೀತಿಯ ಉನ್ಮಾದ ಹತ್ತಿತು. ಕತ್ತೆರಾಗ ಎಂದು ಕೆಲವರು, ಕಿರುಬರಾಗ ಎಂದು ಕೆಲವರು ಕೂಗಾಡಲು ಶುರು ಮಾಡಿದರು. ಅಲ್ಲೆಲ್ಲೋ ಇದ್ದ ಪ್ರಿನ್ಸಿಪಾಲ್ ಓಡಿಬರೋದು ಕಾಣಿಸಿತು. ಹಿಂದಿ ಮೇಡಮ್, ಗೆಸ್ಟ್ ಬಂದರು, ಹಾಡು ನಿಲ್ಸಿ, ನಿಲ್ಸಿ, ಅನ್ನುವ ಸೂಚನೆ ಬಂತು. ಮೇಡಮ್ 'ಗೋಪಾಲ್ ಕಿಸ್ನ, ಆವ್ ಆವ್' ಅಂತ ರಟ್ಟೆ ಹಿಡಿದು ಎಳೆದರು.

ಎದುರಿಗೆ ಕೂತ ಕೋಟಿ ಕೋಟಿ ಜನ ನನ್ನನ್ನು ಹೀಯಾಳಿಸುತ್ತಾ ಇದ್ದರು.

ಹೀಯಾಳಿಕೆಯ ಜತೆಗೆ ಕತ್ತೆರಾಗ ಅಂತ ಕೆಲವರು ಖೋರಸ್ ಮಾಡಿದರು.

ಆಗ ನಾನೇನು ಮಾಡಿದೆ ಅಂದರೆ...

ಒಂದು ಪ್ರತಿಜ್ಞೆ ಮಾಡಿದೆ, ಒಂದು ಶಪಥ ಮಾಡಿದೆ. ಇನ್ನು ಮುಂದೆ ಜೀವ ಇರುವ ವರೆಗೂ ನಾನು ಹಾಡೋದಿಲ್ಲ ಎನ್ನುವ ಭೀಷ್ಮಪ್ರತಿಜ್ಞೆ ಮಾಡಿಬಿಟ್ಟೆ.

ನಿಧಾನಕ್ಕೆ ನಾನು ಬೆಳೀತಾ ಬಂದ ಹಾಗೆ ನನ್ನ ಪ್ರತಿಜ್ಞೆಯಿಂದ ಮಾನವಕುಲಕ್ಕೆ ಆದ ಹಾನಿ, ನಷ್ಟದ ಅರಿವು ತಿಳಿಯಿತು. ಜಗತ್ತು ಒಬ್ಬ ಭೀಮಸೇನ್ ಜೋಶಿ, ಒಬ್ಬ ಮುಖೇಶ್, ಒಬ್ಬ ಬಾಲಮುರಳಿ, ಒಬ್ಬ ಬಾಲಸುಬ್ರಮಣಿ, ಒಬ್ಬ ಸುಬ್ಬಲಕ್ಷ್ಮಿ... ಇಂತಹ ಇವರ ಸರಿಸಮಾನ ಗಾಯಕ ಒಬ್ಬನನ್ನು ಕಳೆದುಕೊಂಡಿತು. ಮತ್ತೆ ನಾನು ಸಂಗೀತ ಕಲಿಯುವ ಆಸೆಯನ್ನೂ ಸಹ ಮಾಡಲಿಲ್ಲ. ಇಂತಹ ಮಹಾನ್ ಗಾಯಕ ಒಬ್ಬ ಗಂಟಲು ತೆರೆಯುವ ಮುನ್ನವೇ ಗಂಟಲು ಮುಚ್ಚಿತು ಎನ್ನುವ ಸತ್ಯ ಪ್ರಪಂಚದ ಅರಿವಿಗೇ ಬಾರದೇ ಹೋಯಿತು.

ಒಟ್ಟಿನಲ್ಲಿ ಪ್ರಪಂಚ ಒಬ್ಬ ಸಂಗೀತ ಸಾಗರವನ್ನು ಕಳೆದುಕೊಂಡಿತು. ■

**ಲಕ್ಷ್ಮಣ್ ಕೊರವಂಜಿ**


ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.


ಅವುಗಳಲ್ಲಿ ಇದೂ ಒಂದು – ನಿಮಗಾಗಿ.



ಹಜಾಮ—" ಹೇಗೆ ಮಾಡಲಿ ಸಾರ್ "

" ಬಾಯಿ ಮುಚ್ಚಿಕೊಂಡು "


ಪುರಾಣದ ನವ್ಯ ಕಥೆಗಳು
ಕಚ ದೇವಯಾನಿ
ಚಿತ್ರಕಥೆ: ಶಿವು ಚಿತ್ರರಚನೆ: ರಾಂಕಿ ಬೆಳ್ಳೂರ್
ಸಂಜೀವಿನಿ ವಿದ್ಯೆಯನ್ನು ಕಲಿಯಲು ದೇವಗುರು ಪುತ್ರ ಕಚ, ವಿದ್ಯಾರ್ಥಿಯಾಗಿ ಅಸುರ ಗುರುಗಳಾದ ಶುಕ್ರಾಚಾರ್ಯರಲ್ಲಿಗೆ ಬರುತ್ತಾನೆ. ದೇವಯಾನಿ ಗುರುಪುತ್ರಿ.ಮುಂದೆ ಓದಿ...
ಗುರುಗಳೇ, ನನಗೊಂದು ಸೀಟ್ ಬೇಕು.
ಯಾವ ಕಾಂಬಿನೇಷನ್?
ಪಿ.ಸಿ.ಎಂ.ಬಿ. ಬೇಡ ಸಂ.ಜೀ.ವಿ.ನಿ. ಕೊಡಿ.
ಡೊನೇಶನ್ ಕೊಡ್ತಾನಾ ಕೇಳಪ್ಪಾ !
ಕ್ರಮೇಣ ಕಚ ದೇವಯಾನಿಯರ ಮಧ್ಯೆ ಮೊಹಬ್ಬತ್ ಉದ್ಭವಿಸಿತು.
ನನ್ನ ಕಣ್ಣಿಗೆ ನೀನು ಥೇಟ್ ದೀಪಿಕಾ ಥರಾ ಕಾಣಿಸ್ತೀ.
ನೀನಂತೂ ಡಿಟ್ಟೋ ಅನುಪಮ್ ಖೇರ್ !
ಅಸುರರು ಇದನ್ನು ಸಹಿಸದೆ ಕಚನನ್ನು ಕೊಂದು ತುಂಡು ಮಾಡಿ ಬೀದಿ ನಾಯಿಗೆ ಹಾಕಿದರು.


ದೇವಯಾನಿ ಬೇಡಿಕೆಯಂತೆ ಶುಕ್ರಾಚಾರ್ಯರು ಸಂಜೀವಿನಿ ಪ್ರಯೋಗಿಸಿದರು. ಕಚ ಬೀದಿ ನಾಯಿ ಹೊಟ್ಟೆ ಸೀಳಿಕೊಂಡು ಹೊರಬಂದ.
ಕಚ, ಬಾ!
ಇಗೋ ಬಂದೆ ಗುರುಗಳೇ !
ಅಯ್ಯೋ ನನ್ನ ಮುದ್ದಿನ ಟಾಮಿ !
ಪುನಃ ಅಸುರರು ಕಚನನ್ನು ಸುಟ್ಟು ಬೂದಿ ಮಾಡಿ ಮದ್ಯದಲ್ಲಿ ಕದಡಿ ಗುರುಗಳಿಗೆ ಕುಡಿಸಿದರು.
ದೇವಯಾನಿಯ ಬಲವಂತಕ್ಕೆ, ಸಂಜೀವಿನಿ ಮೂಲಕ ಕಚ ಅವರ ಹೊಟ್ಟೆಯಲ್ಲಿರುವುದನ್ನು ಅರಿತರು.
ಈಗೇನು ಮಾಡಲಮ್ಮ ?
ಫೆಂಟಾಸ್ಟಿಕ್ ! ಅಸುರ ಲೋಕದ ಮೊಟ್ಟ ಮೊದಲ ಪುರುಷಗರ್ಭ ಅಂತ ಥೀಸಿಸ್ ಬರೆದು ಡಾಕ್ಟರೇಟ್ ಪಡೀತೀನಿ.
ಗುರುಗಳು ಕಚನಿಗೆ ಸಂಜೀವಿನಿ ಬೋಧಿಸಿದ ನಂತರ ಕಚನು,ಗುರುಗಳ ದೇಹ ಸೀಳಿ ಹೊರಬಂದ. ತಕ್ಷಣ ಅವರನ್ನು ಸಂಜೀವಿನಿಯಿಂದ ಬದುಕಿಸಲು ಉದ್ಯುಕ್ತನಾದ.
ಕಚ ! ತಾಳು ! ಇದೇ ಒಳ್ಳೆ ಸಮಯ... ದೇವಲೋಕಕ್ಕೆ ಓಡಿ ಹೋಗೋಣ!!
ಗುರುಗಳೇ ! ಬದುಕಿ ಬನ್ನಿ
ನನ್ನ ಕೋರ್ಸ್ ಮುಗೀತು. ಹೊರಡ್ತೀನಿ.
ನಮ್ಮ ಮದುವೆ ಯಾವಾಗ? ದೇವಲೋಕದಲ್ಲಿ ಮನೆ ಬಾಡಿಗೆ ರೇಟ್ ಹೇಗೆ?
ನೀನು ಗುರುಪುತ್ರಿ... ಸೋದರಿ ಸಮಾನ. ಮದುವೆ ಮಾತೇ ಬರಲ್ಲ.
ಥೂ ! ನೀಚ! ನಿನಗೆ ಡಿಗ್ರಿ ಸರ್ಟಿಫಿಕೇಟ್, ಮಾರ್ಕ್ಸ್ ಕಾರ್ಡ್ ಯಾವುದೂ ಸಿಗಲ್ಲ... ತೊಲಗಾಚೆ !
ನೀತಿ: ಯಾವ ಯಾವ್ದೋ ಕಾಂಬಿನೇಷನ್ ತೊಗೊಂಡ್ರೆ, ಏನೇನೊ ಆಗತ್ತೆ.

## ಆದರಪೂರ್ವಕ ಅನಂತಾನಂತ ವಂದನೆಗಳು

**ಅಪರಂಜಿಯ ನಿರ್ವಹಣೆಗೆ ಸಹಾಯ ಹಸ್ತ ನೀಡಿ ಬಹು ಔದಾರ್ಯತೆಯಿಂದ ದೇಣಿಗೆ ನೀಡಿರುವ ಈ ಎಲ್ಲ ಮಹಿಳೆ ಮತ್ತು ಮಹನೀಯ ರುಗಳಿಗೆ ಅಪರಂಜಿಯ ತುಂಬು ಹೃದಯದ ಕೃತಜ್ಞತೆಗಳು.**

**ಸರ್ವಶ್ರೀ ಮತ್ತು ಶ್ರೀಮತಿ,**

ಪಾಲಹಳ್ಳಿ ವಿಶ್ವನಾಥ್
ಗಾಯತ್ರಿ ಮೂರ್ತಿ
ಶ್ಯಾಮಲಾ ರವಿಶಂಕರ್
ಉಮಾ ಸುರೇಶ್
ಸುಬ್ಬಣ್ಣ ಕಣ್ಣೂರ್
ಪ್ರಭಾ ಕಾಶ್ಯಪ್
ಬಿ.ವಿ. ಶಶಿಧರ್
ಬಿ.ಆರ್. ಮಾಧವ ರಾವ್
ರಾ.ಶಿ. ಬಳಗ
ಮಲ್ಲಪ್ಪ ಗೌಡ
ಬಿ.ಎಸ್. ವಿಜಯೇಂದ್ರ
ಬಿ.ಎನ್. ವಿಜಯ
ಜೆ.ಎಸ್. ಶೆನಾಯ್
ಸುಧೀರ್ ಕುದುವಳ್ಳಿ
ಪ್ರವೀಣ್ ನಾಯಕ್
ಚಿತ್ರಾ ರಾಮಚಂದ್ರನ್
ಸೌಮ್ಯ ಕುದುವಳ್ಳಿ
ಕೃಷ್ಣ ದೇಶಿಕ
ಅರಕಲಗೂಡು ಶ್ರೀಕಂಠಯ್ಯ
ವಿದ್ಯಾ ಶ್ರೀಹರಿ
ಶ್ಯಾಮಲಾ ಸತ್ಯ
ಸರಸ್ವತಿ ಬೆಳ್ಳೂರ್
ಅಶೋಕ್ ಹೆಮ್ಮಿಗೆ
ಬಿ.ಎಸ್. ಶ್ರೀಧರ್
ಕೆ.ವಿ. ಭುವನೇಶ್
ಮಂಗಳಾ
ಬಿ.ವಿ. ಪ್ರಕಾಶ್
ಸುಶೀರ್
ಮಹೇಶ್ ಬೆಳ್ಳೂರ್
ಎ.ಎನ್. ಶರತ್ ಬಾಬು
ಬಿ.ಟಿ. ರಾಘವೇಂದ್ರ
ಆಶಾ ಕೃಷ್ಣಸ್ವಾಮಿ
ಎ.ಆರ್ ಸುಬ್ಬುಲಕ್ಷ್ಮಿ
ಆನಂದರಾವ್
ಶಿವದೀಪ್
ಬಿ.ಸಿ.ಭದ್ರೇಶ್
ಸುಹಾಸ್
ಸೌಮ್ಯ
ಸವಿತಾ ಬೆಳ್ಳೂರ್
ಸಿ.ಬಿ. ಶ್ರೀವತ್ಸನ್

---


**ಅಪರಂಜಿಗೆ ಇನ್ನೂ ಯಾರಾದರೂ ದೇಣಿಗೆ ನೀಡುವುದಾದರೆ ಅಪರಂಜಿ ಸ್ವಾಗತಿಸುತ್ತಾಳೆ. ಅಂತಹವರು ಅಪರಂಜಿಯಲ್ಲಿರುವ ಬ್ಯಾಂಕ್ ವಿವರ ಪಡೆಯಬಹುದು. ದೇಣಿಗೆ ಕಳಿಸಿ ನಮಗೆ ಮಿಂಚಂಚೆ ಕಳಿಸಿದರೆ ಒಳ್ಳೆಯದು**

# ಚಿತ್ರ ವಿಚಿತ್ರ ಅನುಭವಗಳು

ದೊಡ್ಡರಂಗೇಗೌಡ

ಆಗಷ್ಟೇ ನಾನು ಚಿತ್ರರಂಗದಲ್ಲಿ ಗೀತರಚನಕಾರನಾಗಿ ಕಣ್ಣುಬಿಡುತ್ತಿದ್ದೆ. ಒಂದು ಚಿತ್ರಕ್ಕೆ ಹಾಡು ಬರೆಯಲು ನನ್ನನ್ನು ನಿರ್ಮಾಪಕರು ಮದರಾಸಿಗೆ ಕರೆದುಕೊಂಡು ಹೋದರು. ಶನಿವಾರ ಮತ್ತು ಭಾನುವಾರ ನನಗೆ ರಜ ಇದ್ದುದರಿಂದ ಪ್ರಖ್ಯಾತ ಸಂಗೀತ ನಿರ್ದೇಶಕರ ಬಳಿ ಕುಳಿತು ಮಾಧುರ್ಯಮಯವಾದ ಮತ್ತು ಸಾಹಿತ್ಯಪೂರ್ಣವಾದ ಐದು ಹಾಡುಗಳನ್ನು ಬರೆದೆ. ಭಾನುವಾರ ರಾತ್ರಿ ನಾನು ವಾಪಸ್ ಬಂದೆ, ಬರಿಗೈಲಿ. ನನ್ನ ಮಗನ ಬಳಿ ನಿಮ್ಮ ಸಂಭಾವನೆ ಕಳಿಸಿಕೊಡುತ್ತೇನೆ ಎಂದರು. ಹೊರಡುವಾಗ ನನಗೆ ಟ್ರೈನ್ ಟಿಕೆಟ್ ತೆಗೆದುಕೊಟ್ಟರು, 30 ರೂಪಾಯಿ ತಿಂಡಿ ಖರ್ಚಿಗೆ ಎಂದು ಕೊಟ್ಟರು. ಬೇರೆ ದಾರಿ ಇರಲಿಲ್ಲ. ಏನೋ ನಂಜಣ್ಣ ಎಂದರೆ ಬಂದಷ್ಟೇ ಗುಂಜಣ್ಣ ಎನ್ನುವ ಗಾದೆಯಂತೆ. ಒಂದೆರಡು ತಿಂಗಳಾದರೂ ಸಂಭಾವನೆಯ ಸುಳಿವೇ ಇಲ್ಲದ್ದರಿಂದ ಅವರ ಮನೆ ಬಾಗಿಲಿಗೆ ಸುಮಾರು ದಿನ ಅಲೆದೆ. ಆಗ ಬಾ ಈಗ ಬಾ ಹೋಗಿ ಬಾ ಎನ್ನುವುದಷ್ಟೇ ಅನುಭವ ಆದದ್ದು. ಕೊನೆಗೂ ಒಂದು ದಿನ ನನ್ನ ಸಂಭಾವನೆ ಕೊಡ್ತೀರೋ ಇಲ್ಲವೋ ಅಂತ ಕೇಳಿಯೇಬಿಟ್ಟೆ. ಅದಕ್ಕೆ ಅವರು 'ಆಯ್ತು. ಮುಂದಿನ ಸೋಮವಾರ ನಮ್ಮ ಹಾಲಿನ ಅಂಗಡಿಯ ಹತ್ತಿರ ಬನ್ನಿ. ಹೊಂದಿಸಿ ಇಟ್ಟಿರುತ್ತೇನೆ, ಕೊಟ್ಟೇಬಿಡ್ತೀನಿ, ನಿಮ್ಮ ಋಣ ನನಗ್ಯಾಕೆ' ಅಂದರು. ಅವರು ಹೇಳಿದ ಸೋಮವಾರ ಬಂತು. ಅವರು ಹೇಳಿದ ಹಾಲಿನ ಅಂಗಡಿಯ (ಬೂತ್) ಹತ್ತಿರ ಹೋದೆ. ನನ್ನ ಮುಖ ಕಂಡು ನನಗೆ ಅರ್ಧ ಟೀ ಹೇಳಿ ತಮ್ಮ ಪಾಡಿಗೆ ತಾವು ವ್ಯಾಪಾರ ಮಾಡುತ್ತಿದ್ದರು. ಇವತ್ತು ನನಗೆ ಅರ್ಧ ಟೀನೇ ಗತಿ ಎಂದುಕೊಂಡು ಹತಾಶ ಭಾವದಲ್ಲಿದ್ದೆ. ಆಗ ಅವರು 'ಮೇಷ್ಟ್ರೇ, ಬೇಜಾರು ಮಾಡ್ಕೊಬೇಡಿ' ಅಂದು ಒಂದು ಬಟ್ಟೆಚೀಲ ತೆಗೆದು ನನ್ನ ಕೈಗಿಟ್ಟು 'ಇದೆಲ್ಲಾ ನಿಮಗೇನೇ, ನಮಸ್ಕಾರ. ಹೋಗಿಬನ್ನಿ' ಅಂದರು. ನಾನು ಚೀಲ ಹಿಡಿದು ಮನೆಗೆ ಬಂದೆ. ಅದರಲ್ಲಿ ಏನಿರಬಹುದು, ಎಷ್ಟು ದುಡ್ಡಿರಬಹುದು ಅಂತ ಅಲ್ಲೇ ಅವರ ಅಂಗಡಿಯಲ್ಲೇ ತೆಗೆದು ನೋಡಲಿಲ್ಲ. ಮನೆಯಲ್ಲಿ ಒಂದು ಚಾಪೆ ಮೇಲೆ ಬಟ್ಟೆ ಚೀಲ ಕೊಡವಿದೆ. ಏನಾಶ್ಚರ್ಯ, ಅದರಲ್ಲಿ ಬರೀ ಎಂಟಾಣೆ, ಒಂದು ರೂಪಾಯಿ ನಾಣ್ಯಗಳೇ ಇದ್ದವು. ಎಲ್ಲವನ್ನೂ ಕೂತು ಎಣಿಸಿದೆ. ಚಾಪೆಯ ಮೇಲೆ ಐನೂರು ರೂಪಾಯಿಯ ನಾಣ್ಯಗಳೇ ತುಂಬಿ ತುಳುಕಿದವು. ಹೆಂಡತಿಯನ್ನು ಕರೆದು ನನ್ನ ಸಂಭಾವನೆಯನ್ನು ತೋರಿಸಿದೆ. ಮಗನಿಗೆ ಆಡೋದಕ್ಕೆ ಕೊಡಿ ಎಂದು ತಮಾಷೆ (ಅಪಹಾಸ್ಯ) ಮಾಡಿದಳು. ಮಗನಿಗೆ ಆಗ ಏಳೆಂಟು ವರ್ಷ. ಮಗನಿಗೋ ಬಹಳ ಸಂಭ್ರಮ. ನಾಣ್ಯಗಳನ್ನು ಅವನು ಎಣಿಸಿದ್ದೂ ಎಣಿಸಿದ್ದೇ. 'ಅಮ್ಮಾ ನೋಡಮ್ಮಾ ಎಷ್ಟೊಂದು ದುಡ್ಡು!' ಅಂತ ನಾಣ್ಯಗಳನ್ನು ಒಂದರ ಮೇಲೊಂದನ್ನು ಪೇರಿಸುತ್ತಿದ್ದ. ಅದನ್ನು ಕಂಡು ನಾನು ಅಯ್ಯೋ ನನ್ನ ಹಣೇಬರಹವೇ ಅಂದು ತಲೆ ಚಚ್ಚಿಕೊಂಡೆ.

ಇನ್ನೊಂದು ಸಾರಿ ಒಂದು ಕಮರ್ಷಿಯಲ್ ಚಿತ್ರಕ್ಕೆ ಹಾಡು ಬರೆಯಲು ಯಥಾ ಪ್ರಕಾರ ಅಸೋಸಿಯೇಟ್ ಡೈರೆಕ್ಟರ್ ಜೊತೆ ಹೋದೆ. ಆ ಹೊತ್ತು ಪ್ರಖ್ಯಾತ ಸಂಗೀತ ನಿರ್ದೇಶಕರು ಬಂದರು. ಸ್ಟುಡಿಯೋದಲ್ಲೇ ಕೂತು ಹಾಡು ಕಂಪೋಸ್ ಆಯಿತು. ಎಲ್ಲಾ ಮ್ಯೂಸಿಷಿಯನ್ಸ್ ನಮ್ಮ ಕಾರ್ಯವನ್ನು ಗಮನಿಸುತ್ತಿದ್ದರು. ಹಾಡು ಸಿದ್ಧವಾಯಿತು, ಮ್ಯೂಸಿಕ್ ಕಂಡಕ್ಟರ್ ಬಂದು ರಿಹರ್ಸಲ್ ಷುರು ಮಾಡಿದರು. (ಬಿಜಿಎಂ. ಬ್ಯಾಕ್



ಗ್ರೌಂಡ್ ಮ್ಯೂಸಿಕ್) ಹೊಸ ಗಾಯಕ ಮದರಾಸಿನ ಲೋಕಲ್ ಸಿಂಗರ್ ಹಾಡು ಬರೆದುಕೊಂಡು ತಕ್ಕಮಟ್ಟಿಗೆ ಚನ್ನಾಗಿ ಹಾಡಿದ. ಅವನಿಗೆ ವಾಹನ ವೆಚ್ಚ ಕೊಟ್ಟು ಕಳಿಸಿದರು. ನಂತರ ಊಟದ ಬ್ರೇಕ್. ಎಲ್ಲರಿಗೂ ಊಟ ಬಂತು. ಎಲ್ಲರೂ ಊಟ ಮಾಡಿದೆವು. ಸ್ವಲ್ಪ ಹೊತ್ತು ಬಿಡುವು ಕೊಟ್ಟಿದ್ದರು. ಕೆಲವು ವಾದ್ಯಗಾರರು ವಾಂಯ್ಸ್ ಕೋಣೆಯಲ್ಲಿ ನಿದ್ದೆ ಹೋದರು. ಇನ್ನು ಕೆಲವರು ಹರಟೆ ಹೊಡೆದರು. ರಾತ್ರಿ ಒಂಭತ್ತು ಗಂಟೆಗೆ ಹಾಡು ಮುಗಿಯಿತು. ಸಂಗೀತ ನಿರ್ದೇಶಕರು 'ರೀ ಅಸಿಸ್ಟೆಂಟ್ ಡೈರಕ್ಟರೇ, ಎಲ್ರೀ ನಿಮ್ಮ ನಿರ್ಮಾಪಕರು? ಬೇಗ ಬರೋದಕ್ಕೆ ಹೇಳ್ರೀ' ಅಂದರು. 'ಸಾರ್, ಈಗ ಬಂದೆ ಅಂತ ಹೊರಗೆ ಹೋಗಿದಾರೆ ಇನ್ನೇನು ಬಂದುಬಿಡ್ತಾರೆ ಸರ್. ಒಂದು ಚೆಕ್ ಹಿಡ್ಕೊಂಡು ಮಾರ್ವಾಡಿ ಅಂಗಡಿಗೆ ಹೋಗಿದಾರೆ, ಬಂದುಬಿಡ್ತಾರೆ ಸರ್' ಅಂದರು ಅಸಿಸ್ಟೆಂಟ್ ಡೈರಕ್ಟರ್. ಒಂಭತ್ತೂವರೆ ಆಯಿತು, ಹತ್ತೂ ಆಯಿತು. ವಾದ್ಯಗಾರರ ವರಾತ ನಿಲ್ಲಲಿಲ್ಲ. ಸಂಗೀತ ನಿರ್ದೇಶಕರಿಗೆ ಪೀಕಲಾಟಕ್ಕೆ ಬಂತು. ಹತ್ತೂವರೆ ಆದರೂ ಎಲ್ಲರೂ ಕಾಯುತ್ತಲೇ ಇದ್ದರೂ. ಕೊನೆಗೂ ನಿರ್ಮಾಪಕ ಬರಲೇ ಇಲ್ಲ. ಸಂಗೀತ ನಿರ್ದೇಶಕರು ಏನೋ ಸಬೂಬು ಹೇಳಿ ವಾದ್ಯಗಾರರನ್ನು ಕಳಿಸಿದರು. ನಾವೆಲ್ಲಾ ಗಾಂಧಿನಗರದಲ್ಲಿ ಕಾಯುತ್ತಲೇ ಇದ್ದೇವೆ. ಆದರೆ ಇನ್ನೂ ಆ ನಿರ್ಮಾಪಕರು ನಮಗ್ಯಾರಿಗೂ ಸಿಕ್ಕಲೇ ಇಲ್ಲ.

■

**ಕರಗಲಾರದ ಆಸ್ತಿ...**

**– ವಿ.ವಿಜಯೇಂದ್ರ ರಾವ್**

ಗುಂಡ ತನ್ನ ಗೆಳೆಯರ ಬಳಗದ ಜೊತೆಗೆ ಒಂದು ರೆಸಾರ್ಟ್ ನಲ್ಲಿ ಬಹಳ ವರ್ಷಗಳ ನಂತರ ಭೇಟಿಯಾಗಿದ್ದನು. ಅವನ ಎಲ್ಲಾ ಗೆಳೆಯರು ಒಳ್ಳೆಯ ಉದ್ಯೋಗದಲ್ಲಿದ್ದು ನಿವೃತ್ತಿಯಾದ್ದರಿಂದ ಎಲ್ಲರೂ ತಮ್ಮ ತಮ್ಮ ಬಳಿ ಇರುವ ಆಸ್ತಿಯಾದ ಬಂಗಲೆ, ಮನೆ, ಫ್ಲಾಟ್ ಗಳ ಬಗ್ಗೆ ಹೇಳಿ ಕೊಳ್ಳುತ್ತಾ ಇದ್ದಾಗ, ಗುಂಡ – ಅದೇನ್ ಮಹಾ ಅಂತ ಕೊಚ್ಚಿಕೊಳ್ಳುತ್ತಿದ್ದೀರಾ, ನಮ್ಮ ಮನೆಯವರ ಒಬ್ಬೊಬ್ಬರ ಬಳಿಯೂ ಒಂದೊಂದು "ಸಿಟಿ" ಇದೆ ಎಂದನು, ಎಲ್ಲರೂ ಒಕ್ಕೊರಲಿನಿಂದ ಹಾಗಂದ್ರೆ ಏನೋ ಎಂದು ಕೇಳಿದಾಗ, ಅಂದರೆ ಒಬ್ಬೊಬ್ಬರಿಗೂ "ಒಬಿಸಿಟಿ" ಎಂದಾಗ, ಗೆಳೆಯರೆಲ್ಲ ಸುಸ್ತೋ ಸುಸ್ತು

# ಬೆಂಗಳೂರು ಗುಂಡಿ ಸಿಟಿ (ಜಿ. ಎಸ್ಟಿ)

ಇ.ಆರ್. ರಾಮಚಂದ್ರನ್

ಮಿನಿಸ್ಟರ್‌ಗಳು, ಎಮ್ಮೆಲ್ಲೇಗಳು, ಪೋಲಿಸ್, ಮೇಯರ್, ದೊಡ್ಡ, ಚಿಲ್ಲರೆ ಕುಳಗಳು ಮೀಟಿಂಗ್‌ನಲ್ಲಿ ಕೂತಿದ್ವು.

ಬೆಂಗಳೂರಿನ ಮುಂಗಾರು, ಹಿಂಗಾರು, ಹೀಗೂ–ಉಂಟೆ–ನಾನ್–ಸ್ಟಾಪ್ (?) ಮಳೆಯಿಂದ ಪರ್ಮನೆಂಟಾಗಿ ನಿಂತಿರುವ ನೀರನ್ನ ಹೇಗೆ ಉಪಯೋಗಿಸಬಹುದು ಅಂತ ತೀರ್ಮಾನ ಮಾಡಲು ಬಿಬಿಎಂಪಿ ಹೈ ಪವರ್ ಮೀಟಿಂಗ್ ಕರೆದಿದ್ರು.

ಈ ಬಿಬಿಎಂಪಿ ಬೇರೇನೆ. ಇದು 'ಬೆಂಗಳೂರ್ ಬೋಟ್ ಮುಳುಗಡೆ ಪಾಲಿಕೆ' ಅವರ ಫಸ್ಟ್ ಮೀಟಿಂಗ್ ಆವತ್ತು.

'ಸಿಟಿಲಿ ಎಲ್ಲ ಗುಂಡಿಗಳೂ ಪೂರ್ತಿ ತುಂಬಿ ಕಾಲುವೆಗಳಾಗಿವೆ. ಭೂಮಿ ಮತ್ತು ವರುಣ ಇಬ್ಬರೂ ಸೇರಿ ನಮಗೆ ಗುಂಡಿ ಮತ್ತು ಕಾಲುವೆ ತುಂಬಿಸಿ ಗಿಫ್ಟಾಗಿ ಕೊಟ್ಟಿದಾರೆ. ನಿನ್ನೆ ಮುಖ್ಯಮಂತ್ರಿಗಳು ಖುದ್ದಾಗಿ ಬಂದು ಬಾಗಿನ ಕೊಟ್ಟಿದಾರೆ. ಕಾವೇರಿಗಿಂತ ಮುಂಚೇನೆ ನಮ್ಮ ಕಾಲುವೆಗಳು ತುಂಬಿ ತುಳುಕಾಡ್ತಿವೆ. ಇದು ಸಂತೋಷದ ಸುದ್ದಿ. ನಾಳೆ ರಾಜ್ಯೋತ್ಸವ. ಇದಕ್ಕಿಂತ ನಮಗೆ ವರ್ಷದಲ್ಲಿ ಬೇರೆ ಸುದಿನ ಸಿಗಲ್ಲ. ನಾಳೆ ಬೆಳಿಗ್ಗೆಯಿಂದ ಬೇರೆ ಬೇರೆ ಬೋಟ್ ಸರ್ವೀಸ್ ಶುರು ಮಾಡ್ತಿದೀವಿ. ಬೆಳಿಗ್ಗೆ 6 ಘಂಟೆಗೆ ಗುಂಡಿ ಕ್ಷೀರ ಭಾಗ್ಯ– ಹಾಲಿನ ಎಕ್ಸ್‌ಪ್ರೆಸ್ ವೆ, 8 ಘಂಟೆಗೆ ಗುಂಡಿ ಶಾಖಾಂಭರಿ ಭಾಗ್ಯ– ತರಕಾರಿ ಸ್ಪೆಷಲ್ ಶುರುವಾಗುತ್ತೆ' ಎಂದು ಹೇಳುತ್ತಾ ಪ್ರಧಾನ ಕಾರ್ಯದರ್ಶಿ ಮೀಟಿಂಗ್ ಶುರು ಮಾಡಿದರು.

'ಬಹಳ ಒಳ್ಳೆ ನ್ಯೂಸ್. ಎಲ್ಲಾದಕ್ಕೂ ಬೇರೆ ಬೇರೆ ಹಾರ್ನ್ ಹಾಕ್ಸಿ. ಇಲ್ದಿದ್ರೆ ಪಬ್ಲಿಕ್‌ಗೆ ಕನ್ಫ್ಯೂಷನ್ ಆಗುತ್ತೆ. ಆಫೀಸ್ ರಶ್ ಅವರ್ ಟ್ರಾಫಿಕ್ ಆದಮೇಲೆ 11 ರಿಂದ 1 ಘಂಟೆ ವರೆಗೆ ಕತ್ತಿ ಚಾಕೂ ಸಾಣೆ ಹಿಡಿಯೋರು, ಬಳೆಗಾರ, ಹಳೆ ಜರತಾರಿ ಸೀರೆ ತೊಗೊಂಡು ಎವರ್ ಸಿಲ್ವರ್ ಪಾತ್ರೆ ಕೊಡೋವ್ರು, ಗಟ್ಟಿ ಮೊಸರು ಮಾರೋವ್ರು, ಹಳೆ ಹಾಸಿಗೆಗೆ ಹತ್ತಿ ಹಾಕೋವ್ರು ಅವರ ಸ್ಪೆಷಲ್ ಓಡಿಸಿ.' ಮನೆಯ ಮುಂದೆ ಕೂತು ಕೂಗಿಕೊಂಡು ಬರುವ ಪ್ರತಿ ವ್ಯಾಪಾರಿಗಳೂ ಪರಿಚಯವಿದ್ದ ಸೀನಿಯರ್ ಸಿಟಿಝುನ್ ಅವರ ಪ್ರಲಾಪ.

'ಅದಕ್ಕೇನು! ಮಾಡೋಣ ಸರ್. ಜೊತೆಗೆ ಸಿಂಗಲ್ ಪ್ಯಾಸಿಂಗ್ ಷೋ ಸಿಗರೇಟು, ಅಂಬಾಳ್ ನಶ್ಯ ಮಾರೋವ್ರನ್ನೂ ಸೇರಿಸ್ತೀವಿ. ಇನ್ನೊಂದು ವಿಷಯ. ಬೆಂಗಳೂರು ಈಗ ಪೂರ್ತಿ ದೊಡ್ಡ ದೊಡ್ಡ ಐಟಿ ಬಿಲ್ಡಿಂಗ್‌ಗಳು ಮತ್ತು ಅಪಾರ್ಟ್‌ಮೆಂಟಿಂದ ತುಂಬಿಹೋಗಿದೆ. ಅವ್ರಿಗೆ ಓಡಾಡೋದಕ್ಕೆ ಅವರ್ದೇ ಒಂದು ಬೋಟ್ ಇಟ್ಕೊಳ್ಳಿ ಅಂತ ಕಂಪಲ್ಸರಿ ರೂಲ್ ಮಾಡೋಣ. ಅಪಾರ್ಟ್‌ಮೆಂಟ್ ಫ್ಲಾಟ್ ಬುಕ್ ಮಾಡುವಾಗ್ಲೇ ಬಿಲ್ಡರ್ಸ್ ಇದರ ಕಾಸ್ಟು ಸೇರಿಸ್ಲಿ.'

'ಗುಡ್ ಐಡಿಯ. ನಮ್ಮ ವಿಷ್ಣು ಪುರಾಣದಲ್ಲಿ ಮುಂಚೆ ಭೂಮಿ ಕೆಳಗಡೆ ಮತ್ಸ್ಯಲೋಕ ಇತ್ತು ಅಂತ ಹೇಳ್ತಾರೆ. ಈಗ ಮತ್ತೆ ಅದು ವಾಪಸ್ಸು ಬಂದಿದೆ. ಮೀನುಗಳು ಹೋದ ತಿಂಗಳು ಬಂತು. ನಮ್ಮಲ್ಲಿ ದೊಡ್ಡ ದೊಡ್ಡ ಬಿಲ್ಡರ್ಸ್ ಕುಳಗಳು ಇಲ್ಲೇ ಇದಾರೆ. ಬೇರೆ ತಿಮಿಂಗಲ ತರೋದು ಏನೂ ಬೇಡ. ಏನಂತೀರಿ! ಹಹ್ಹ. ನಾವು ಈಗ ಪಾಟ್‌ಹೋಲ್ ಕೆಳಗಡೆ ಇದೀವಿ. ನಮ್ಮ ಸಿಟಿ ಅಂಡರ್ ಗ್ರೌಂಡ್‌ಗೆ 'ಬೆಂಗಳೂರು ಗುಂಡಿ ಸಿಟಿ'

ಅಥವ 'ಗುಂಡಿಪುರ' ಅಂತ ಕರೀಬಹುದಾ ಮೇಯರ್ ಸಾಹೇಬ್ರೇ?'

'ನಾನು ಬೋಟ್ ಮುಳುಗು ಪಾಲಿಕೆ ಸ್ಪೆಷಲ್ ಮೀಟಿಂಗ್ ಕರೆಸಿ ರೆಸಲ್ಯೂಷನ್ ಪಾಸ್ ಮಾಡಿಸ್ತೀನಿ. ನನ್ನ ವರಿ ಹೇಳ್ತೀನಿ ಕೇಳಿ. ಅದಕ್ಕೆ ಸಲ್ಯೂಷನ್ ಹೇಳಿ. ಈ ನೀರೂರಲ್ಲಿ ಪಬ್ಲಿಕ್ ಟಾಯ್ಲೆಟ್ ಹೇಗೆ ನಡೆಸೋದು ಹೇಳಿ.'

'ಎಲ್ಲಾ ಕಡೆ ನೀರಲ್ವಾ? ತಾನಾಗೆ ಕೊಚ್ಚಿಕೊಂಡು ಹೋಗುತ್ತೆ. ಅಲ್ಲಲ್ಲೇ ಅಡ್ಜಸ್ಟ್ ಮಾಡೋಣ. ತಲೆ ಕೆಡಿಸ್ಕೋಬೇಡಿ. ಬೇರೇದಕ್ಕೆ ನಾನು ರಾತ್ರಿ ಫಿನಾಯಲ್, ಡೊಮೆಕ್ಸ್ ಹೊಡಿಸ್ತೀನಿ.'

'ಈಗ ವಿವಿಐಪಿ ಟ್ರಾಫಿಕ್‌ನ ಹೇಗೆ ವ್ಯವಸ್ಥೆ ಮಾಡೋದು?' ಪೋಲಿಸ್ ಕಮಿಷನರ್ ಅವರ ವರಿ.

'ಈಗ ಮಾಡೋ ಹಾಗೇ ಮಾಡಿ. ಸಣ್ಣ ಪುಟ್ಟ ಬೋಟ್ಗಳನ್ನು ಪಕ್ಕಕ್ಕೆ ತಳ್ಳಿ ಅವ್ರಿಗೆ ಫ್ರೀ ಮಾಡ್ಕೊಡಿ. ವಿವಿಐಪಿಗೆ ಫ್ರೀ ವಾಟರ್ ವೇ ಯಾವಾಗ್ಲೂ ಇರ್ಬೇಕು. ಝೀರೋ ಟ್ರಾಫಿಕ್. ಕೆಟ್ಟ ಸ್ಮೆಲ್ ಇಲ್ದೇ ಇರೋಹಾಗೆ ನೋಡ್ಕೋಳಿ.'




'ಐಟಿಯವರನ್ನು ಏನು ಮಾಡೋಣ? ಅವ್ರು ಒಬ್ಬೊಬ್ರು ಎರಡು ಬೋಟ್ ತೊಗೊಳ್ಳೋದು ಗ್ಯಾರಂಟಿ. ಹಾಗಾದ್ರೆ ಟ್ರಾಫಿಕ್ ನೀರಲ್ಲಿ ಹೋಮ ಮಾಡಿದಹಾಗೆ ಆಗುತ್ತೆ.' ಮತ್ತೆ ಪೋಲಿಸ್ ಕಮಿಷನರ್ ಅವರ ಕಿರಿಕಿರಿ.

'ಅವ್ರಿಗೆ ಓನ್ಲಿ 'ವನ್ ಬೋಟ್ ಪರ್ ಹೆಡ್' ಅಂತ ಲಿಮಿಟ್ ಮಾಡಿ ಮತ್ತೆ 'ವರ್ಕ ಫ್ರಂ ಯುವರ್ ವಾಟರ್ ಹೋಮ್' ಅಂತ ರೂಲ್ ತರೋಣ.'

'ವಿಧಾನಸೌಧ ಏನು ಮಾಡೋಣ? ಅಲ್ಲಿ ಅಸೆಂಬ್ಲಿ ಸೆಷನ್ ಮಾಡೋದು ಕಷ್ಟ ಆಗುತ್ತೆ'. ಅಪೊಸಿಷನ್ ಲೀಡರ್ದು ಕ್ವೆರಿ.

'ನಿಮಗೆ ಗೊತ್ತಿಲ್ವಾ ಇನ್ನೂ! ನೀವು ಅಪೊಸಿಷನ್ ಪಾರ್ಟಿ. ಅದಕ್ಕೇ ಇನ್‌ಫರ್ಮೇಷನ್ ಷೇರ್ ಮಾಡಿಲ್ಲ!'

'ಏನದು?'

'ಹೊಸ ವಿಧಾನ ಸೌಧ ಕಟ್ತೀವಿ. ಅಲ್ಸೂರ್ ಲೇಕ್ ಕೆಳಗಡೆ! ಒಂದು ಕಡೆ ಅದು ರಾಮನಗರ ತನಕ ಹೋಗುತ್ತೆ. ಇನ್ನೊಂದು ಕಡೆ ಹುಬ್ಬಳ್ಳಿ–ಧಾರವಾಡ ತನಕ ಹೋಗುತ್ತೆ. ಫುಲ್ಲೀ ಟನಲ್ಡ್ ವಾಟರ್ ವೇ. ಮುಂದಿನ ವಾರ ವೆನಿಸ್‌ನಿಂದ ವಾಟರ್ ಇಂಜಿನಿಯರ್ಸ್, ಕಂಟ್ರಾಕ್ಟರ್ಸ್ ಬರ್ತಾರೆ. ನಮ್ಮ ಪಿಡಬಳ್ಯು ಇಂಜಿಯನರ್‌ಗಳು ಅವ್ರಿಗೆ ಎಲ್ಲಾ ರೂಲ್ಸೂ,

ಮೇಲೆ/ ಕೆಳಗಡೆ ಪೇಮೆಂಟು ಹೇಗೆ ಅಂತ ಎಲ್ಲಾ ತಿಳಿಸ್ಕೊಡ್ತಾರೆ. ಡಿಪಿಆರ್ ಆಪ್ರೂವ್ ಆಗಿ ಎರಡು ತಿಂಗಳು ಆಯ್ತು. ವರ್ಲ್ಡ್ ಬ್ಯಾಂಕ್ ಲೋನ್ ಅಪ್ರೂವ್ ಆಗಿದೆ. ಮುಂದಿನ ವರ್ಷ ವಿಂಟರ್ ಅಸೆಂಬ್ಲಿಗೆ ಬೆಳಗಾವಿಗೆ ನಾವೆಲ್ಲಾ ಒಳಗಡೆಯಿಂದಲೇ ಅಲ್ಲಿಗೆ ಕ್ರೂಸ್‌ನಲ್ಲಿ ಹೋಗ್ಬಹುದು. ನಮ್ಮ ರಾಜ್ಯದ ಸ್ವಿಮಿಂಗ್ ಚಾಂಪಿಯನ್ಸ್ ಎಲ್ಲರಿಗೂ ಸ್ವಿಮಿಂಗ್ ಕಲಿಸ್ತಾರೆ. 'ಬೆಂಗಳೂರು –ಇನ್– ಚಾರ್ಜ್, ಎಲ್ಲಾ ಫೆಸಿಲಿಟಿ ಇರುತ್ತಾ?' ಅಪೋಸಿಷನ್ ಲೀಡರ್ ಅವರ ಕೊಶ್ಚೆನ್.

'ಧಾರಾಳವಾಗಿ! ನೀವು ಏನೂ ವರಿ ಮಾಡ್ಕೊಬೇಕಾಗಿಲ್ಲ. ನೀವು ಅಸೆಂಬ್ಲಿಯಿಂದ ವಾಕೌಟ್ ಮಾಡಿದಾಗ– ವಾಟರ್ ಔಟ್ ಮಾಡಿದಾಗ– ಒಂದು ರೂಟ್ ಸೀದಾ ಲಾಲ್ಬಾಗ್‌ಗೆ ಹೋಗುತ್ತೆ. ಅಲ್ಲಿ ನಿಮಗೆ ರಾಗಿ ಮುದ್ದೆ, ಸೊಪ್ಪಿನ ಸಾರು, ಹುರಳಿ ಹಪ್ಪಳದ ಜೊತೆ ವೆಜಿಟೇರಿಯನ್, ನಾನ್ ವೆಜ್, ಮೊಘಲಾಯಿ, ಜೈನ್ ಊಟ ಸಿಗುತ್ತೆ. ಡ್ರೆಸ್ ಕೋಡ್ ಇರುತ್ತೆ; ಗಂಡಸರು ಸ್ವಿಮಿಂಗ್ ಟ್ರಂಕ್, ಲೇಡಿಸ್ ಸ್ವಿಮ್ ಸೂಟ್ ಡ್ರೆಸ್ ಹಾಕಿರ್ಬೇಕು ಅಷ್ಟೇ. ನೀವು ಅಸೆಂಬ್ಲೀಲಿ ಸ್ಟ್ರೈಕ್ ಮಾಡಿದಾಗ ಅಲ್ಲೇ ಮಲಕ್ಕೊಳಕ್ಕೆ ವಾಟರ್ ಬೆಡ್ ಅರೇಂಜ್ ಮಾಡೀದಿವಿ. ರೆಸಾರ್ಟ ಪಾಲಿಟಿಕ್ಸ್‌ಗೆ ಹೆಸರುಘಟ್ಟ, ಊಟಿಗೆ ಹೋಗಬೇಕಾಗಿಲ್ಲ. ಎಲ್ಲಾ ಇಲ್ಲೇ ಮಾಡ್ಬಹುದು. ಮೊಬೈಲ್ ಫೋನ್ ಇಲ್ದೆ ಸೀಕ್ರೆಟ್ಸ್ ಅಲ್ಲೆ ವಾಟರ್–ಪಾರ್ಕ್ ಅಲ್ಲಿ ಮಾತಾಡ್ಬಹುದು.'

'ಇಷ್ಟೆಲ್ಲಾ ಅರೆಂಜ್ ಮಾಡ್ದಾಗ ಯಾರಾದ್ರೂ ಲ್ಯಾಂಡ್ ಅಲ್ಲಿ ಸೈಟಲ್ಲಿ ಮನೆ ಕಟ್ಟಿದ್ರೆ ಏನ್ ಮಾಡೋದು?' ಆರ್‌ಟಿಐ ಎಕ್ಸ್‌ಪರ್ಟನ ಕ್ವೆಯರಿ.

'ಮುಲಾಜೇ ನೋಡ್ಬೇಡಿ. ಇಲ್ಲೀಗಲ್ ಅಂತ ನೋಟಿಸ್ ಕೊಟ್ಬಿಟ್ಟು ಜೆಸಿಬಿಯಿಂದ ತೆಗೆಸ್ಬಿಡಿ. ಇಲ್ಲಿಗೆ ಇವತ್ತಿನ ಮೀಟಿಂಗ್ ಮುಗೀತು. ಎನಿ ಕೊಶ್ಚೆನ್ಸ್?'

'ನನ್ದು ಲಾಸ್ಟ್ ಕೊಶ್ಚನ್. ರಾತ್ರಿ ಗುಂಡು ಹಾಕಿ ಬೋಟ್‌ನ ಸ್ಪೀಡಾಗಿ ಓಡಿಸ್ಕೊಂಡು ಬಂದ್ರೆ ಏನು ಮಾಡ್ತೀರಾ?' ಸೀನಿಯರ ಸಿಟಿಝುನ್

'ಅಲ್ಲೇ ಜುಟ್ಟು ಹಿಡಿದು ಅವನ್ನ ಮೂರು ಸರ್ತಿ ಮುಳುಗು ಹಾಕಿಸ್ತೀನಿ. ಅಮಲೆಲ್ಲ ಸರ್ರಂತ ಇಳಿದುಹೋಗುತ್ತೆ!' ಪೊಲೀಸ್ ಕಮಿಷನರ್ ಉವಾಚ. ■

**ಸ್ಥಿತಪ್ರಜ್ಞತೆ**

**–ಸುಮನಾ**

ಆ ದಿನ ಚಿಕ್ಕಪ್ಪ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದರು, ದೂರದೂರಿಂದ ಕೆಲ ಗಂಟೆಗಳಿಂದ ಅವರ ಪ್ರಯಾಣ ನಡೀತಿತ್ತು.

ಬಸ್ಸು ಟೀ–ಕಾಫಿ ಕುಡಿಯುವವರಿಗೆಂದು ಕಾಲುಘಂಟೆ ಟೈಮ್ ಇದೆಯೆಂದು ಕಂಡಕ್ಟರ್ ಹೇಳಿದಾಗ, ಚಿಕ್ಕಪ್ಪನನ್ನು, ಮುಂದಿನ ಸಾಲಿನ ಕೆಲವು ಹಿರಿಯರನ್ನು ಬಿಟ್ಟು ಎಲ್ಲರೂ ಕೆಳಗಿಳಿದರು.. ಚಿಕ್ಕಪ್ಪನಿಗೆ ಗೊರಕೆಯೊಂದಿಗೆ ಜೋರು ನಿದ್ರೆ..

ಇದೇ ಸಮಯವೆಂದು ಕಳ್ಳನೊಬ್ಬ ಬಸ್ಸಿನೊಳಗೆ ಬಂದು, ನೋಡಿದ..ಚಿಕ್ಕಪ್ಪ ಜೋರು ನಿದ್ರೆಯಲ್ಲಿದಾರೆ ಅಂತ ಅವರ ಶರ್ಟ್ ಜೋಬಿನಲ್ಲಿದ್ದ ಪರ್ಸ್ ಗೆ ಕೈ ಹಾಕಿದ, ಅಂಥಾ ನಿದ್ದೆಯಲ್ಲೂ ಚಿಕ್ಕಪ್ಪ, ಎಚ್ಚರಗೊಂಡು ಛಟೀರ್ ಅಂತ ಕಳ್ಳನ ಕೆನ್ನೆಗೆ ಬಾರಿಸಿ, ಏನೂ ನಡೆದಿಲ್ಲವೆಂಬಂತೆ ಮತ್ತೆ ,ಪರ್ಸ್ ಜೇಬಿಗಿಟ್ಟು ನಿದ್ದೆಗೆ ಜಾರಿದರು.

ಕಳ್ಳ ಎದ್ನೋ, ಬಿದ್ನೋ ಅಂತಾ ಬಸ್ಸಿನಿಂದ ಕೆಳಗಿಳಿದು ಓಡಿದ..

ಮುಂದಿನ ಸೀಟಿನಲ್ಲಿ ಕುಳಿತಿದ್ದ ಹಿರಿಯರು,ಇದೇನು ಸದ್ದು ಅಂತ ತಿರುಗಿ ನೋಡಿ, ಕೆಲವರು "ಸ್ಥಿತಪ್ರಜ್ಞತೆ" ಅಂದ್ರೇ ಇದು ನೋಡಪ್ಪಾ, ಏನೂ ಆಗಿಲ್ಲವೆಂಬಂತೆ ಆತ ತನ್ನ ಕೆಲಸ ತಾನು ಮಾಡಿ ಮತ್ತೆ ನಿದ್ರೆ ತಪಸ್ಸಿಗೆ ಜಾರಿದ ನೋಡಿ ಅಂತ ಬಿದ್ದು ಬಿದ್ದು ನಕ್ಕರು..

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ✓ ಸಾರ್ವಜನಿಕ ಹಣದಿಂದ ಶಾಲೆ, ಆಸ್ಪತ್ರೆ, ರಸ್ತೆ ನಿರ್ಮಿಸಿದ್ದಕ್ಕೆ ಶಾಸಕನನ್ನು ಅಭಿನಂದಿಸುವುದು ಎಂದರೆ ನಿಮ್ಮ ಹಣವನ್ನು ನಿಮಗೆ ಕೊಡುವ ಎಟಿಎಂ ಯಂತ್ರವನ್ನು ಅಭಿನಂದಿಸಿದಂತೆ.
- ✓ ಬಿಲ್ ಗೇಟ್ಸ್ ಉವಾಚ: ಕಷ್ಟಕರ ಕೆಲಸ ಮಾಡಲು ನಾನು ಒಬ್ಬ ಸೋಮಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಅವನು ಅದನ್ನು ಮಾಡಲು ಸುಲಭ ಪರಿಹಾರೋಪಾಯ ಹುಡುಕುತ್ತಾನೆ.
- ✓ ಟು ಸಾಲ್ವ್ ಎ ಪ್ರಾಬ್ಲಮ್ ಫಸ್ಟ್ ವಿ ಮಸ್ಟ್ ಅಕ್ನೋಲಾಡ್ಜ್ ಇಟ್.
- ✓ ವಾಕ್ ಸ್ವಾತಂತ್ರ ಇರುವ ದೇಶದಲ್ಲಿ ಟೆಲಿಫೋನ್ ಬಿಲ್ ಏಕಿರಬೇಕು?
- ✓ ಎ ರಫಲ್ಡ್ ಮೈಂಡ್ ಮೇಕ್ಸ್ ಎ ರೆಸ್ಟ್‌ಲೆಸ್ ಪಿಲ್ಲೊ.
- ✓ ನಿಮ್ಮ ಸಹವರ್ತಿಗಳನ್ನು ಪ್ರೇರೇಪಿಸಲು ನೀವು ಅವರ ಹೆಚ್ಚುಗಾರಿಕೆಯನ್ನು ಎತ್ತಿ ತೋರಿಸಿ. ನಿಮ್ಮ ಹೆಚ್ಚುಗಾರಿಕೆಯನ್ನು ಪ್ರದರ್ಶಿಸುವದರಿಂದಲ್ಲ.
- ✓ ಇಫ್ ಯು ಆರ್ ಟೂ ಟೈರಡ್ ಟು ಸ್ಪೀಕ್ ಸಿಟ್ ನೆಕ್ಸ್ಟ್ ಟು ಮಿ. ಐ ಆ್ಯಮ್ ಫ್ಲುಯೆಂಟ್ ಇನ್ ಸೈಲೆನ್ಸ್.
- ✓ ಆದರ್ಶ ಪತಿ ಯಾರು ಗೊತ್ತೆ? ಹೆಂಡತಿ ಆಡದ ಪ್ರತಿ ಮಾತನ್ನೂ ಅರ್ಥ ಮಾಡಿಕೊಳ್ಳುವವನು.
- ✓ ನಾವು ಬರೆಯದೇ ಹೋದರೆ ಯಾರಿಗೂ ಲುಕ್ಸಾನಿಲ್ಲ. ಆದರೆ ಓದದೇ ಹೋದರೆ ನಮಗೇ ಲುಕ್ಸಾನು.
- ✓ ಲಕ್ಷುರಿ ಈಸ್ ವಾಟ್ ಮನಿ ಕೆನಾಟ್ ಬಯ್.
- ✓ ನನ್ನ ಗೆಳೆಯ ಈಗಷ್ಟೇ 'ಹೌ ಟು ಮೇಕ್ ಮನಿ' ಎಂಬ ಪುಸ್ತಕ ಬರೆದು ಮುಗಿಸಿದ್ದಾನೆ. ಪ್ರಕಟಿಸಲು ದುಡ್ಡಿಲ್ಲ ಎಂದಾಗ ನಾನು ಅದೇ ಪುಸ್ತಕವನ್ನು ಓದು ಎಂದು ಸಲಹೆ ಮಾಡಿದೆ.
- ✓ ಇಟ್ ಈಸ್ ಎ ಬ್ಲೆಸಿಂಗ್ ಟು ಬಿ ಬ್ಯುಸಿ ಆಲ್ವೇಸ್.
- ✓ ಮಳೆ ನಿಂತ ಮೇಲೆ ಛತ್ರಿಯೂ ಒಂದು ಹೊರೆಯಾಗುತ್ತದೆ.
- ✓ ದಿ ಪಾಸ್ಟ್ ಈಸ್ ಎ ಡಿಫರೆಂಟ್ ಕಂಟ್ರಿ. ದೆ ಡು ಥಿಂಗ್ಸ್ ಡಿಫರೆಂಟ್ಲಿ ದೇರ್.
- ✓ ಕರಬೂಜದಲ್ಲಿದೆ ಕಾರ್ಬೊಹೈಡ್ರೇಟು/ಸೇಬು ತಿಂದರೆ ನಿರೋಗ ಅದು ಸರಿ, ಕೇವಲ ಮಜೆಗೆಂದೇ ಹಣ್ಣು ಸವಿಯುವುದು ಯಾವಾಗ?

■

# ಹುಡುಗಾಟ ಆಡ್ತಿರೇನ್ರೀ, ಅವ್ವಾರ!

**ವಿಲಾಸ ನಾ ಹುದ್ದಾರ**

ಕಾಲ್ ಬೆಲ್ ಆತು. ಸುಮತಿ ಅವರು ಬಾಗಲಾ ತಗದ್ರು. ದುಡುದುಡುದುಡು ಅಂತ ಕಮಲೀ ಗಡಿಬಿಡಿ ಮಾಡ್ಕೋತ ಒಳಗ ಬಂದ್ಲು.

"ಯಾಕ ಕಮ್ಲೀ, ಅಂಥಾದ್ದೇನ ಗಡಿಬಿಡಿ?"

"ಅವ್ವಾರ, ಸ್ವಲ್ಪ ಲಗೂನ ಹೋಗಬೇಕ್ರೀ."

"ನೀ ಲಗೂನ ಹೋಗಬೇಕಂತ ಕೆಲಸಾ ಅರ್ಧಾಮರ್ಧಾ ಮಾಡಿ ಹೋಗಬ್ಯಾಡಾ..."

"ಏನ್ರೀ ಅವ್ವಾರ, 20 ವರ್ಷ ಆತ. ಎಂದರೇ ಮಾಡೇನಿ ಏನ ಹಂಗ?"

"ಹಂಗೇನ ಮಾಡಿಲ್ಲ ಬಿಡ. ಹೌದು ಅಂಥಾದ್ದೇನ ಗಡಿಬಿಡಿ ಇವತ್ತ?"

"ಏನ್ರೀ ಅವ್ವಾ, ನಿಮಗ ಗೊತ್ತಿಲ್ಲೇನ. ನನ್ನ ಯಜಮಾನ ನಿನ್ನೆ ರಾತ್ರಿ ಫಿರತಿ ಇಂದ ವಾಪಸ ಬಂದಾನ. ಇವತ್ತ ಮಾಲ್‌ಗೆ, ಪಿಕ್ಚರ್‌ಗೆ ಹೋಗೋಣು ಅಂತ ಲಗೂನೆ ಬಾ ಅಂದಾನ್ರೀ."

"ಅಯ್ಯ, ಎಷ್ಟ ನಾಚ್ಗೋತ ಹೇಳ್ತೀಯ ಕಮ್ಲೀ. ನಿನ್ನೆ ಮೊನ್ನೆ ಲಗ್ನ ಆದವರ್ಹಂಗ..."

"ಹೋಗ್ರೀ ಅವ್ವಾರ. ನಿಮ್ಮ ಹುಡುಗಾಟ ಸಾಕ. ಅಪ್ಪಾರ ಏನ ವಾಕಿಂಗ್ ಹೋಗ್ಯಾರ? ಮತ್ತ ಅಣ್ಣಾವ್ರು, ವೈನಿ, ಮಕ್ಕಳು ಯಾವಾಗ ಬರ್ತಾರ?"

"ಹೂಂನವಾ. ಅಪ್ಪಾರ ವಾಕಿಂಗ್ ಹೋಗ್ಯಾರ. ಮಕ್ಕಳು ಎಲ್ಲಾ ಬರಲಿಕ್ಕೆ ಇನ್ನೂ ಒಂದು ವಾರ ಕಾಯಬೇಕವ್ವಾ..."

ಅವ್ವಾರ ದನಿಯೊಳಗಿನ ಬ್ಯಾಸರಕಿ ಕೇಳಿ, "ಅವ್ವಾರ, ಈ ಭಾಂಡಿ ಎಲ್ಲಾ ತೊಳದು, ನಿಮಗ ಬಿಸಿ ಬಿಸಿ ಚಹಾ ಮಾಡಿ ಕೊಡ್ತೇನ್ರೀ. ಅಲ್ಲಿತನಕಾ ನೀವು ಪೇಪರ್ ಓದ್ರಿ."

"ನೀ ಗಡಿಬಿಡಿ ಅಂತ ಭಾಂಡಿ ಬರೋಬರಿ ತೊಳಿ. ಗಡಿಬಿಡಿ ಮಾಡ್ಕೋತ ಒಗದ್ಯಾಡಬ್ಯಾಡಾ..." ಅಷ್ಟ ಅನ್ನೋದಕ್ಕ ಒಂದ ಭಾಂಡಿ ಕೈ ತಪ್ಪಿ ಕೆಳಗ ಬಿದ್ದ ಠಣ ಠಣ ಠಣ ಸಪ್ಪಳಾ ಮಾಡ್ತು.

"ಅವ್ವಾರ, ನೀವು ಪೇಪರ್ ಓದ ಹೋಗ್ರಿ."

ಭಾಂಡಿ ಎಲ್ಲಾ ಸ್ವಚ್ಛ ಆಗಿ ತೊಳದು, ಅವ್ವಾರಿಗೆ ಬಿಸಿ ಬಿಸಿ ಚಹಾ ಮಾಡಿ ಕೊಟ್ಲು. ಕಸಬರಿಗಿ ತೊಗೊಂಡ ಮೊದ್ಲೇಕ ಎಲ್ಲ 4 ಬೆಡ್ ರೂಮ, ಅಡಿಗಿ ಮನಿ ಮತ್ತ ಡೈನಿಂಗ್ ರೂಮಿನ ಕಸಾ ಹೊಡದು ಹಾಲಿಗೆ ಬಂದ್ಲು,

"ಏನ ಕಮ್ಲೀ ಐದ ಮಿನಿಟಿನಾಗ ಇಷ್ಟೆಲ್ಲಾ ಕಸಾ ಹೊಡದೇನ. ಆಲ್ಲ, ಆ ಫೋನ್ ಯಾವಾಗಿಂದ ಹೊಡ್ಕೊಳ್ಳಲಿಕ್ಕೆ ಹತ್ತೇದ. ಯಾರದ ಅದ ನೋಡೆರೆ ನೋಡ."

"ಮತ್ಯಾರದ. ನನ್ನ ಯಜಮಾನಂದ. ಅಂವಗ ಗಡಿಬಿಡಿ. ಲಗೂನ ಬಾ ಅಂತ ಫೋನ..."

"ಹೌದವ್ವಾ, ನೀ ಇಷ್ಟ ವಯಸ್ಸಾದರೂ ಚೆಂದುಳ್ಳಿ ಚೆಲುವಿ ಇದ್ದಂಗ ಇದ್ದಿ ಮತ್ತ ಸಂಸಾರನೂ ಛೊಲೋ ನಡಸ್ತೀ. ಮತ್ತ ನಿನಗ ಅಲ್ಲದ ಮತ್ಯಾರಿಗೆ ಕಾಡಬೇಕ ಅಂವಾ. ತೊಗೊ ಫೋನ್. ಪಾಪ ಕಾಡಬ್ಯಾಡ."

“ಯಾಕ ಅವ್ವಾರ. ಹುಡುಗಾಟ ಮಾಡ್ತೇರೀ” ಅಂತ ಅನ್ಕೋತ ಟೊಂಕದಾಗ ಸಿಗಿಸಿದ್ದ ಫೋನ ತೊಗೋತ ಬಾಲ್ಕನಿಗೆ ಹೋದ್ಲು. ಅಲ್ಲೇ ನಿಂತ ಘುಸುಘುಸು ಅಂತ ಮಾತಾಡಿ ಬಂದ್ಲು.

ಒಳಗ ಬಂದಾಕಿ ಮತ್ತ ಫೋನ್ ಟೊಂಕಕ್ಕ ಸಿಗಿಸಿ ಏನೋ ಹುಡಕ್ಯಾಡಲಿಕ್ಕೆ ಹತ್ತಿದ್ಲು. ಇವರ ಕೂತ ಸೋಫಾದ ಬುಡಕ ನೋಡಿದ್ಲು, ಬಾಲ್ಕನಿಗೆ ಹೋಗಿ ನೋಡಿ ಬಂದ್ಲು. ಅವ್ವಾರ ಚಹಾ ಕುಡಿಂವೋದು ಮುಗದಿತ್ತು. ಕಪ್ ಸಿಂಕನ್ಯಾಗ ಇಡ್ಲಿಕ್ಕೆ ಅಂತ ಹೋದ್ರು. ಕಮ್ಲೀ ಡೈನಿಂಗ್ ಟೇಬಲ್ ತಳಗ ಬಗ್ಗಿ ಬಗ್ಗಿ ನೋಡ್ಲಿಕತ್ತಿದ್ಲು.




“ಏನ ಕಮ್ಲೀ, ಏನ ಹುಡುಕ್ಯಾಡ್ಲಿಕ್ಕೆ ಹತ್ತೀ?”

“ಅವ್ವಾರ ನೋಡ್ರೀ. ಕಸಾ ಹೊಡೀಲಿಕ್ಕೆ ಹತ್ತಿದ್ದೆ. ನೀವು ಫೋನ ತೊಗೋ ಅಂದ್ರಿ. ನಾ ಬಾಲ್ಕನಿಗೆ ಹೋದೆ. ಆಗ ಆ ಕಸಬರಿಗೆ ಎಲ್ಲೆ ಇಟ್ನೋ ಏನೋ. ಸುಡಗಾಡ ಸಿಗವಾಲ್ತು ನೋಡ್ರೀ.”

ಅವ್ವಾರ ಹಣಿ ಹಣಿ ಗಟ್ಟಿಸಿಕೊಂಡ್ರು. ಆಕೀ ಹತ್ರ ಬಂದ ಆಕೀ ತಲೀಮ್ಯಾಲೆ ಒಂದ ಪ್ರೀತಿ ಪೆಟ್ಟ ಕೊಟ್ರು. ಆಕೀಗೆ ಏನೂ ತಿಳೀದ ಪಿಳಿ ಪಿಳಿ ಕಣ್ಣ ಬಿಟ್ಕೊಂಡ ಅವರ ಮಾರೀ ನೋಡೀದ್ಲು. ಅವರು ಅವಳ ಬಗಲಾಗಿದ್ದ ಕಸಬರಿಗೀ ಕಡೆ ನೋಡಿದ್ರು.

“ಅಯ್ಯ, ನನ್ನ ಸುಪೀಕ ತಲೀನ. ಬಗಲಾಗ ಕೂಸು ಇಟ್ಕೊಂಡ ಊರೆಲ್ಲಾ ಹುಡುಕಿದ್ಹಂಗ ಆತ...”

ಹಾಲಿನ ಕಸಾ ಹೊಡ್ಕೋತ ಸ್ವಲ್ಪ ಏನೋ ವಿಚಾರ ಮಾಡಿ, “ಅಲ್ರೀ ಅವ್ವಾರ, ನಾನು ಲಗೂನ ಹೋಗಬೇಕಂತ ನಿಮಗ ಗೊತ್ತಿತ್ತು. ನಿಮಗ ಮೊದ್ಲೇಕ ಇದನ್ನ ಹೇಳ್ಲಿಕ್ಕೆ ಏನಾಗಿತ್ತು. ನನ್ನ ಜೊತಿ ಹುಡುಗಾಟ ಆಡ್ತೀರೇನ್ರೀ ಅವ್ವಾರ...” ಕಮಲೀ ಹೇಳಿದ್ದು ಕೇಳಿ ಅವ್ವಾರು ‘ಆಂ’ ಅಂತ ಬಾಯ ತಗದು ಸೋಫಾದ ಮ್ಯಾಲೆ ಕುಕ್ಕರಿಸಿದರು. ■

## ದಿ॥ ಸಿ.ಕೆ.ಎನ್. ರಾಜಾರವರ "ರಾಜಾ ಸೀಟಿನಿಂದ' ಕೃತಿಯಿಂದ ಆಯ್ದ ಬರಹ

### (1) ತೆಂಗಿನ ಮರದಲ್ಲಿ ದುಂಬಿಗಳು

ಅಯ್ಯರ್‌ರವರ ಮನೆಯ ಪಶ್ಚಿಮಕ್ಕೇ ಗುಂಡಪ್ಪನವರ ಮನೆ. ಗುಂಡಪ್ಪ ಬಾಗಿಲಿನಲ್ಲೇ ನಿಂತಿದ್ದರು. ಆಗ ಒಬ್ಬ ಕೈಲೊಂದು ಚೀಲ, ಒಂದೆರಡು ಕಬ್ಬಿಣದ ಕೊಕ್ಕೆಗಳನ್ನು ಹಿಡಿದುಕೊಂಡು ಪ್ರತ್ಯಕ್ಷನಾದ. ಅವನು ಗುಂಡಪ್ಪನೋರಿಗೆ, "ನಿಮ್ಮದು ಒಳ್ಳೇ ಈಡಿನ ತೆಂಗಿನ ಮರ. ಈಗ ಇಂಥಾ ಮರವೇ ಸಿಕ್ಕಲ್ಲ. ಆದರೆ ನೀವು ದುಂಬಿ ತೆಗೆಸಿಬಿಟ್ಟರೆ ಒಂದಕ್ಕೆ ನಾಲ್ಕರಷ್ಟು ಕಾಯಿ ಬಿಡುತ್ತೆ" ಅಂದಾಗ ಗುಂಡಪ್ಪನೋರ್ಗೆ ಕುತೂಹಲವಾಯಿತು. ಎಷ್ಟು ಕೊಡಬೇಕು ಅಂತ ಕೇಳಿದಾಗ ಅವನು "ಹತ್ತು ರೂಪಾಯಿ" ಅಂದ. ಚೌಕಾಶಿ ಮಾಡಿದಾಗ ಆರು, ನಂತರ ಐದು ರೂಪಾಯಿಗೆ ಬಂತು. ಅವನು ಮರ ಏರಿದ. ಕೊಕ್ಕೆಯಲ್ಲಿ ಚುಚ್ಚಿದ. ಒಂದಾದ ಮೇಲೊಂದು ದುಂಬಿಗಳು ಕೆಳಕ್ಕೆ ಉದುರಿದವು. ಮರದಿಂದ ಅವನು ಇಳಿದ. ದುಂಬಿಗಳನ್ನೆಲ್ಲಾ ಚೀಲಕ್ಕೆ ಹಾಕಿಕೊಂಡು, ಐದು ರೂಪಾಯಿ ಜೇಬಿಗಿಳಿಸಿ ಅಯ್ಯರ್ ಮನೆಯ ಮುಂದೆ ಹಾಜರಾದ. ಐಯರ್ ಇಂಗ್ಲೀಷ್ ಪಾಠ ಮಾಡ್ತಿದ್ರು. ಹುಡುಗರನ್ನೆಲ್ಲಾ ಕಳಿಸಿಬಿಟ್ಟರು. ಮತ್ತೆ ಅದೇ ಚೌಕಾಶಿ. ಪಕ್ಕದ ಮನೆಯೋರು ಐದು ರೂಪಾಯಿ ಕೊಟ್ಟದ್ದನ್ನ ತೋರಿಸಿದ. ಡೀಲ್ ಐದಕ್ಕೇ ಆಯಿತು. ಕೊಕ್ಕೆ ಚೀಲದ ಸಹಿತ ಮರ ಏರಿದ. ಕೆಳಕ್ಕೆ ದುಂಬಿಗಳ ಸುರಿಮಳೆಯಾದಾಗ ಐಯರ್‌ಗೆ ಆಶ್ಚರ್ಯವೋ ಆಶ್ಚರ್ಯ.

ಕೆಳಕ್ಕಿಳಿದ. ಐದು ರೂಪಾಯಿ ಜೇಬು ಸೇರಿತು. ಇನ್ನೇನು ಅವನು ಹೊರಡಬೇಕು, ಆಗ ಸರಿಯಾಗಿ ಪಕ್ಕದ ಮನೆಯ ಬಂಕ್ ಪುಟ್ಟಣ್ಣ ಬಂದರು. ಅವನು ಸರಕ್ಕನೆ ಜಾಗ ಖಾಲಿ ಮಾಡಿದ.

ಪುಟ್ಟಣ್ಣ ಆಗ ಐಯರ್‌ಗೆ ಹೇಳಿದ್ದು ತುಂಬಾ ಸ್ವಾರಸ್ಯವಾಗಿತ್ತು. "ಸಾರ್! ನೀವೂ ಟೋಪಿ ಬಿದ್ರಾ ಇವನಿಗೆ? ಅವನ ಕೈ ಬಳಿ ಚೀಲ ಇದೆ ನೋಡಿ, ಅದರ ತುಂಬಾ ಸತ್ತ ದುಂಬಿಗಳು. ಅದೇ ಅವನ ಬಂಡವಾಳ. ಸುಮ್ನೇ ಕೊಕ್ಕೇಲಿ ಚುಚ್ಚಿದ ಹಾಗೆ ಮಾಡಿ, ಚೀಲದಲ್ಲಿ ಅವನೇ ತಂದಿರುವ ಸತ್ತ ದುಂಬಿಗಳನ್ನ ಪಟ ಪಟಾಂತ ಉದುರಿಸ್ತಾನೆ. ಮತ್ತೆ ಅವನ್ನೇ ಚೀಲಕ್ಕೆ ತುಂಬಿಕೊಂಡು ಮುಂದಿನ ಮನೆಗೆ ಹೋಗ್ತಾನೆ" ಅಂದಾಗ ಅಲ್ಲಿಗೆ ಗುಂಡಪ್ಪನೂ ಬಂದರು. ಎಲ್ಲಾ ಅವನ ಜಾಣ್ಮೆಗೆ ತಲೆದೂಗಿದರು.

ಶಂಕರ ಭಗವತ್ಪಾದರು ಹೇಳಲಿಲ್ಲವೇ, "ಉದರ ನಿಮಿತ್ತಂ ಬಹುಕೃತ ವೇಷಂ."

****

### (2) ತವರು ಮನೆ ಟೋಪಿವಾಲಾ

ನಮ್ಮ ನಂಜನಗೂಡಿನ ಮನೆಯ ಹತ್ತಿರವೇ ನಮ್ಮ ಸೀತಜ್ಜಿಯ ಮಿಷನ್ ಮನೆ ಇತ್ತು. ಅವರು ಅದಕ್ಕೆ ಬೀಗ ಹಾಕಿ ನಮ್ಮ ಮನೆಗೆ ಬರುವಾಗ ದಾರಿಹೋಕನೊಬ್ಬ, ಹತ್ತಿರ ಇದ್ದವರನ್ನ "ಈಗ ಓದ್ರಲ್ಲಾ ಇವರು ಯಾರವ್ವಾ?" ಅಂತ ಕೇಳಿದಾಗ ಅವರು "ಸೀತಮ್ಮನವರೂಂತ, ಬನ್ನೂರಿನವರು" ಅಂದ್ರು.

ಸೀತಜ್ಜಿ ಮನೆಗೆ ಬಂದಾಗ ಮಧ್ಯಾಹ್ನ ಒಂದು ಘಂಟೆ. ನಾನು ಹಜಾರದಲ್ಲಿ ಓದುತ್ತಾ ಕೂತಿದ್ದೆ. ಯಾವನೋ ಬಂದವನೇ "ಬುದ್ದೀ, ಬನ್ನೂರ ಸೀತಮ್ಮನವರು

ಅವ್ರಾ ಮನ್ಯಾಗೆ?" ಅಂತ ಕೇಳಿದ.

ನಾನು ಸೀತಜ್ಜೀನ ಕರೆದೆ. ಬಂದ್ರು, ಅವರಿಗೆ ನಾನು "ಯಾರೋ ಬನ್ನೂರಿನೋರಂತೆ. ಬಂದೀದಾರೆ ನೋಡಿ" ಅಂದೆ.



ಸೀತಜ್ಜಿ ಅವನ ಕಡೆ ನೋಡಿ, "ಯಾರಪ್ಪಾ ನೀನು?"

ಅವನು – ಏನ್ರವ್ವಾ, ನನ್ನ ಮರೆತೇಬುಟ್ರಾ. ನಿಮ್ಮ ಗದ್ದೆ ಹೊಲ ನೋಡ್ಕೊಳೋ ಮಾದಪ್ಪಾ ಅಲ್ವಾ?

ಸೀತಜ್ಜಿ – ಅಯ್ಯೋ ಮಾದಪ್ಪ! ನೀನೋ? ನನ್ನ ಅಣ್ಣ ಸೂರಪ್ಪ ಚೆನ್ನಾಗಿದಾನೇನೋ?

ಅವನು – ಅಂಯ್ಯೋ, ಸೂರಪ್ಪನೋರು ಸದಾ ಸೀತವ್ವಾ, ಸೀತವ್ವಾ ಅಂತ ನಿಮ್ಮದೇ ಮಾತು.

ಸೀತಜ್ಜಿ – ವೆಂಕಟಸುಬ್ಬು ಹೇಗಿದಾನೋ?

ಅವನು – ಅಯ್ಯೋ, ಸುಬ್ಬಪ್ಪನೋರು ತಮ್ಮನ್ನೋಡಿ ತುಂಬಾ ದಿನಾ ಆಯ್ತು. ಬರ್‍ತಾರೇ ಕಣ್ರವ್ವಾ ಬರೂ ಶನಿವಾರ. ತಮಗೆ ಹೀರೆಕಾಯಿ ಕಳಿಸವ್ರೇ (ಅದನ್ನು ಅವನು ಅಜ್ಜಿಯ ಕೈಗೆ ಕೊಟ್ಟ)

ಸೀತಜ್ಜಿ – ಪುಟ್ಟಕ್ಕ ಏನಾದ್ರೂ ಊರಿಗೆ ಬಂದಿದ್ಲೇನೋ?

ಅವನು – ಅವ್ವಾ, ಅದೇನ್ ಏಳ್ಲೀ! ಪುಟ್ಟಮ್ನೋರ್‍ಗೆ ನಿಮ್ಮನ್ನ ಕಂಡ್ರೆ ತುಂಬಾ ಇಸ್ವಾಸ. ಅವರೇ ಕಣ್ರವ್ವಾ ಹೀರೇಕಾಯಿ ಕೊಟ್ಟೋರೂ.

ಸೀತಜ್ಜಿ – ಏಳೋ ಊಟ ಮಾಡೂವಿಯಂತೇ.

ಅವನು – ಬ್ಯಾಡ್ರೀ ಕಣವ್ವಾ. ನನ್ನ ಎಡ್ತೀ ಏಳೂ ತಿಂಗಳ ಬಸರೀ. ಬಸ್ ಇಳೀತಿದ್ದಂಗೇ ಒಟ್ಟೆನೋವು ಅಂದ್ಲು. ಆಸ್ಪತ್ರೆಯಾಗೆ ಅವಳ್ನ ಕೂರಿಸಿಬಿಟ್ಟು ಬಂದಿವ್ನೀ. ಕೈನಾಗೆ ದುಡ್ಡ ತರ್‍ನಿಲ್ಲಾ. ಒಂದು ಐವತ್ತು ರೂಪಾಯಿ ಇದ್ರೆ ಕೊಡೀವ್ವಾ. ನಾಳೆಯೇ ತಮಗೆ ತಂದು ಕೊಟ್ಟುಬಿಡ್ತೀನಿ.

ಸೀತಜ್ಜಿ ಇದನ್ನು ಕೇಳಿ ಒಳಗೆ ಹೋಗಿ ಅವನಿಗೆ ಐವತ್ತು ರೂಪಾಯಿ ತಂದುಕೊಟ್ಟರು. ಅವನು ಸೀತಜ್ಜಿಯ ಕಾಲಿಗೆ ಅಡ್ಡಬಿದ್ದು ಜಾಗ ಖಾಲಿ ಮಾಡಿದ. ನಾನೂ ನೋಡ್ತಲೇ ಇದ್ದೆ.

ಇದಾದ ಅರ್ಧ ಘಂಟೆಗೆ ಚಿಕ್ಕಪ್ಪ ಮನೆಗೆ ಬಂದರು. ಅವರ ಹತ್ತಿರ ನಾನೆಲ್ಲಾ ಹೇಳಿದೆ. ಆಗವರು – "ಬರೀ ಟೋಪಿ ಕಣೋ – ಇದೇ ತರಹ ಅವನು ಎದುರುಮನೆ ಶಾಸ್ತ್ರಿಗಳ ಮನೇಲಿ ಮೊನ್ನೆ ಐವತ್ತು ರೂಪಾಯಿ ತಗೊಂಡ್ ಹೋಗಿದ್ದಾನೆ ಖದೀಮ. ಅವನನ್ನ ಪೋಲೀಸ್‌ಗೆ ಹೇಳಿ ಹಿಡಿಸಬೇಕು" ಅಂದಾಗ ಸೀತಜ್ಜಿ ಗೋಳೋ ಎಂದು ಅತ್ತದ್ದನ್ನು ನಾನು ಮರೆತಿಲ್ಲ. ■

# ಇದು ಎಕ್ಕಡದ ವಿಸ್ಯಾ...

**ರಾಜೇಶ್ವರಿ ಹುಲ್ಲೇನಹಳ್ಳಿ**

ಬೆಳಗ್ಗೆ ಎದ್ದವಳು ಮನೆಯಿಂದ ಹೊರಬಂದರೆ ಹೊರಗೆ ಬಿಟ್ಟಿದ್ದ ನನ್ನ ಪಾದರಕ್ಷೆಯಲ್ಲಿ ಒಂದು ಮಾತ್ರ ಇದೆ ಮತ್ತೊಂದು ಕಾಲಿನ ಪಾದರಕ್ಷೆ ಮಾಯ! ಸುತ್ತಲೂ ಹುಡುಕಿದೆ, ಗಾರ್ಡನ್‌ನಲ್ಲಿ ಕೂಡ ನೋಡಿದೆ. ಮನೆಯ ಆಸುಪಾಸು ಕಣ್ಣು ಹಾಯಿಸಿದರೂ ಇಲ್ಲ. ಚಪ್ಪಲಿಯ ಬೆಲೆ ತುಸು ಹೆಚ್ಚು (ನನ್ನ ಭಾವನೆಯಲ್ಲಿ!) ಅದು ನಾಲ್ಕೂವರೆ ಸಾವಿರ ಮುಖಬೆಲೆಯ ಅಲ್ಲಲ್ಲಾ... ಚಪ್ಪಲಿಬೆಲೆಯ ಚಪ್ಪಲಿಯನ್ನು ಆಫರ್ ಎಂಬ ಮಾರಾಟದ ಆಕರ್ಷಣೆಯಲ್ಲಿ ಅಣ್ಣನ ಮಗಳು ಆನ್‌ಲೈನ್‌ನಲ್ಲಿ ಬುಕ್ ಮಾಡಿ ಮೂರುಸಾವಿರದ ಆರುನೂರು ಕೊಟ್ಟು ಖರೀದಿಸಿದ್ದು. ತುಂಬಾ ಹೆಚ್ಚಿನ ಹಣ ಕೊಟ್ಟು ಖರೀದಿಸಿ ಧರಿಸುವವರು ಸಹಸ್ರಾರು ಮಂದಿ ಇದ್ದಿರಬಹುದು. ಆದರೆ ನಾಲ್ಕೈದು ಸಾವಿರ ಕೊಟ್ಟು ಚಪ್ಪಲಿ ಖರೀದಿಸುವುದೆಂದರೆ ಅದು ದುಬಾರಿ ಹಾಗೂ ದುಂದುವ್ಯಯ ಎಂಬ ಸ್ಥಿತಿ ಹಾಗೂ ಮನಸ್ಥಿತಿ ನನ್ನದು. ಬಾಟಾ ಮತ್ತು ಲಿಬರ್ಟಿ ಕಂಪೆನಿಯ ಒಂದು, ಒಂದು ಸಾವಿರದೈನೂರರ ಆಸುಪಾಸಿನ ಬೆಲೆಯ ಚಪ್ಪಲಿ ಖರೀದಿಸಿದ್ದು ಬಿಟ್ಟರೆ, ಅದಕ್ಕಿಂತ ಹೆಚ್ಚು ಕೊಟ್ಟು ನಾನೆಂದೂ ಪಾದಕ್ಕೆರಕ್ಷೆ ಕೊಂಡಿರಲಿಲ್ಲ. ಇದು ನನ್ನ ಮಿತಿ, ಸ್ಥಿತಿ, ಅಲ್ಲಲ್ಲ... ನನ್ನ ಮನಸ್ಥಿತಿ! ಈಗಿನ ಮಕ್ಕಳಿಗೆ ಅದೆಲ್ಲಾ ತೀರಾ ಕನಿಷ್ಠ! ಹಾಗೇ ನಮ್ಮ ಮನಸ್ಥಿತಿ ಅವರಿಗೆ ಅಣಕ ಹಾಗೂ ನಿಕೃಷ್ಟ! ಮಕ್ಕಳ ಬಲವಂತಕ್ಕಾಗಿ ಒಂದು ಹೆಸರಾಂತ ಬ್ರಾಂಡೆಡ್ ಕಂಪೆನಿಯ ಎಕ್ಕಡವನ್ನು ಅಪರೂಪಕ್ಕೆ ಕೊಂಡಿದ್ದೆ. ಪರವಾಗಿಲ್ಲ, ಒಳ್ಳೆಯ ಫೀಲಿಂಗ್ ಇತ್ತು ಹಾಗೂ ಲಕ್ಷಣವಾಗಿ ಕೂಡ ಇತ್ತು. ಹಾಗೇ ಬಾಳಿಕೆ ಕೂಡ ಬಂದಿತ್ತು. 'ಕಾಸಿಗೆ ತಕ್ಕ ಕಜ್ಜಾಯ' ಎಂಬುದು ಸರಿ ಎನಿಸಿತ್ತು. ಪರವಾಗಿಲ್ಲ, ಅದಕ್ಕೆ ನಾನು ಕೊಟ್ಟ ಹಣಕ್ಕೆ ಅದು ನನಗೆ ನೀಡುತ್ತಿರುವ. ಅಲ್ಲಲ್ಲ...ನನ್ನ ಪಾದಕ್ಕೆ ನಿಡುತ್ತಿದ್ದ ಮೃದು ಸ್ಪರ್ಶ, ರಕ್ಷಣೆ ಹಾಗೂ ಅಂದಕ್ಕೆ ಮೆಚ್ಚಿಕೊಂಡೆ ಮೊದಲ ಬಾರಿಗೆ! ಅಂಥಾ ಚಪ್ಪಲಿಯನ್ನು ನನಗೆ ಶಿಫಾರಸ್ಸು ಮಾಡಿ ಕೊಡಿಸಿದ, ಅಲ್ಲಲ್ಲಾ... ಕೊಳ್ಳಲು ನನ್ನನ್ನು ಒಪ್ಪಿಸಿದ ಮಕ್ಕಳಿಗೆ ಮನದಲ್ಲೇ ಮೆಚ್ಚುಗೆ ಸೂಸಿದೆ.

ಜೋಡು, ಮೆಟ್ಟುಗೆ, ಚಪ್ಪಲಿ, ಎಕ್ಕಡ ಹಾವುಗೆ, ಮೆಟ್ಟು, ಪಾದುಕೆ ಪಾದರಕ್ಷೆ ಸ್ಲಿಪ್ಪರ್, ಶೂ, ಬೂಟ್ಸು, ಹೀಗೆಲ್ಲಾ ಹತ್ತಾರು ನಾಮಗಳಿಂದ ಕರೆಯಲ್ಪಡುವ ಅವುಗಳು ನಮ್ಮ ಪಾದಗಳನ್ನು ಕಲ್ಲು ಮುಳ್ಳು ಮಣ್ಣು, ಹುಳು ಹುಪ್ಪಟೆಗಳಿಂದ ರಕ್ಷಿಸಿಕೊಳ್ಳುವ ಸಲುವಾಗಿ ಧರಿಸುವುದರಿಂದ, ಅಲ್ಲಲ್ಲಾ, ಅವೆಲ್ಲವುಗಳಿಂದ ನಮ್ಮನ್ನು ರಕ್ಷಿಸುವ ಕಾಯಕ ಮಾಡುವುದರಿಂದ ತಾನೇ ನಾವು ಅವುಗಳಿಗೆ ಪಾದರಕ್ಷೆ ಎಂದು ಗೌರವದಿಂದ ನಾಮಕರಿಸಿರುವುದು! ಹಲವೊಮ್ಮೆ ಈ ಪಾದರಕ್ಷೆಗಳಿವೆಯಲ್ಲಾ ಅವು ನಮ್ಮ ಪಾದಕ್ಕೆ ರಕ್ಷಣೆ ಕೊಡುವ ಬದಲಿಗೆ ನಾವೇ ಅವಕ್ಕೆ ರಕ್ಷಣೆ ಕೊಡಬೇಕಾದ ಪರಿಸ್ಥಿತಿಯುಂಟು, ಅದೂ ಜನರಲ್ಲಿ ಹಣಕಾಸಿನ ವಹಿವಾಟು ಹೆಚ್ಚಿ. ಆರ್ಥಿಕವಾಗಿ ಮುಂದುವರೆದಂತೆ, ಚಪ್ಪಲಿ ಕಳ್ಳತನ ಕಡಿಮೆಯಾಗಿದೆ. ಆದರೂ ಒಮ್ಮೆ ನನ್ನ ಸಹೋದ್ಯೋಗಿಯೊಬ್ಬರು ಯಾವುದೋ ಕಾರ್ಯಕ್ರಮಕ್ಕೆ ಹೋಗಿ ಕಛೇರಿಗೆ ತಡವಾಗಿ ಬಂದರು. ಬಂದವರೇ, "ಎಂಥಾ ಕೆಲ್ಸಾ ಆಯ್ತು ಗೊತ್ತಾ? ಯಾರೋ ನನ್ನ ಚಪ್ಪಲೀನೇ ಹೊಡ್ದುಬಿಟ್ರು! ಎಷ್ಟು ಹುಡುಕಿದ್ರೂ ಸಿಗಲಿಲ್ಲ, ಚಪ್ಲಿ ಹುಡುಕೋದ್ರಲ್ಲಿ ತಡ ಆಗೋಯ್ತು" ಎಂದರು. "ಸರಿಯಾಗಿ ಎಲ್ಲಿ ಬಿಟ್ಟಿದ್ರಿ ಅಲ್ಲಿ ಹುಡುಕಬೇಕಿತ್ತು" ಎಂದರು ಮತ್ತೊಬ್ಬರು. "ಅಯ್ಯೋ, ಬಿಟ್ಟ ಕಡೇನೇ ಹುಡುಕಿದೆ. ಸಿಗಲೇ ಇಲ್ಲ" ಎಂದರು.

"ಮತ್ತೇ ಬರಿಗಾಲಲ್ಲಿ ಬಂದೇನೋ ಮಾರಾಯ?"

"ಬರಿಗಾಲಲ್ಲಿ ಯಾಕ್ಬರ್ತಾರೆ, ಚಪ್ಪಲಿ ಹಾಕ್ಕೊಂಡೇ ಬಂದೆ."

"ಸರಿ ಮತ್ತೆ. ಸಿಕ್ಕಿದ್ಯಲ್ಲಾ ಬಿಡುಇನ್ನೇನು."

"ಆಂ? ಸಿಕ್ಕಿತಾ?ಸಿಕ್ಕಿದ್ ಎಲ್ಬಂತು?" ಎಂದರು ಕೋಪದಿಂದ. "ಮತ್ತೆ?" ಎಂದು ಅವರ ಪಾದಗಳೆಡೆಗೆ ನೋಡಿದವರು "ಹಾಕ್ಕೊಡಿದಿಯಲ್ಲಾ?" ಎಂದೊಡನೆ "ನನ್ನ ಚಪ್ಪಲಿ ಸಿಗ್ಲಿಲ್ಲ, ನನ್ನ ತರದ್ದೇ ಅಲ್ಲಿ ಯಾವ್ದೋ ಇತ್ತು. ನನ್ನದು ಕಪ್ಪು ಬಣ್ಣ, ಅದು ನೀಲಿ ಇತ್ತು. ಅದನ್ನೇ ಹಾಕ್ಕೊಂಡ್ಬಂದೆ ಅಷ್ಟಾಗೇ" ಎಂದಾಗ ಉಳಿದ ಸಹೋದ್ಯೋಗಿಗಳೆಲ್ಲಾ, "ಹಾಂ? ನಿನ್ನ ಚಪ್ಪಲಿ ಸಿಗಲಿಲ್ಲಾ ಅಂತ ಬೇರೆಯವರ ಚಪ್ಪಲಿ ಹಾಕ್ಕೊಂಡು ಬಂದಿದಿಯಲ್ಲಾ, ಇದೇನೋ ಮಾರಾಯ?" ಎಂದೊಡನೆ, "ಮತ್ತೆ? ನನ್ನ ಚಪ್ಪಲಿ ಯಾವನೋ ಹಾಕ್ಕಂಡೋಗಿದ್ದ. ಅದ್ಕೆ ನಾನೂ ನನ್ನ ಚಪ್ಪಲಿ ತರದ್ದೇ ಬೇರೇದು ಹಾಕ್ಕಂಡ್ಬಂದೆ, ಮತ್ತೆ ಹಂಗೇ ಬರಿಗಾಲಲ್ಲಿ ಬರಕ್ಕಾಗುತ್ತಾ?" ಎಂದ ಅವರ ತರ್ಕಕ್ಕೆ ಎಲ್ಲರೂ ಮುಸಿಮುಸಿ ನಕ್ಕರು. ಒಬ್ಬ ಅವರ ಗಳಸ್ಯ ಕಂಠಸ್ಯ ಗೆಳೆಯ ಮಾತ್ರ, "ಏಯ್, ಹಾಕ್ಕೊಳೋದು ಹಾಕ್ಕೊಂಡ್ಬಂದೆ. ಯಾವುದಾದರೂ ಕಾಸ್ಟ್ಲಿ ಚಪ್ಪಲಿ ಹಾಕ್ಕೊಂಡು ಬರಬೇಕಿತ್ತು ಕಣೋ" ಎಂದು ಕಿಚಾಯಿಸಿದರು

ನಾನು "ಅಯ್ಯೋ, ಚಪ್ಪಲಿ ಕಳೆದುಹೋದ್ರೆ ಕರ್ಮ ಕಳೆದಂಗೆ ಅಂತಾರೆ ಗೊತ್ತಾ?, ಏನೋ ಕಳ್ದೋದ್ರೆ ಹೋಗ್ಲಿ, ಕರ್ಮ ಕಳೀತು ಅಂತ ಬರೋದ್ಬಿಟ್ಟು ಬೇರೆ ಯಾರದೋ ಚಪ್ಪಲಿ ಹಾಕ್ಕೊಂಡ್ಬಂದಿದೀರಲ್ಲಾ" ಎಂದಾಗ, "ಯಾವ್ಕರ್ಮಾನೂ ಇಲ್ಲಾ, ಯಾವ ಪುಣ್ಯಾನೂ ಇಲ್ಲ ಬಿಡಮ್ಮಾ. ಚಪ್ಪಲಿ ಕಳ್ಕೊಂಡ್ ಬೇಜಾರಾಗದಿರ್ಲಿ ಅಂತ ಹಂಗೆ ಹೇಳ್ತಾರೆ ಅನ್ಸುತ್ತೆ" ಎಂದರು. ಹೌದು. ಅವರ ತರ್ಕವೂ ಸರಿಯಿರಬಹುದು. ಕಳೆದುಹೋದುದಕ್ಕೆ ಚಿಂತಿಸಬಾರದೆಂದು ಹಾಗೆ ಹೇಳುತ್ತಿದ್ದರೆನಿಸುತ್ತದೆ. ಹಾಗೇ ನೋಡಿ, ಚಿನ್ನ ಸಿಕ್ಕಿದರೆ ಒಳ್ಳೆಯದಲ್ಲಾ, ಕೆಡುಕು ಎಂದು ಕೂಡ ಹೇಳುವರು. ಯಾಕಂದ್ರೆ ಚಿನ್ನ ಸಿಕ್ಕಿದರೂ ವಾಪಸ್ ಮಾಡಿದರೆ ಚಿನ್ನ ಕಳೆದುಕೊಂಡವರು ಸಂಕಟ ಪಡದಂತಾಗುತ್ತದೆ ಎಂದಿರಬಹುದು.

ಬಹಳ ಹಿಂದೆ ಚಪ್ಪಲಿ ಕಳ್ಳತನಗಳಾಗುತ್ತಿದ್ದವು. ದೇವಸ್ಥಾನದ ಮುಂದಂತೂ ಹೆಚ್ಚು ನಡೆಯುತ್ತಿತ್ತು. ಆ ಕಾರಣದಿಂದಲೇ ಅಲ್ಲೊಂದು ಚಪ್ಪಲಿ ಕಾಯುವ ಸಣ್ಣ ಉದ್ಯೋಗದ ಸೃಷ್ಟಿಯಾಯ್ತೆನ್ನಬಹುದು. ಅದು ಕೆಲವರ ಉದರ ನಿಮಿತ್ತ ಕಾಯಕವಾಯ್ತು. ಹಲವು ದೇವಾಲಯಗಳ ಮುಂದೆ ಚಪ್ಪಲಿ ಕಾಯುವ ಕಾಯಕದವರು ಒಂದು ಜೊತೆ ಪಾದರಕ್ಷೆಗೆ ಎರಡು ರೂ ಅಥವಾ ಐದು ರೂ ಎಂದು ಬೋರ್ಡ್ ಹಾಕಿಕೊಂ-ಡಿರುತ್ತಾರೆ. ಅದು ಪಾದರಕ್ಷೆಗಲ್ಲ, ಪಾದರಕ್ಷೆಗಳ ರಕ್ಷಣೆಗೆ! ಹಲವರಂತೂ ಚಪ್ಪಲಿ ಕಾಯಲು ಹಣ ಕೊಡ-ಬೇಕಲ್ಲಾ ಎಂದು ಒಂದು ಚಪ್ಪಲಿಯನ್ನು ಒಂದು ಕಡೆ, ಮತ್ತೊಂದನ್ನು ಇನ್ನೊಂದು ಕಡೆ ಬಿಟ್ಟು, ನಂತರ ಎರಡೂ ಬದಿ ಬಿಟ್ಟ ಚಪ್ಪಲಿಗಳ ಹುಡುಕಾಟದ ಸರ್ಕಸ್ ಮಾಡುತ್ತಾರೆ. ಹಾಗೇ ಚಿನ್ನಾರಿಮುತ್ತ ಸಿನೆಮಾದ ಚಪ್ಪಲಿ ಕದಿಯುವ ಕೆಲಸವೇ ಬದುಕಾಗಿದ್ದ ಕಥೆ ಗೊತ್ತಿದೆಯಲ್ಲಾ. ಶೂ ಕದ್ದು ಓಡಿಹೋದ ಹುಡುಗನೊಬ್ಬ ಅವನ ವೇಗದ ಓಟದಿಂದ ದೊಡ್ಡ ಓಟಗಾರನಾಗಿ ಪ್ರಸಿದ್ಧನಾಗಿದ್ದು. ಅವನ ಬದುಕಿನ ದಿಕ್ಕನ್ನೇ ಬದಲಿಸಿದ್ದು. ಹಿಂದೆಲ್ಲಾ ಚಪ್ಪಲಿ ಹಾಕದೇ ಬರಿಗಾಲಲ್ಲಿ ನಡೆಯುವವರು ಬಹಳಷ್ಟಿದ್ದರು. ಭೂಮಿ ಗಾಜು ಪ್ಲಾಸ್ಟಿಕ್ ಕೆಮಿಕಲ್ ಮುಕ್ತವಾಗಿತ್ತು. ಬರಿಗಾಲಲ್ಲೇ ನಡೆದರೂ ಯಾವುದೇ ತೊಂದರೆಯಾಗುತ್ತಿರಲಿಲ್ಲ. ಹೊಲಗದ್ದೆಗಳಿಗಳಿಗಂತೂ ಚಪ್ಪಲಿ ಮೆಟ್ಟಿ ಕಾಲಿಡುತ್ತಿರಲಿಲ್ಲ. ಅನ್ನ ನೀಡುವ ಭೂತಾಯಿಯ ಬಗ್ಗೆ ಅಪಾರ ಭಯ ಭಕ್ತಿ ಇತ್ತು. ಆದರೆ ಇಂದು ಬರಿಗಾಲಲ್ಲಿ ಹೊಲಕ್ಕೆ ಇಳಿಯುವಂತೆಯೇ ಇಲ್ಲ. ಭೂತಾಯಿ ಇಂದು ರಾಸಾಯನಿಕ ಗೊಬ್ಬರ ತಿಂದು ಅಸ್ವಸ್ಥಳಾಗಿರುವಳು. ಆ ರಾಸಾಯನಯುಕ್ತ ಮಣ್ಣಿನಲ್ಲಿ ಕಾಲಿಟ್ಟರೆ

ಹಲವು ಚರ್ಮರೋಗಗಳು ಬರುವ ಸಾಧ್ಯತೆಗಳು ಕೂಡ ಉಂಟು. ಚಪ್ಪಲಿ ಎಂದರೆ ಬಹುತೇಕ ಮನೆಯಿಂದ ಹೊರಗೆ ಪಾದಗಳಿಗೆ ಧರಿಸುವ ವಸ್ತುವಾಗಿತ್ತು, ಚಪ್ಪಲಿ ಬಿಡುವ ಜಾಗ ಮನೆಯಿಂದ ಹೊರಗಿತ್ತು. ಬರಬರುತ್ತಾ ಹೆಚ್ಚು ಹಣ ಕೊಟ್ಟು ಕೊಂಡ ಕಾರಣ ಮನೆಯ ಒಳಗೆ ಪಡಸಾಲೆ ಪ್ರವೇಶದ ಅವಕಾಶ ನೀಡಲಾಯ್ತು. ನಂತರ ಅವು ಒಳಗೆಲ್ಲ ಚಲ್ಲಾಡುವಾಗ ಅವುಗಳಗಾಗಿ ಮನೆ ಕಟ್ಟುವಾಗಲೇ ಮನೆಯ ಒಳಗೆ ಚಪ್ಪಲಿ ಗೂಡುಗಳನ್ನು ಕಟ್ಟಿಸಿಕೊಳ್ಳುವ ಪರಿಕಲ್ಪನೆ ಹುಟ್ಟಿಕೊಂಡಿತು. ಹಾಗೇ ಮುಂದುವರೆಯುತ್ತಾ ಜನ ಹೆಚ್ಚು ಹೆಚ್ಚು ಹಣ ಕೊಟ್ಟು ಖರೀದಿಸಿದ ಚಪ್ಪಲಿಗಳಿಗೆ ಅವುಗಳ ಬೆಲೆಯ ಘನತೆಗೆ ತಕ್ಕಂತೆ ಅವುಗಳಿಗೆ ಉತ್ತಮ ಸ್ಥಾನಮಾನ ನೀಡುವ ಸಲುವಾಗಿ ವಿವಿಧ ವಿನ್ಯಾಸದ ಮರದ ಶೂ ರ್‍ಯಾಕ್‌ಗಳ ಆವಿಷ್ಕಾರವಾಗಿ, ಮನೆಯ ಒಳಗೆ ಚಪ್ಪಲಿ ಶೂಗಳಿಗೆ ತಮ್ಮದೇ ಆದ ಸ್ಥಾನ ದೊರೆಯುವಂತಾಯ್ತು. ನಂತರ ಚಂದವಾದ ಅವುಗಳನ್ನು ಮನೆಯ ಒಳಗೂ ಧರಿಸುವ ಅಭ್ಯಾಸಗಳು ಎಲ್ಲೆಡೆಯೂ ಪ್ರಚಲಿತಕ್ಕೆ ಬಂದಿದೆ. ಹಿಂದೆ ಅತ್ಯಂತ ಶೀತ ವಾಯುಗುಣ ಹೊಂದಿರುವ ಪ್ರದೇಶಗಳಲ್ಲಿ ವಾಸಿಸುವ ಜನರು ಮಾತ್ರ ದೇಹಕ್ಕೆ ಶೀತ ಹಿಡಿಯದಿರಲೆಂದು ಮನೆಯ ಒಳಗೂ ಚಪ್ಪಲಿ ಧರಿಸುವುದು ರೂಢಿಯಲ್ಲಿತ್ತು. ಅದೆಲ್ಲಾ ಕೊಡಗು, ಚಿಕ್ಕಮಗಳೂರು, ಊಟಿ, ಇಂತಹ ಕಡೆ, ಹಾಗೇ ಬ್ರಿಟಿಷರು ವಾಸಿಸಿದ ಸ್ಥಳಗಳಲ್ಲಿ ಅವರ ಅನುಕರಣೆಯಲ್ಲಿ ಮಾತ್ರ! ಬಹುತೇಕ ಅವರ ವಾಸಸ್ಥಾನಗಳು ತಂಪಾದ ಪ್ರದೇಶಗಳಲ್ಲೇ ಅಲ್ಲವೇ? ಆದರೆ ಈಗ ಬಯಲುಸೀಮೆಯಲ್ಲೂ ಮನೆಯ ಒಳಗೂ ಚಪ್ಪಲಿ ಮೆಟ್ಟಿ ಓಡಾಡುವುದು ಅಭ್ಯಾಸವಾಗಿದೆ, ಕಾರಣ ಮನೆಯೊಳಗೆ ಸೆಗಣಿ, ರೆಡ್ ಆಕ್ಸೈಡ್ ಫ್ಲೋರಿಂಗ್‌ಗಳು ಮಾಯವಾಗಿ ಘನತೆ ದೊಡ್ಡಸ್ತಿಕೆ ತೋರ್ಪಡಿಸುವಿಕೆಯ ಮತ್ತೊಬ್ಬನ ಅನುಕರಣೆಯ ಭರದಲ್ಲಿ ಎಲ್ಲ ಮಾರ್ಬಲ್, ವೆಟ್ರಿಫೈಡ್‌ಮಯವಾಗಿ, ಮನೆ ಕಟ್ಟಿ ವಾಸ ಹೋದ ನಾಲ್ಕಾರು ತಿಂಗಳುಗಳಲ್ಲಿ ಶೀತದಿಂದ ಮಂಡಿನೋವು ಶುರುವಾಗಿ, ಮಡಿವಂತ ಹಿರಿಯರು ಕೂಡ ಇಂದು ಮನೆಯೊಳಗೆ ಚಪ್ಪಲಿ ಧರಿಸುವಂತೆ ಮಾಡಿಕೊಂಡಿದ್ದೇವೆ. ಇದು **"ಕಾಲಾಯ ತಸ್ಮೈ ನಮಃ"** ಅಲ್ಲ. ನಾವೇ ಮಾಡಿಕೊಂಡ **"ಸ್ವಯಂಕೃತ ಅಪರಾಧಾಯ ನಮಃ!"**




ಶ್ವಾನಗಳು ಚಪ್ಪಲಿ ಹೊತ್ತೊಯ್ವ ಕಥೆ ಇಂದು ನಿನ್ನೆಯದಲ್ಲವಂತೆ. ಮಹಾಭಾರತದಲ್ಲಿನ ಒಂದು ದಂತಕತೆಯಂತೆ. ಈ ಶ್ವಾನಕ್ಕೆ ದ್ರೌಪದಿಯ ಶಾಪವಿತ್ತಂತೆ. ಆದರೂ ಇಂದಿಗೂ ಕಲಿಯುಗದಲ್ಲೂ ಚಪ್ಪಲಿಯನ್ನು ಹೊತ್ತೊಯ್ಯುತ್ತಲೇ ಇವೆಯಲ್ಲ! ಧರ್ಮರಾಯ ಮತ್ತು ದ್ರೌಪದಿ ಏಕಾಂತದಲ್ಲಿರುವಾಗ ಅದರ ಅರಿವಿರದೇ ಅಚಾನಕ್ಕಾಗಿ ಅರ್ಜುನ ಒಳಬಂದಾಗ

ಅವರ ಏಕಾಂತಕ್ಕೆ ಭಂಗ ತಂದ ಕಾರಣ ಪ್ರಾಯಶ್ಚಿತ್ತಕ್ಕಾಗಿ ತೀರ್ಥಯಾತ್ರೆಗೆ ಹೋಗುವಂತಾಗಿದ್ದು ಈ ನಾಯಿಗಳು ಚಪ್ಪಲಿ ಹೊತ್ತೊಯ್ದುದರಿಂದಲೇ ಎಂಬ ಕತೆಯ ನೆನಪಾಯ್ತು. ಧರ್ಮರಾಯ ಹೊರಗೆ ಬಿಟ್ಟ ಪಾದುಕೆಗಳನ್ನು ನಾಯಿಗಳು ಹೊತ್ತೊಯ್ದ ಕಾರಣ ಅರ್ಜುನನಿಗೆ ಧರ್ಮರಾಯ ದ್ರೌಪದಿಯೊಂದಿಗಿರುವ ಸಂಗತಿಯ ಅರಿವಿರಲಿಲ್ಲವಾಗಿ ಇಲ್ಲಿ ಅರ್ಜುನನ ತಪ್ಪಿಲ್ಲ. ತಪ್ಪೆಲ್ಲಾ ನಾಯಿಗಳದ್ದು! ಹೊರಗೆ ಪಾದರಕ್ಷೆಗಳಿದ್ದಿದ್ದರೆ ಅರ್ಜುನ ಒಳ ಪ್ರವೇಶಿಸುತ್ತಿರಲಿಲ್ಲ, ಈ ಅಚಾತುರ್ಯ ನಡೆಯುತ್ತಿರಲಿಲ್ಲ. ಈ ಅಚಾತುರ್ಯಕ್ಕೆ ಕಾರಣೀಭೂತವಾದ, ಹೊರಗೆ ಬಿಟ್ಟ ಚಪ್ಪಲಿಯನ್ನು ಹೊತ್ತುಕೊಂಡು ಹೋದ ಶ್ವಾನಗಳ ಮೇಲೆ ಅತೀವವಾಗಿ ಕೋಪಗೊಂಡ ದ್ರೌಪದಿ ಇಡೀ ಶ್ವಾನ ಸಂಕುಲಕ್ಕೇ ಶಾಪವಿತ್ತಳಂತೆ. ಅದೆಂದರೆ "ಹೇ ಶ್ವಾನಕುಲವೇ, ನನ್ನ ಏಕಾಂತವನ್ನು ಬಯಲಾಗಿಸಿದ ನಿಮ್ಮ ಲೈಂಗಿಕ ಕ್ರಿಯೆ ಬಯಲಲ್ಲಿ ಬಟಾಬಯಲಾಗಿ ಕಿರಿಕಿರಿಯಾಗಿ ನಡೆಯಲಿ! ಎಲ್ಲರೂ ಹೇಸಿಗೆ ಪಡುವಂತಾಗಲಿ" ಎಂದಳಂತೆ. ದ್ರೌಪದಿಯ ಶಾಪವೋ ಮತ್ತೇನೋ ಕಾಣೆ. ಆದರೆ ಅದೆಷ್ಟೋ ಪ್ರಾಣಿಗಳ ದೈಹಿಕ ಕಾಮನೆಗಳು ಮುಚ್ಚುಮರೆಯಲಿ ನಡೆದರೆ, ಈ ಶ್ವಾನ ಸಂಕುಲದ ಈ ಕ್ರಿಯೆ ಬಯಲಲ್ಲಿ! ಬೀದಿಬೀದಿಯಲ್ಲಿ. ಆದರೂ ಪಾಪ, ಚಪ್ಪಲಿಯನ್ನು ಆಟಿಕೆಯಾಗಿ ಆಡಲು ಹೊತ್ತೊಯ್ದ ಶ್ವಾನಗಳಿಗೆ ಈ ಪರಿಯ ಶಾಪವೇ? ಬಹುಶಃ ನಾಯಿ ಕೃತಜ್ಞತೆಗೆ ಎಷ್ಟೇ ಹೆಸರಾದರೂ, ಯಾರನ್ನಾದರೂ ಹೀನಾಯವಾಗಿ ಬೈಯ್ಯುವಾಗ "ಅಬ್ಬಾ! ಮರ್ಯಾದೆಯಿಲ್ಲದವರು ನಾಯಿಗಿಂತ ಕಡೆಯಾದವರು" ಎಂಬ ಬೈಗುಳಗಳು ಇದಕ್ಕೇ ಇರಬಹುದೆನಿಸುತ್ತದೆ.

ರಾಮಾಯಣದಲ್ಲಿ ಪಾದುಕೆಗಳಿಗೆ ವಿಶೇಷ ಸ್ಥಾನವಿದೆ ಶ್ರೀರಾಮನ ಪಾದುಕೆಗಳನ್ನು ಭರತ ತಲೆಯ ಮೇಲೆ ಹೊತ್ತು ತಂದು ಸಿಂಹಾಸದಲ್ಲಿಟ್ಟು ಶ್ರೀರಾಮನೇ ರಾಜನೆಂಬ ಭಾವದಲ್ಲಿ ರಾಜ್ಯಭಾರ ನಡೆಸಿದ್ದು. ಶ್ರೀರಾಮನು ವನವಾಸ ಮುಗಿಸಿ ರಕ್ಕಸ ಸಂಹಾರ ಮಾಡಿ ಅಯೋಧ್ಯೆಗೆ ಹಿಂದಿರುಗಿ ಪಟ್ಟಾಭಿಷೇಕದ ವರೆಗೂ ಆತನ ಪಾದುಕೆಗಳು ಅವನ ಇರುವಿಕೆಯ ಪ್ರತೀಕವಾಗಿದ್ದುದು ನಮಗೆಲ್ಲಾ ತಿಳಿದ ಸಂಗತಿ. ಬಹಳ ಹಿಂದೆ ಗಂಡಿನ ಸಂಖ್ಯೆ ಕಡಿಮೆ ಇದ್ದು, ಗಂಡಿಗೆ ಬರವಿದ್ದಾಗ, ಹೆಣ್ಣುಮಕ್ಕಳಿಗೆ ವರನನ್ನು ಹುಡುಕಲು ವಾಹನ ಸಂಚಾರ, ಸಾರಿಗೆ ವ್ಯವಸ್ಥೆ ಇಲ್ಲದ ಕಾಲದಲ್ಲಿ ಗಂಡು ಹುಡುಕಲು ಅದೆಷ್ಟು ಜೊತೆ ಚಪ್ಪಲಿ ಸವೆದವೋ ಎಂಬ ಮಾತುಗಳು ಕೇಳಿಬರುತ್ತಿದ್ದುದುಂಟು. ಇತ್ತೀಚೆಗೆ ಮನೆಗಳಲ್ಲಿ ಮನೆಯ ಜನರೆಲ್ಲಾ ಊರಿನಿಂದ ಹೊರ ಹೋಗುವುದಾದರೆ ಹೊರಗೆ ಕೆಲವು ಚಪ್ಪಲಿಗಳನ್ನು ಬಿಟ್ಟು ಹೊಗುವುದುಂಟು. ಮನೆಯಲ್ಲಿ ಜನರಿದ್ದಾರೆ ಎಂಬ ಕಲ್ಪನೆಯಿಂದ ಕಳ್ಳಕಾಕರು ಬಾರದಿರಲೆಂಬ ಲೆಕ್ಕಾಚಾರ. ಆದರೂ ಕಳ್ಳರೇನು ಪೆದ್ದರೇ?

ಇಂದು ಪಾದರಕ್ಷೆ ಕೇವಲ ಪಾದರಕ್ಷೆಯಾಗಿಲ್ಲ. ಅದು ಪ್ರತಿಷ್ಠೆಯ ಪ್ರದರ್ಶನ ಕೂಡ ಆಗಿದೆ. ಬ್ರ್ಯಾಂಡೆಡ್ ಚಪ್ಪಲಿ ಧರಿಸಿದರೆ ಘನತೆ ಹೆಚ್ಚು ಎಂಬ ಮನೋಭಾವ ಕೂಡ ಇದೆ. ಒಮ್ಮೊಮ್ಮೆ ಅತ್ಯಂತ ಕಡಿಮೆ ಬೆಲೆಯ ಪಾದರಕ್ಷೆಗಳ ಬಾಳಿಕೆ ಕಡಿಮೆಯಾದಾಗ "ಕೂಳು ಆಟೆಯಾ, ಬಾಳೂ ಆಟೆಯಾ" ಎಂಬ ಗ್ರಾಮೀಣ ಗಾದೆ ನಿಜವೆನಿಸುತ್ತದೆ. ಇನ್ನು ವಿದೇಶಗಳಲ್ಲಿ ದೊಡ್ಡ ದೊಡ್ಡ ಓಟಗಾರರ, ಆಟಗಾರರ ಶೂಗಳಿಗಂತೂ ಇನ್ನಿಲ್ಲದ ಕೋಟಿಗಟ್ಟಲೆ ಬೆಲೆ. ಇಂದು ವಿದೇಶಗಳಿಂದ ಹಲವು ಬ್ರ್ಯಾಂಡ್ ಶೂಗಳನ್ನು ತರಿಸಿಕೊಳ್ಳುವ ಹವ್ಯಾಸ ಕೂಡ ಹಲವರಿಗಿದೆ. ದೇಶದಲ್ಲೇ ನೂರಾರು ಅತ್ಯಂತ ಬ್ರ್ಯಾಂಡ್ ಪಾದರಕ್ಷೆಗಳು ದೊರೆಯುತ್ತವೆ. ಹಲವೊಮ್ಮೆ ಆ ವಸ್ತುಗಳ ಮೌಲ್ಯಕ್ಕಿಂತ ಅವುಗಳಿಗೆ ಜಾಹೀರಾತು ನೀಡುವ ಸೆಲೆಬ್ರಿಟಿಗಳಿಂದ ಕೂಡ ಆಕರ್ಷಣೆಗೊಳಗಾಗುತ್ತದೆ. ವಿಶ್ವದ ಅತ್ಯಂತ ದುಬಾರಿ ಬೆಲೆಯ, ಅಂದರೆ ನೂರ ಅರವತ್ತಮೂರು ಕೋಟಿ ಬೆಲೆಯ ಮೂನ್‌ಸ್ಟಾರ್ ಎಂಬ

ಹೆಸರಿನ ಚಿನ್ನದಶೂ 2017ರಲ್ಲಿ ತಯಾರಾಗಿದ್ದು, ಇದು ವಜ್ರಗಳಿಂದ ಅಲಂಕೃತಗೊಂಡಿದೆಯಂತೆ. ಅಬ್ಬಾ! ನಮ್ಮ ರಾಜ್ಯದ ರಾಜಕಾರಣಿಯೋರ್ವರು ಚಿನ್ನದ ಶೂ ಧರಿಸಿದ್ದರಂತೆ ಎಂಬ ಸಂಗತಿಯ ವದಂತಿ ಕೂಡ ಇತ್ತು. ಇರಲಿ. ಗಾದೆ ಸುಳ್ಳೇ? "ಮುತ್ತಿದ್ದರೆ ಎಲ್ಲಿಯಾದರೂ ಪೋಣಿಸಿಕೊಳ್ಳಬಹುದೆಂದು."

ಅದೆಲ್ಲಾ ಸರಿ. ನಾನು ನನ್ನ ಎಕ್ಕಡದ ಸಂಗತಿಯನ್ನು ಅರುಹಲು ಹೋಗಿ ಬೇರೇನೋ ಹೇಳಿದಂತಾಯ್ತಲ್ಲಾ! ಇರಲಿ. ಬೇಸರಿಸಿಕೊಳ್ಳದಿರಿ. ಮನೆಯಲ್ಲಿ ಮಕ್ಕಳೆಲ್ಲರ ಒತ್ತಾಯಕ್ಕೆ ಬ್ರ್ಯಾಂಡೆಡ್ ಚಪ್ಪಲಿ ಕೊಂಡು ಅದರ ಗುಣಕ್ಕೆ ಒಂದಷ್ಟು ಮೆಚ್ಚಿದ್ದಾಗಿತ್ತು. ಅಷ್ಟರಲ್ಲಿ ಬೆಳಗಾಗುವುದರಲ್ಲಿ ಒಂದು ಚಪ್ಪಲಿ ಮಾಯಾವಾದಾಗ ಬಲು ಬೇಸರವಾಯಿತು. ಅದು ಮಾಯವಾದುದರ ಕುರಿತು ಸಂಶೋಧನೆ ಮಾಡಿದಾಗ ತಿಳಿದದ್ದು, ಅಕ್ಕಪಕ್ಕದ ಮನೆಯವರ ಚಪ್ಪಲಿಗಳು ಕೂಡ ಕಾಣೆಯಾಗಿದ್ದು, ಅವುಗಳನ್ನೆಲ್ಲಾ ನಾಯಿಗಳು ಹೊತ್ತೊಯ್ದಿರುವುದೆಂದು. ಪಕ್ಕದ ಮನೆಯವರ ಕಳೆದುಹೋದ ಒಂದು ಚಪ್ಪಲಿ ಎಲ್ಲೋ ಮುಂದಿನ ಬೀದಿಯಲ್ಲಿ ತನ್ನ ರೂಪವನ್ನು ಕಳೆದುಕೊಂಡು ವಿರೂಪವಾಗಿ ಬಿದ್ದಿತ್ತಂತೆ! ಹೌದು. ನನ್ನ ಚಪ್ಪಲಿಯೂ ಹಾಗೇ ಆಗಿರಬಹುದೆಂದು ಅಲ್ಲೇ ಅಕ್ಕಪಕ್ಕದಲ್ಲೆಲ್ಲಾ ಹುಡುಕಾಡಿದೆವು ಅದರ ಸುಳಿವೇ ಸಿಗಲಿಲ್ಲ. ಚಪ್ಪಲಿ ಕಳೆದುಕೊಂಡವರೆಲ್ಲರ ಮಾತುಕತೆಯಂತೆ ಇದು ನಾಯಿಗಳದೇ ಕೆಲಸ, ನಾಯಿಗಳು ಚಪ್ಪಲಿಯನ್ನು ಹೊತ್ತುಕೊಂಡು ಹೋಗಿ ಬಾಯಲ್ಲಿ ಕಡಿದುಹಾಕುವವೆಂದು ತಿಳಿಯಿತು. ಹಾಗೇ ಸಾಕಿದ ನಾಯಿಗಳು ಕೂಡ ಸಣ್ಣ ಮರಿಗಳಿದ್ದಾಗ ಚಪ್ಪಲಿಯನ್ನು ಹಲ್ಲಿನ ನವೆಗೆ ಕಡಿಯುತ್ತವೆ ಎಂದು ಹಿರಿಯರು ಹೇಳಿದ್ದರು. ನಾಯಿ ಕದ್ದುಕೊಂಡು ಹೋಗಿದ್ದು ಬಲಗಾಲ ಚಪ್ಪಲಿ. ಉಳಿದ ಇನ್ನೊಂದು ಕಾಲಿನ ಚಪ್ಪಲಿಯನ್ನು ಬಹಳಷ್ಟು ದಿನ ಹೊರಗೇ ಬಿಟ್ಟರೂ, ಅದು ಹಾಗೇ ಇತ್ತು. ಹಾಗಾದರೆ ನಾಯಿ ಮತ್ತೆ ಬರುವುದಿಲ್ಲವೆಂದು ತಿಳಿದೆ. ಸರಿ, ಒಂದು ಚಪ್ಪಲಿ ಕಳೆದು ಹೋದಮೇಲೆ ಅದೇ ಬ್ರ್ಯಾಂಡಿನ ಎರಡು ಸಾವಿರ ಬೆಲೆಯ ಚಪ್ಪಲಿಯನ್ನು ಕೊಂಡು ಅದನ್ನು ಹೊರಗೆ ಬಿಡದೆ ಜೋಪಾನವಾಗಿ ಮನೆಯ ಒಳಗೇ ಬಿಡುತ್ತಿದ್ದೆ. ಒಂದು ದಿನ ಮರೆತೆ. ಮರುದಿನ ಮತ್ತೆ ಒಂದು ಚಪ್ಪಲಿ ಮಾಯ! ಅದೂ ಕೂಡ ಬಲಗಾಲಿನದ್ದೇ! ಅಯ್ಯೋ ಮರೆವೆ! ಮತ್ತೆ ಚಪ್ಪಲಿ ಹೋಯ್ತಲ್ಲಾ ಎಂದು ಕೊರಗಿದೆ. ಎಲ್ಲಕ್ಕಿಂತಾ ಹೆಚ್ಚಾಗಿ ಆ ನಾಯಿ ಬಲಗಾಲಿನ ಚಪ್ಪಲಿಯನ್ನೇ ಏಕೆ ಕೊಂಡೊಯ್ತು ಎಂಬುದೇ ಅಚ್ಚರಿಯ ಸಂಗತಿ! ನಾಯಿಗೆ ಎಡಗಾಲಿಲ್ಲವೇನೋ ಅದಕ್ಕೇ ಬರೀ ಬಲಗಾಲಿನದ್ದೇ ಹೊತ್ತಿರಬೇಕು ಎಂದರೆ ಅದಕ್ಕಿರೋದು ಮನುಜರಂತೆ ಬರೇ ಎರಡು ಕಾಲಲ್ಲ, ನಾಲ್ಕು! ಎರಡು ಎಡ, ಎರಡು ಬಲ, ಅಲ್ಲವೇ? ಹಾಗಾದರೆ ನನ್ನ ತರ್ಕ ಸರಿಯಲ್ಲ. ನನ್ನ ಚಪ್ಪಲಿಯದು ನಾಯಿಯ ಕಳ್ಳತನವೆಂದು ತಿಳಿದ ಕಾರಣ ಒಂದು ದಿನ ರಾತ್ರಿ ನಾಯಿ ಬಿಟ್ಟುಹೋಗಿದ್ದ ಮತ್ತೊಂದುಚಪ್ಪಲಿಯನ್ನು ಹೊರಗೆ ಬಿಟ್ಟು ಕಾಯ್ದು ಕುಳಿತೆವು. ಚಪ್ಪಲಿ ಕಳ್ಳ ನಾಯಿ ಬರಲಿ, ಸರಿಯಾಗಿ ಬಿಟ್ಟರೆ ಮತ್ತೆಂದೂ ಇತ್ತ ಸುಳಿಯದಂತೆ ಮಾಡುವಾ ಎಂದು ಕಳ್ಳನಾಯಿ ಅಲ್ಲಲ್ಲಾ, ಚಪ್ಪಲಿ ಕಳ್ಳ ನಾಯಿ! ಬಂತು ನೋಡಿ ಒಂದು ಕೋಲಿನಿಂದ ಸರಿಯಾಗಿ ಬಿಟ್ಟೆವು. ಅದೋ ಕುಯ್ಯೋ ಮರ್ರೋ ಎನ್ನುತ್ತಾ ಓಡಿಹೋಯ್ತು. ಅದೆಲ್ಲಾ ಸರಿ, ಆ ನಾಯಿ ಬರೇ ಬಲಗಾಲಿನ ಚಪ್ಪಲಿಯನ್ನೇ ಹೊತ್ತೊಯ್ದದ್ದು ಯಾಕೆಂದು ತಿಳಿಯಲಿಲ್ಲ! ಇದೀಗದು ಬಾರಿ ಎಕ್ಕಡಗಳ ಸಹವಾಸಕ್ಕೆ ಹೋಗದೆ, "ಬಡವಾ ನೀನು ಮಡಗಿದಂಗಿರು"ಎನ್ನುವಂತೆ ಸಾಮಾನ್ಯ ಬೆಲೆಯ ಪಾದರಕ್ಷೆಗಳನ್ನು ಕೊಂಡು ಧರಿಸಿ, ಚಪ್ಪಲಿಯ ಚಿಂತೆಯಿಂದ ಪಾರಾಗಿದ್ದೇನೆ. ನಾಯಿಪಾಲು ಮಾಡಿಬಿಟ್ಟೀರಾ ಪಾದುಕೆಗಳನ್ನು ನನ್ನಂತೆ ಜೋಕೆ! ಪಾದರಕ್ಷೆಗಳಿಗೆ ಕೊಡಿ ರಕ್ಷೆ!! ■

# ಶೋಕಾಚರಣೆ

**ಸುಮಾ ರಮೇಶ್, ಹಾಸನ.**

ತೊಂಬತ್ತರ ದಶಕದ ಆರಂಭದ ದಿನಗಳವು. ಪದವಿಯ ಮೊದಲನೇ ವರ್ಷದಲ್ಲಿದ್ದೆವು. ಪ್ರತಿದಿನ ಕಾಲೇಜಿಗೆ ಕಾಳಜಿಯಿಂದ ಸಿಂಗರಿಸಿಕೊಂಡು ಹೋಗುವುದೇ ನಮಗೊಂದು ಸಂಭ್ರಮ. ಅಂದೂ ಹಾಗೆಯೇ ಖುಷಿಯಿಂದಲೇ ಕಾಲೇಜಿನ ಆವರಣ ಪ್ರವೇಶಿಸಿದಾಗ ಅದಾಗಲೇ ಕೆಲವು ವಿದ್ಯಾರ್ಥಿನಿಯರು ಕಾರಿಡಾರ್ ನಲ್ಲಿ ಅಡ್ಡಾಡುತ್ತಾ ತಮ್ಮ ಚೆಲುವನ್ನು ಪ್ರದರ್ಶಿಸಲು ಪೈಪೋಟಿಗಿಳಿದಿದ್ದರು.

ಆಫೀಸ್ ರೂಮ್ ನಿಂದ ಥಟ್ಟನೆ ಆತಂಕದಿಂದ ಹೊರಬಂದ ಅಟೆಂಡರ್ 'ಎಲ್ಲರೂ ಆಡಿಟೋರಿಯಂನಲ್ಲಿ ಅಸೆಂಬಲ್ ಆಗ್ಬೇಕಂತೆ ' ಎಂಬ ಸಂದೇಶ ರವಾನಿಸಿದ. ವಿಷಯ ಕ್ಯಾಂಪಸ್ ತುಂಬಾ ಹರಿದಾಡಿತು. ಕಾಲೇಜಿಗೆ ಬಂದರೂ ಕ್ಲಾಸ್ ರೂಮಿಗೆ ಬರುವ ಆಸಕ್ತಿ ಇಲ್ಲದೆ ಸುತ್ತಲಿನ ಆವರಣದಲ್ಲಿ ಸುತ್ತುತ್ತಾ ಕಾಲಹರಣ ಮಾಡುತ್ತಿದ್ದವರು, ಅಡ್ಡಾದಲ್ಲಿ ಅಡ್ಡಾದಿಡ್ಡಿ ಕುಳಿತು ಯಾವುದೋ ಮೂವಿಯ ಹೀರೋ ಬಗ್ಗೆ ಕನಸುತ್ತಿದ್ದವರು, ಅತ್ತಿತ್ತ ನೋಡುತ್ತಾ ತಮ್ಮ ಅಂದಿನ ಅಲಂಕಾರಕ್ಕೆ ಪ್ರಶಂಸೆಯ ನಿರೀಕ್ಷೆಯಲ್ಲಿದ್ದವರು.... ಹೀಗೆ ಎಲ್ಲರೂ ಕುತೂಹಲದಿಂದ ಸಭಾಂಗಣದಲ್ಲಿ ಸೇರಿದರು.

ಪ್ರಾಂಶುಪಾಲರು ವೇದಿಕೆ ಏರಿ ನಿಂತಿದ್ದರು. ಅವರ ಮುಖ ಗಂಭೀರವಾಗಿತ್ತು. ವಿದ್ಯಾರ್ಥಿಗಳೆಡೆಗೆ ವಿಷಾದದ ನೋಟ ಬೀರಿ ಅಂದು ಮುಂಜಾನೆ ಕಾಲೇಜಿನ ಸಂಸ್ಥಾಪಕರು ನಿಧನರಾದ ವಿಷಯ ತಿಳಿಸಿ ಎಲ್ಲರೂ ಎರಡು ನಿಮಿಷಗಳ ಕಾಲ ಮೌನವಾಗಿ ನಿಂತು ಶೋಕಾಚರಣೆ ಮಾಡಲು ಕೋರಿದರು. ಸಂಸ್ಥಾಪಕರನ್ನು ನೋಡಿರದ, ಅವರ ಬಗ್ಗೆ ಹೆಚ್ಚಿನ ವಿವರ ತಿಳಿಯದ ವಿದ್ಯಾರ್ಥಿಗಳ ಮನದಲ್ಲಿ ಸಂತಾಪ ಮೂಡಲಿಲ್ಲ. ಬದಲಿಗೆ ಕಾಲೇಜಿಗೆ ರಜೆ ದೊರೆಯುವ ಖುಷಿಗೆ ಎಲ್ಲರ ಮೊಗದಲ್ಲೂ ಹಂಡ್ರೆಡ್ ವ್ಯಾಟ್ಸ್ ಬಲ್ಬ್ ಪಕ್ಕನೆ ಮಿನುಗಿತು. ಶೋಕಾಚರಣೆಯ ಬೆಲ್ ರಿಂಗ್ ಆದ ಕೂಡಲೇ ಎಲ್ಲರೂ ಮೌನವಾಗಿ ನಿಂತೆವು. ಮೃತರ ಆತ್ಮಕ್ಕೆ ಶಾಂತಿ ಕೋರುವ ವಿಷಯ ಬದಿಗಿರಿಸಿ ಅದಾಗಲೇ ನಮ್ಮ ತಲೆಯಲ್ಲಿ ರಜೆಯ ಸದುಪಯೋಗದ ಬಗ್ಗೆ ಬ್ಲೂಪ್ರಿಂಟ್ ಸಿದ್ಧವಾಗುತ್ತಿತ್ತು. ಮೂವಿ, ಹೋಟೆಲ್, ಲಾಂಗ್ ಡ್ರೈವ್, ಶಾಪಿಂಗ್ ಹೀಗೆ ಅಕ್ಕ ಪಕ್ಕದ ಗೆಳತಿಯರೊಂದಿಗೆ ಕಣ್ಣು ಕಿವಿ ಹುಬ್ಬು ಕೈಬೆರಳುಗಳ ಮುಖೇನ ಸಂದೇಶಗಳು ಹರಿದಾಡಿದವು. ಈ ಮಧ್ಯೆ ಅಲ್ಲಲ್ಲಿ ಮೆಲುನಗು, ಹುಸಿ ನಗು ಅಲೆಯಾಡಿ ನಮ್ಮೆಡೆಗೆ ನೋಟ ಹರಿಸಿದ ಪ್ರಾಂಶುಪಾಲರ ಪಿತ್ತ ನೆತ್ತಿಗೇರಿತು. ಆ ಕ್ಷಣ ಅದನ್ನು ಬರ್ಸ್ಟ್ ಔಟ್ ಮಾಡಲಾಗದೆ ಅವರ ಉಸಿರಾಟದ ವೇಗ ಹೆಚ್ಚಿ ಎದುರಿಗಿದ್ದ ಮೈಕ್ ನಿಂದ ಲಯಬದ್ಧವಾಗಿ ಸರ್...ಬರ್... ಎಂದು ಧ್ವನಿಸತೊಡಗಿದಾಗ ಎಲ್ಲರಿಗೂ ಮೋಜೆನಿಸಿ ಪಕ್ಕನೆ ನಗುವಿನ ಅಲೆ ಎದ್ದಿತು. ಅವರ ಕೋಪದ ಗ್ರ್ಯಾವಿಟಿ ಘನವಾಯಿತು. ಶೋಕಾಚರಣೆಯ ಸಮಯವಿನ್ನೂ ಪ್ರೋಗ್ರೆಸ್ ನಲ್ಲಿದ್ದರಿಂದ ಕಣ್ಣಿನಲ್ಲೇ ಕಿಡಿ ಕಾರಿದರು. ಉಚ್ವಾಸ ನಿಶ್ವಾಸಗಳ ಏರಿಳಿತ ಮತ್ತಷ್ಟು ಬಿರುಸು ಪಡೆದುಕೊಂಡು ಆ ವಿಚಿತ್ರ ಸದ್ದಿಗೆ ವಿದ್ಯಾರ್ಥಿಗಳ ನಗು ತಾರಕಕ್ಕೇರಿತು. ಮೊದಲ ಬಾರಿಗೆ ಎರಡು ನಿಮಿಷದ ಸಮಯ ಅದೆಷ್ಟು ಸುದೀರ್ಘ ಎನಿಸಿತು.

ಶೋಕಾಚರಣೆಯ ಅವಧಿ ಮುಗಿಯುವಷ್ಟರಲ್ಲಿ ಪ್ರಾಂಶುಪಾಲರ ದೇಹವಿಡೀ ಕೋಪದಿಂದ ಕಂಪಿಸುತ್ತಿತ್ತು. ಅದನ್ನು ಹೊರಹಾಕಲು ತಕ್ಕ ಬೈಗುಳಕ್ಕಾಗಿ ಅಷ್ಟು ವರ್ಷಗಳ ಕಾಲ ಸಂಚಯಿಸಿಕೊಂಡಿದ್ದ ಪದಕೋಶವನ್ನೆಲ್ಲಾ ತಡಕಾಡಿದರು. ತಕ್ಷಣಕ್ಕೆ ಅಂತಹ ಯಾವ ತೀಕ್ಷ್ಣ ಪದವೂ ಹೊಳೆಯದೆ ಕೆಂಗಣ್ಣು ಬೀರುತ್ತಾ ಇನ್ನೂ ತಹಬಂದಿಗೆ

ಬಾರದ ಉಸಿರಾಟ ಹಾಗು ಬಿಪಿಯನ್ನು ಸಂಬಾಳಿಸುವಷ್ಟರಲ್ಲಿ ವಿದ್ಯಾರ್ಥಿಗಳು ಚದುರಿ ಹೋಗಿದ್ದರು. ಶೋಕಾಚರಣೆ ಸಭೆ ಬರಿದೇ showಕಾಚರಣೆಯೊಂದಿಗೆ ಸಮಾರೋಪಗೊಂಡಿತ್ತು.

ಇಂದೂ ಕೂಡಾ ಹೀಗೆಯೇ ಹಲವು ಸಮಾರಂಭಗಳು, ಸಂಭ್ರಮಾಚರಣೆಗಳು, ಶೋಕಾಚರಣೆಗಳೆಲ್ಲಾ showಕ್ಕಾಚರಣೆ, ಶೋಕಿಯಾಚರಣೆಗಳಾಗಿವೆ. ಇದು ಹುಟ್ಟಿನ ಸಂಭ್ರಮದಿಂದ ಹಿಡಿದು ಸಾವೆಂಬ ಶೋಕದ ಸಂಗತಿಯವರೆಗೆ ಮುಂದುವರಿದಿದೆ. ಅಲಂಕೃತ ಶವದೊಂದಿಗೆ ಸೆಲ್ಫಿ ತೆಗೆದುಕೊಂಡು, ಅತ್ತು ಬೋರಿಡುವ ಎಮೋಜಿಯೊಂದಿಗೆ ರಿಪ್ ಎಂದು ಟೈಪಿಸಿ ಸೋಶಿಯಲ್ ಮೀಡಿಯಾಗೆ ಅಪ್ ಲೋಡ್ ಮಾಡುವ ಭೂಪರಿಗೇನು ಬರವಿಲ್ಲ.

ಒಡಲಲ್ಲಿ ಕಂದನನ್ನಿರಿಸಿಕೊಂಡ ಭಾವೀ ಅಮ್ಮಂದಿರು ಹಾಗು ಅವರ ಟಮ್ಮಿ ಬಂಪ್ ಹಿಡಿದ ಭಾವೀ ಅಪ್ಪಂದಿರ ಖಾಸಗಿ ಪಟಗಳು ಸೋಶಿಯಲ್ ಮೀಡಿಯಾ ತುಂಬಾ ಡಂಪ್ ಆಗಿರುತ್ತವೆ. ಅದನ್ನು ಕಂಡು ಬೆಚ್ಚಿ ಹಂಪ್‌ಗಳಲ್ಲಿ ಮುಗ್ಗರಿಸಿದವರಿಗೂ ಬರವಿಲ್ಲ. ವೃದ್ಧ ಪೋಷಕರೆಡೆಗೆ ತಿರುಗಿಯೂ ನೋಡದ, ಕುಂಟುತ್ತಾ ಸಾಗುವ ಅವರಿಗೆ ಊರುಗೋಲಾಗದ ಮಕ್ಕಳು ಸತ್ತ ನಂತರ ವೈಕುಂಠ ಸಮಾರಾಧನೆಯನ್ನು ಅದ್ದೂರಿಯಾಗಿ ಮಾಡಿ ಅಂತಸ್ತು ಮೆರೆಯುವುದಿದೆ.

Showಕ್ಕಾಚರಣೆಯಲ್ಲಿ ಫೋಟೋಗ್ರಾಫರ್‌ಗಳ ಪಾತ್ರ ಹಿರಿದು. ಅವರ ಸೂಚನೆಯಂತೆ ಮದುವೆ ನಿಶ್ಚಿತಾರ್ಥದ ಸಮಯ ವಧು ವರರ ಬೆರಳನ್ನು ಅಲಂಕರಿಸುವ ಉಂಗುರ ಸ್ಲೋ ಮೋಶನ್ ನಲ್ಲಿ ಒಂದೊಂದೇ ಅಂಗುಲ ಮೂವ್ ಆಗುತ್ತಾ ಅಂಗುಲಿಯ ಎಂಡ್ ಪಾಯಿಂಟ್ ರೀಚ್ ಆಗುವಷ್ಟರಲ್ಲಿ ತಾಸೊಂದು ಕಳೆದು ಹೋಗುವುದು. ಲ್ಯಾಂಡ್ ಆದ ಉಂಗುರ, ಹಾರಗಳ ಮೇಲೆ ಪುನಃ ಪುನಃ ಕೈ ಇರಿಸಿ ಕ್ಲಿಕ್ ಕ್ಲಿಕ್ ಗೈಯ್ಯುವಾಗ ತಾಳ್ಮೆ ಕಳೆದುಕೊಳ್ಳುವ ಅತಿಥಿಗಳು ಉಂಗುರದ ಗುಂಗಿನಿಂದ ಹೊರಬಂದು ಉದರ ಪೋಷಣೆಯೆಡೆಗೆ ಗಮನ ಕೊಡುವರು.

ಮದುವೆಗಳಲ್ಲಿ ಗಟ್ಟಿ ಮೇಳದೊಂದಿಗೆ ಬೆಸೆಯುವ ಮೂರು ಗಂಟಿನ ನಂಟು ಪುರೋಹಿತರಿಗಿಂತ ಫೋಟೋಗ್ರಾಫರ್ ಮಾರ್ಗದರ್ಶನದಲ್ಲಿ ನಡೆಯುವುದೇ ಹೆಚ್ಚು. ವಧು–ವರ, ಪುರೋಹಿತರಾದಿಯಾಗಿ ಎಲ್ಲರ ನೋಟವೂ ಕ್ಯಾಮೆರಾದೆಡೆಗೇ.... ಮಂತ್ರ ಪಠಣಕ್ಕಿಂತ ಕ್ಯಾಮೆರಾ ಕಣ್ಣಿನ ಆದೇಶವೇ ಅಧಿಕ. ನಂತರ ಆರತಕ್ಷತೆಗೆ ನವ ವಿವಾಹಿತ ಜೋಡಿ ವೇದಿಕೆ ಏರಿದರೆ, ಫ್ಲೋರಿಸ್ಟ್‌ಗಳು ದೇವಲೋಕದ ಕಲ್ಪನೆಯ ಸಾಕ್ಷಾತ್ಕರಿಸಲು ಬಿಸಿನೀರಿನ ಮಡಿಕೆಗೆ ಮಂಜುಗಡ್ಡೆ ಸುರಿದು ಮಿಸ್ಟ್ ಎಬ್ಬಿಸಿ ಮಿಸ್ಟರಿ ಕ್ರಿಯೇಟ್ ಮಾಡಿಬಿಡುವರು. ವಧು–ವರರು ಹೊರಡುವ ಸಮಯ ಕನ್ಯಾದಾನ ಮಾಡಿದವರು ಕಣ್ತುಂಬಿಕೊಳ್ಳುವುದರೊಂದಿಗೆ ಸಂಭ್ರಮಾಚರಣೆ, ಶೋಕಾಚರಣೆಯ ಮೋಡ್ ಗೆ ಟ್ಯೂನ್ ಆಗಿಬಿಡುವುದು. ಮೇಕಪ್ ಕೆಡದಂತೆ, ಕಂಬನಿ ಕೆಳಜಾರದಂತೆ ಟಿಶ್ಯೂ ಒತ್ತುತ್ತಾ ಶೋಕಿಯಾಗಿ showಕಾಚರಣೆ ಮಾಡುವ ಮುಖಗಳು ಅಷ್ಟೇ ಸುಂದರವಾಗಿ ಕ್ಯಾಮೆರಾದಲ್ಲಿ ಸೆರೆಯಾಗುವವು.

ರಾಜಕೀಯ ಕ್ಷೇತ್ರದಲ್ಲಿ Showಕಾಚರಣೆಯ ಪ್ರಮಾಣ ತುಸು ಹೆಚ್ಚೇ ಎನ್ನಬಹುದು. ಮುಖಂಡರು, ಹುರಿಯಾಳುಗಳು ಚುನಾವಣೆಗೆ ಮುನ್ನ ಮತದಾರರೆದುರು ಕಣ್ಣೀರಿನ ಸ್ಟ್ರಾಟಜಿ ಗೇಮ್ ಪ್ಲೇ ಮಾಡುವರು. ಯುವ ಅಭ್ಯರ್ಥಿಗಳು ಅವಕಾಶಕ್ಕಾಗಿ ಕಣ್ಣೀರ್ಗರೆದು ಮತದಾರರ ಮನವೊಲಿಸಲು ಯತ್ನಿಸಿದರೆ, ಮಹಿಳೆಯರು ಸೆರಗೊಡ್ಡಿ ಬೇಡಿ ಎಮೋಷನಲ್ ಆಗಿ ಕದಲಿಸಿಬಿಡುವರು. ವೃದ್ಧ ಅಭ್ಯರ್ಥಿಗಳು ತಮ್ಮೆಲ್ಲರ ಸೇ(ಶೇ)ವೆಗೆ ಕೊನೆಯ

ಅವಕಾಶ ಕೊಡಿ ಎಂದು ಮೈಕಿನೆದುರು ಮೊಸಳೆ ಕಣ್ಣೀರ ಧಾರೆಯನ್ನೇ ಹರಿಸುವರು. ಅವರ ಚೇಲಾಗಳು ಸ್ಥಳದಲ್ಲೇ ಟಿಶ್ಯೂ ಭಾಗ್ಯ ಕಲ್ಪಿಸಿ ಸ್ವಾಮಿ ನಿಷ್ಠೆ ತೋರುವರು.

ಹವಾಮಾನ ವೈಪರೀತ್ಯ, ಅಪಘಾತ, ಅನಾಹುತಗಳು ಸಂಭವಿಸಿದಾಗ ರಾಜಕೀಯ ಧುರೀಣರು ತಮ್ಮ ಪಟಾಲಂಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತರೊಂದಿಗೆ ಕ್ಯಾಮರಾಗೆ ಪೋಸ್ ಕೊಡುತ್ತಾ ಹುಸಿ ಸಂತಾಪ ತೋರಿ ಪ್ರಕರಣಕ್ಕೆ ಜಾತಿ, ಮತ, ಧರ್ಮ, ಲಿಂಗದಂತಹ ಸೂಕ್ಷ್ಮ ಅಂಶಗಳ ಮುಖೇನ ಬಣ್ಣ, ಫ್ಲೇವರ್ ಬೆರೆಸಿ ತಮ್ಮ ಬಣಕ್ಕೆ ಫೇವರ್ ಆಗುವಂತೆ ತಿರುಚುವ ಕಸರತ್ತು ನಡೆಸುವರು.

ಸಾಹಿತ್ಯ ಕಾರ್ಯಕ್ರಮಗಳಲ್ಲಿ Showಕಾಚರಣೆಗೆ ಅವಕಾಶ ತುಸು ಕಡಿಮೆ. ಬಣಗುಡುವ ಸಭಾಂಗಣದಲ್ಲಿ ಖಾಲಿ ಆಸನಗಳು ಆಕಳಿಸುತ್ತಾ ಮಂಕಾಗಿದ್ದರೆ, ಅಲ್ಲಲ್ಲಿ ಕುಳಿತ ಬಂಧು ಬಾಂಧವರು ಭಾಷಣ ರುಚಿಸದೆ ಅತ್ತಿತ್ತ ನೋಡುತ್ತಾ ಬಂದ ತಪ್ಪಿಗೆ ಶೋಕಿಸುತ್ತಾ ಕಳಚಿಕೊಳ್ಳುವ ಮಾರ್ಗವನ್ನು ಶೋಧಿಸುವರು.

ಶ್ರಾವಣ ಮಾಸದ ಎರಡನೇ ಶುಕ್ರವಾರದಂದು ಭೂಲೋಕಕ್ಕೆ ಬಂದು ಬೆರಳೆಣಿಕೆಯಷ್ಟು ಮನೆಗಳಲ್ಲಿ ಸರಳ ಸಿಂಗಾರದ ಷೋಡಶೋಪಚಾರ ಸೇವೆ ಸ್ವೀಕರಿಸಿ ಸಂತುಷ್ಟಳಾಗುತ್ತಿದ್ದ ವರಮಹಾಲಕ್ಷ್ಮಿ ಇಂದು ಫುಲ್ ಕನ್ಫ್ಯೂಷನ್‌ನಲ್ಲಿರುವಳು. ಮನೆಮನೆಗಳಲ್ಲಿ ದೇವಲೋಕದ ಶಿಲ್ಪಿ ಮಯನ ಕೈಚಳಕದ ಇಂದ್ರಪ್ರಸ್ಥವನ್ನೇ ಮಂಕಾಗಿಸುವಂತಹ ವೈಭವೋಪೇತ ಅಲಂಕಾರ, ನೋಟಿನ ಹಾರ, ಒಡವೆ ವಸ್ತ್ರ, ಫಲಪುಷ್ಪಗಳಿಂದ ತನ್ನನ್ನು ಸಿಂಗರಿಸಿ ಪ್ರಾರ್ಥನೆಗಿಂತಲೂ ಪ್ರದರ್ಶನದ ಮೋಡಿಗೆ ಸಿಲುಕಿ ಸಡಗರಿಸುವ ಭಕ್ತ ಗಡಣವನ್ನು ಕಂಡು ಆಕೆ ಕನಿಕರಿಸುವಳು.

ಹೀಗೆ ಇಂದು ಶೋಕಾಚರಣೆ, ಸಂಭ್ರಮಾಚರಣೆಗಳೆಲ್ಲಾ Showಕ್ಕಾಚರಣೆಗಳಾಗಿ ಅದರ ಹಿಂದಿನ ಆಚಾರ ವಿಚಾರಗಳನ್ನು ಶೂನ್ಯವಾಗಿಸುತ್ತಿರುವುದು ನಿಜಕ್ಕೂ ಶೋಚನೀಯ! ■

**ಚತುರ ಸೊಸೆ..**

**–ವಿ.ವಿಜಯೇಂದ್ರ ರಾವ್**

ರಾಜಕೀಯ ವಾತಾವರಣದ ಕುಟುಂಬಕ್ಕೆ ಹೊಸದಾಗಿ ಮದುವೆಯಾಗಿ ಹೋದ ನೂತನ ಸೊಸೆಗೆ ತನ್ನ ಪರಿವಾರದವರನ್ನು ಪರಿಚಯಿಸುತ್ತಾ ಗಟವಾಣಿ ಅತ್ತೆಯು ಹೇಳಿದಳು.... ಈ ಕುಟುಂಬಕ್ಕೆ ಕೆಲವೊಂದು ರೀತಿ ರಿವಾಜು ಇದೆಯಮ್ಮ. ಈ ಕುಟುಂಬವು ಒಂದು ಮಂತ್ರಿ ಮಂಡಲ ಇದ್ದಂತೆ. ಈ ಮನೆಗೆ "ಮುಖ್ಯಮಂತ್ರಿ" ನಿನ್ನ ಮಾವನವರು. ಅವರು ರಕ್ಷಣಾ ಖಾತೆ ಮತ್ತು ವಿದೇಶಾಂಗ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಇಲ್ಲಿ ನಾನೇ ಉಪ ಮುಖ್ಯಮಂತ್ರಿ. ನಾನು ಗೃಹ ಖಾತೆ, ನ್ಯಾಯಾಂಗ ಖಾತೆ, ಜವುಳಿ ಖಾತೆ, ಮುಂತಾದವನ್ನು ನೋಡಿಕೊಳ್ಳುತ್ತೇನೆ ಎಂದರು.

ಇನ್ನೂ ನಿನ್ನ ಗಂಡ ಬಂದು, ಕೈಗಾರಿಕಾ ಖಾತೆ, ಸಾರಿಗೆ ಖಾತೆ, ವಸತಿ ಖಾತೆ ಮುಂತಾದವನ್ನು ಗಮನಿಸುತ್ತಾನೆ. ನನ್ನ ಇನ್ನೊಬ್ಬ ಮಗ, ಅಂದರೆ ನಿನ್ನ ಮೈದುನ ಹೊಸ ಯೋಜನೆಗಳ ಅನುಷ್ಠಾನದ ಖಾತೆ, ಕ್ರೀಡಾ ಖಾತೆ ನೋಡಿಕೊಳ್ಳುತ್ತಾನೆ. ಇನ್ನು ನೀನು...ಯಾವ ಖಾತೆ ನೋಡಿಕೊಳ್ಳುತ್ತೀಯಾ ಅಂದರೆ...ಆಹಾರ ಮತ್ತು ಕುಟುಂಬ ಯೋಜನೆ ಖಾತೆ. ಇದು ನಿನಗೆ ಒಪ್ಪಿಗೆ ತಾನೇ ಎಂದು ಕೇಳಿದಾಗ....ಚಾಲಾಕಿ ಸೊಸೆ ಹೇಳಿದಳು....ಅಯ್ಯೋ ಅತ್ತೆ, ನನಗೆ ಈ ಖಾತೆಗಳನ್ನು ನಿಭಾಯಿಸುವ ಹಿರಿಯ ಜವಾಬ್ದಾರಿ ಎಲ್ಲಾ ಯಾಕೆ ? ನೀವುಗಳೇ ಎಲ್ಲಾ ಖಾತೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೀರೆಂಬ ನಂಬಿಕೆ ನನಗಿದೆ . ನಾನು "ವಿರೋಧ ಪಕ್ಷದ ನಾಯಕಿ" ಯಾಗಿ ಇರುತ್ತೇನೆ. ಅಕಸ್ಮಾತ್ ನೀವುಗಳು ಏನಾದರೂ ತಪ್ಪು ಮಾಡಿದರೆ... ಆಗ ತಾನೇ ನಾನು ನಿಮ್ಮ ಮೇಲೆ ಕೂಗಾಡಿ, ತರಾಟೆಗೆ ತೆಗೆದುಕೊಂಡು, ಸಭಾ ತ್ಯಾಗ ಮಾಡಿ ಆಚೆ ಹೋಗ್ತಾ ಇರಬಹುದು ಎಂದಾಗ......, ಅತ್ತೆಯು ವಿಧಿಯಿಲ್ಲದೆ ತೆಪ್ಪಗೆ ತಲೆಯಾಡಿಸಿದ್ದನ್ನು ನೋಡಿದ ಸೊಸೆಯು ಮನಸ್ಸಿನಲ್ಲೇ ಯಾರ ಹತ್ತಿರ ಈ ಜೋರೆಲ್ಲಾ, ನನ್ನ ಹತ್ತಿರ ನಿಮ್ಮ ಬೇಳೆ ಬೇಯುವುದಿಲ್ಲಾ ಅಂದ್ಕೊಂಡು ಮುಗುಳ್ನಕ್ಕಳು.......!